ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 2 ಬುಧವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 76 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ರಾಜ್ಯದ ಸಚಿವರು ಸ್ವಾರ್ಥಿಗಳು!

• ಪ್ರಸ್ತುತ ರಾಜಕಾರಣದಿಂದ ಬೇಸತ್ತಿದ್ದೇನೆ: ಮತ್ತೆ ಸ್ಪರ್ಧೆ ಮಾಡಲ್ಲ; ಬಿ.ಆರ್.ಪಾಟೀಲ್
• ಮಾಜಿ ಸ್ಪೀಕರ್ ಕೃಷ್ಣ ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ಸ್ವಪಕ್ಷದ ವಿರುದ್ಧ ಮತ್ತೆ ಗುಡುಗು

ಕೆ.ಆರ್.ಪೇಟೆ, ಜು.1(ಶ್ರೀನಿವಾಸ್)– ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಕೆಲವು ಸಚಿವರು ಸ್ವಾರ್ಥ ಸಾಧನೆಯಲ್ಲಿ ತೊಡಗಿದ್ದು, ನಾನು ನನ್ನ ಭಾವನೆಗಳನ್ನು ನೇರವಾಗಿ, ಯಾವುದೇ ಮುಚ್ಚುಮರೆ ಇಲ್ಲದೆ ಹೇಳಿದ್ದೇನೆ. ಇದೇ ಮಾತನ್ನು ನಿನ್ನೆ ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರಿಗೂ ತಿಳಿಸಿದ್ದೇನೆ ಎಂದು ಸ್ವಪಕ್ಷದ ವಿರುದ್ಧವೇ ಆಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್ ಗುಡುಗಿದರು.



ಕೆ.ಆರ್.ಪೇಟೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಬಿ.ಆರ್.ಪಾಟೀಲ್ ಮಾತನಾಡಿದರು.

ಮಂಗಳವಾರ ಕೆ.ಆರ್.ಪೇಟೆ ಕೃಷ್ಣ ಪ್ರತಿಷ್ಠಾನದ ವತಿಯಿಂದ ಕೃಷ್ಣ ಅವರ 85ನೇ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಖಾಸಗಿ ಹಾಲ್‌ನಲ್ಲಿ ನಾಡಿನ ವಿವಿಧ ಸಾಧಕರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮ ಹಾಗೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಕೃಷ್ಣ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನೂರಾರು ಕೋಟಿಯನ್ನು ನೀರಿನಂತೆ ಖರ್ಚು ಮಾಡಿ ಶಾಸಕರಾಗಿ ಆಯ್ಕೆಯಾಗಲು ನನ್ನಂಥವರಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಇನ್ನು ಮುಂದೆ ಶಾಸಕ ಸ್ಥಾನಕ್ಕೆ ಸ್ಪರ್ಧೆ ಮಾಡದಿರಲು ನಿರ್ಧರಿಸಿದ್ದೇನೆ. ನನ್ನ ಮನಸ್ಸಿನ ಭಾವನೆಗಳನ್ನು ಮುಕ್ತವಾಗಿ ಜನರ ಮುಂದೆ ಹೇಳಿಕೊಂಡಿದ್ದೇನೆ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ ಎಂದು ಪ್ರಸ್ತುತ ರಾಜಕೀಯ ವ್ಯವಸ್ಥೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ರಿಯಲ್ ಎಸ್ಟೇಟ್ ಕುಳಗಳು, ಶ್ರೀಮಂತರು ಹಾಗೂ ಗಣಿ ಧಣಿಗಳು ಸೇರಿದಂತೆ ಪಟ್ಟಭದ್ರ ಹಿತಾಸಕ್ತಿಗಳನ್ನು ಓಲೈಕೆ ಮಾಡುತ್ತಾ, ಹಣಬಲ ಹಾಗೂ ತೋಳ್ಬಲದಿಂದ ಅಧಿಕಾರ ಹಿಡಿಯಲು ರಹದಾರಿ ನೀಡುತ್ತಿವೆ. ಇಂದಿನ ರಾಜಕಾರಣಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ತತ್ವ ಸಿದ್ಧಾಂತಗಳು ಕಣ್ಮರೆಯಾಗುತ್ತಿವೆ. ಇದೇ ಪರಿಸ್ಥಿತಿ ಮುಂದುವರೆದರೆ ಬಡವರು ಹಾಗೂ ಮಧ್ಯಮ ವರ್ಗದ ಜನರು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಬೇಕೆಂದು ಆಸೆ ಪಟ್ಟವರು ಶಾಸನ ಸಭೆ ಪ್ರವೇಶಿಸಿ, ಶಾಸಕರಾಗುವುದಿರಲಿ, ಕೊನೆಗೆ ಗ್ರಾಪಂ ಸದಸ್ಯರಾಗಲು ಸಹ ಸಾಧ್ಯವಾಗುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ರಾಜಕಾರಣಿಗಳಿಗೆ ಕೃಷ್ಣ ಮಾದರಿ: ತಮ್ಮ 40 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಕಪ್ಪು ಚುಕ್ಕೆ ಇಲ್ಲದಂತೆ ಸರಳವಾಗಿ ಶಿಸ್ತು ಬದ್ಧ ಜೀವನ ನಡೆಸಿ, ಪ್ರಸ್ತುತ ರಾಜಕಾರಣಿಗಳಿಗೆ ■6ನೇ ಪುಟಕ್ಕೆ

ಸಿದ್ರಾಮಯ್ಯ ಲಾಟ್ರಿ ಹೊಡೆದು ಬಿಟ್ಟ... ಅವನ ಗ್ರಹಚಾರ ಚೆನ್ನಾಗಿತ್ತು, ಸಿಎಂ ಆಗ್ಬಿಟ್ಟ...!

ಕೆ.ಆರ್.ಪೇಟೆ ಐಬಿಯಲ್ಲಿ ಬೆಂಬಲಿಗನೊಂದಿಗೆ ಮೊಬೈಲ್‌ನಲ್ಲಿ ಬಿ.ಆರ್.ಪಾಟೀಲ್ ಲೋಕಾಭಿರಾಮ ಮಾತು ವೈರಲ್

ಕೆ.ಆರ್.ಪೇಟೆ, ಜು.1– ಕಳೆದೊಂದು ವಾರದ ಹಿಂದೆ ವಸತಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ತಮ್ಮ ಸರ್ಕಾರದ ವಿರುದ್ಧವೇ ಆರ್ಭಟಿಸಿ, ರಾಜ್ಯ ರಾಜಕಾರಣದಲ್ಲಿ ಸಂಚಲನ ಎಬ್ಬಿಸಿದ್ದ ಹಿರಿಯ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್, ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯ ಐಬಿಯಲ್ಲಿ ಯಾರೊಟ್ಟಿಗೂ ಮೊಬೈಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಖಾರವಾಗಿ ಮಾತನಾಡುವ ವೀಡಿಯೋ ವೈರಲ್ ಆಗಿದೆ.

'ಸಿದ್ರಾಮಯ್ಯ ಲಾಟ್ರಿ ಹೊಡೆದು ಬಿಟ್ಟ... ಅವನ ಗ್ರಹಚಾರ ಚೆನ್ನಾಗಿತ್ತು, ಸಿಎಂ ಆಗ್ಬಿಟ್ಟ' ಎಂದು ಹಿರಿಯ ಶಾಸಕ ಬಿ.ಆರ್ ಪಾಟೀಲ್ ಹೇಳಿರುವ ವಿಡಿಯೋವೊಂದು ಇದೀಗ ಸಂಚಲನ ಮೂಡಿಸಿದೆ. ಮಾಜಿ ಸ್ಪೀಕರ್ ಕೃಷ್ಣ ಅವರ 85ನೇ ಹುಟ್ಟುಹಬ್ಬದ ಪ್ರಯುಕ್ತ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಕೆ.ಆರ್.ಪೇಟೆಗೆ ಆಗಮಿಸಿದ ಪಾಟೀಲ್ ಅವರು ವಿಶ್ರಾಂತಿಗಾಗಿ ಪ್ರವಾಸಿ ಮಂದಿರಕ್ಕೆ ಆಗಮಿಸಿದರು. ಆ ವೇಳೆ ಪಾಟೀಲರನ್ನು ಸುದ್ದಿಗಾರರು ಮಾತನಾಡಿಸುವ ಮುನ್ನ ಮೊಬೈಲ್‌ನಲ್ಲಿ ಬೆಂಬಲಿಗನೊಂದಿಗೆ ಮಾತನಾಡುವ ವೀಡಿಯೋ ವೈರಲ್ ಆಗಿದೆ.

ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರಿದ 8 ಶಾಸಕರಲ್ಲಿ ನಾನೂ ಒಬ್ಬ. ■6ನೇ ಪುಟಕ್ಕೆ

'ಹೌದು, ನಾನು ಲಕ್ಕಿ, ಅದಕ್ಕೆ ಸಿಎಂ ಆಗಿದ್ದೇನೆ'...

ಬೆಂಗಳೂರು, ಜು.1– 'ಹೌದು, ನಾನು ಲಕ್ಕಿ, ಅದಕ್ಕೆ ಸಿಎಂ ಆಗಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಹೇಳಿದ್ದಾರೆ.



ಸಿದ್ದರಾಮಯ್ಯ ಲಕ್ಕಿ ಲಾಟರಿ ಹೊಡೆದುಬಿಟ್ಟ, ಅವನ ಗ್ರಹಚಾರ ಚೆನ್ನಾಗಿತ್ತು, ಅದಕ್ಕೆ ಸಿಎಂ ಆಗಿ ಬಿಟ್ಟ ಎಂದು ಹಿರಿಯ ಕಾಂಗ್ರೆಸ್ ಶಾಸಕ ಬಿ.ಆರ್ ಪಾಟೀಲ್ ಅವರು ಹೇಳಿರುವ ವಿಡಿಯೋವೊಂದು ವೈರಲ್ ಆಗಿದ್ದು, ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ.

ಆಳಂದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಹೌದು, ನಾನು ಅದೃಷ್ಟಶಾಲಿ. ಅದಕ್ಕಾಗಿಯೇ ನಾನು ಮುಖ್ಯಮಂತ್ರಿಯಾದೆ. ನಾನು ಅವರು ಒಟ್ಟಿಗೆ ಶಾಸಕರಾಗಿದ್ದು ಅದಕ್ಕೆ ಹೇಳಿರಬಹುದು. ಅದಕ್ಕೆ ನಾನು ಏನು ಮಾಡಲಿ. ಈ ಬಗ್ಗೆ ಬಿ.ಆರ್.ಪಾಟೀಲ್ ಕರೆಸಿ ಮಾತಾಡುತ್ತೇನೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಡಿ.ಕೆ.ಶಿವಕುಮಾರ್ ಪರ ನೂರು ಶಾಸಕರಿದ್ದಾರೆ

ಶಾಸಕ ಇಕ್ಬಾಲ್ ಹುಸೇನ್‌ಗೆ ಶೋಕಾಸ್ ನೋಟಿಸ್

ಬೆಂಗಳೂರು, ಜು.1– ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಪರವಾಗಿ 100 ಶಾಸಕರು ಸಿಎಂ ಬದಲಾವಣೆ ಬಯಸಿದ್ದಾರೆ ಎಂದು ಹೇಳಿದ್ದ ರಾಮನಗರ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಮಂಗಳವಾರ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ.




ಇಕ್ಬಾಲ್ ಹುಸೇನ್

ಮುಖ್ಯಮಂತ್ರಿ ಬದಲಾವಣೆ ಕುರಿತು ಹೇಳಿಕೆ ನೀಡಿದ ಇಕ್ಬಾಲ್ ಹುಸೇನ್‌ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಕಾರಣ ಕೇಳಿ ನೋಟಿಸ್ ನೀಡಿದ್ದು, ಒಂದು ವಾರದ ಒಳಗಾಗಿ ತಮ್ಮ ಹೇಳಿಕೆಗಳ ಬಗ್ಗೆ ಸಮಜಾಯಿಷಿ ನೀಡುವಂತೆ ಸೂಚಿಸಿದ್ದಾರೆ. ಇಂದು ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಪಕ್ಷದಲ್ಲಿ ಗೊಂದಲ ಹಾಗೂ ಮುಜುಗರ ■6ನೇ ಪುಟಕ್ಕೆ

ವಾಲ್ಮೀಕಿ ಹಗರಣ
ಸಿಬಿಐನಿಂದ ಸಮಗ್ರ ತನಿಖೆಗೆ ಹೈಕೋರ್ಟ್ ಆದೇಶ

ಬೆಂಗಳೂರು, ಜು.1– ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಅಕ್ರಮ ಹಣ ವರ್ಗಾವಣೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿ ಹೈಕೋರ್ಟ್ ಮಂಗಳವಾರ ಮಹತ್ವದ ಆದೇಶ ನೀಡಿದೆ. ಹೈಕೋರ್ಟ್‌ನ ಈ ಆದೇಶದಿಂದ ರಾಜ್ಯ ಸರ್ಕಾರಕ್ಕೆ ಭಾರಿ ಹಿನ್ನಡೆಯಾಗಿದೆ.



ಸಿಬಿಐ ಈವರೆಗೆ ಬ್ಯಾಂಕ್ ವಿಚಾರಕ್ಕೆ ಸೀಮಿತವಾಗಿ ತನಿಖೆ ನಡೆಸುತ್ತಿತ್ತು. ಹೀಗಾಗಿ ಸಿಬಿಐನಿಂದ ಸಮಗ್ರ ತನಿಖೆ ಕೋರಿ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಅವರು ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ■6ನೇ ಪುಟಕ್ಕೆ

ವಿಷ ಪ್ರಾಶನದಿಂದ ಹುಲಿಗಳ ಸಾವಾಯ್ತು, ಈಗ ಕಾಲು ಕತ್ತರಿಸಿ ಚಿರತೆ ಹತ್ಯೆ ಬೆಳಕಿಗೆ

ಮಲೆಮಹದೇಶ್ವರ ಬೆಟ್ಟ ಅರಣ್ಯದಲ್ಲಿ ಮನುಷ್ಯನ ಮೃಗೀಯ ಕೃತ್ಯ

• ಪ್ರಕರಣ ಮುಚ್ಚಿ ಹಾಕಲು ಅರಣ್ಯ ಇಲಾಖೆ ಯತ್ನ • ಅರಣ್ಯ ಸಚಿವರಿಗೆ ವನ್ಯಜೀವಿ ಪ್ರೇಮಿಗಳ ದೂರು • ತನಿಖೆ ನಡೆಸಿ ವರದಿ ನೀಡಲು ಸಚಿವರಿಂದ ಆದೇಶ

ಮೈಸೂರು, ಜು.1(ಎಂಟಿವೈ)– ವಿಷ ಪ್ರಾಶನದಿಂದ ಐದು ಹುಲಿಗಳು ಸಾವನ್ನಪ್ಪಿದ ಘಟನೆ ಮಾಸುವ ಮುನ್ನವೇ ಮಲೆ ಮಹದೇಶ್ವರ ಬೆಟ್ಟ ವನ್ಯಧಾಮದ ಕೌದಳ್ಳಿ ವಲಯದ ರಾಮಾಪುರ–ಮಾರ್ಟಳ್ಳಿ ಗಡಿ ಭಾಗದ ಅರಣ್ಯ ಪ್ರದೇಶದಲ್ಲಿ ನಾಲ್ಕು ಕಾಲು ಕತ್ತರಿಸಿ ಚಿರತೆಯನ್ನು ಹತ್ಯೆ ಮಾಡಲಾಗಿದ್ದು, ಪ್ರಕರಣವನ್ನು ಮುಚ್ಚಿ ಹಾಕಲು ಮುಂದಾಗಿರುವ ಅರಣ್ಯ ಇಲಾಖೆ ವಿರುದ್ಧ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ವನ್ಯಜೀವಿ ಪ್ರೇಮಿಗಳು ದೂರು ನೀಡಿದ್ದಾರೆ.

ದೂರಿಗೆ ತಕ್ಷಣ ಸ್ಪಂದಿಸಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅರಣ್ಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪಿಸಿಸಿಎಫ್‌ಗೆ ಪತ್ರ ಬರೆದು ಎಪಿಸಿಸಿಎಫ್ ನೇತೃತ್ವದಲ್ಲಿ ತನಿಖೆ ನಡೆಸಿ 7ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಚಿರತೆಯ ಉಗುರಿಗಾಗಿ ಚಿರತೆಯನ್ನು ಹತ್ಯೆ ಮಾಡಿರುವ ಶಂಕೆಯಿದ್ದು, ಅರಣ್ಯಾಧಿಕಾರಿಗಳು ಆ ಪ್ರಕರಣವನ್ನು ಗೌಪ್ಯವಾಗಿಟ್ಟಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮಲೆಮಹದೇಶ್ವರ ವನ್ಯಧಾಮದ ಹೂಗ್ಯಂ ವಲಯದ ಮೀಣ್ಯಂ ಶಾಖೆಯ ಗಾಜನೂರು ಗಸ್ತು ವಲಯದ ಮಹದೇಶ್ವರ ಬೈಲು ಎಂಬಲ್ಲಿ ವಿಷ ಪ್ರಾಶನದಿಂದ ನಾಲ್ಕು ಮರಿಗಳೊಂದಿಗೆ ತಾಯಿ ಹುಲಿ ಸಾವನ್ನಪ್ಪಿರುವುದು ಅಧಿಕಾರಿಗಳ ಕರ್ತವ್ಯ ಲೋಪ, ನಿರ್ಲಕ್ಷ್ಯದ ಬಗ್ಗೆ ಸಾರ್ವತ್ರಿಕ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿಯೇ ಚಿರತೆ ಸಾವಿನ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಿರುವ ಮಾಹಿತಿ ಸಚಿವಾಲಯಕ್ಕೆ ತಲುಪಿದೆ ಎಂದಿದ್ದಾರೆ. ಶೆಡ್ಯೂಲ್ ಪಟ್ಟಿಗೆ ಸೇರುವ ಯಾವುದೇ ಪ್ರಾಣಿ ಮೃತಪಟ್ಟರೂ ಆಡಿಟ್ ■6ನೇ ಪುಟಕ್ಕೆ

ಇಂದಿನಿಂದ ರೈಲು ಪ್ರಯಾಣ ದುಬಾರಿ

ನವದೆಹಲಿ, ಜು.1– ರೈಲ್ವೇ ಸಚಿವಾಲಯ ಇಂದಿನಿಂದ ಜಾರಿಗೆ ಬರುವಂತೆ ರೈಲು ಪ್ರಯಾಣದ ಮೂಲ ದರಗಳನ್ನು ಪರಿಷ್ಕರಿಸಿದೆ. ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳ ಎಸಿ ಮತ್ತು ಕಾಯ್ದಿರಿಸಿದ ನಾನ್–ಎಸಿ ಕೋಚ್‌ಗಳಿಗೆ ಅನ್ವಯವಾಗುತ್ತದೆ.

ಈ ಸಂಬಂಧ ಸೋಮವಾರ ಅಧಿಕೃತ ಸುತ್ತೋಲೆ ಹೊರಡಿಸಿರುವ ರೈಲ್ವೇಯು, ಪ್ರಯಾಣ ದರ ಪರಿಷ್ಕರಣೆಗಳನ್ನು ವಿವರಿಸಿದೆ. ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳಲ್ಲಿ ನಾನ್–ಎಸಿ ■6ನೇ ಪುಟಕ್ಕೆ

ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿತ ದುರಂತ ಪ್ರಕರಣ
ಹಿರಿಯ ಐಪಿಎಸ್ ಅಧಿಕಾರಿ ವಿಕಾಸ್‌ಕುಮಾರ್ ಅಮಾನತು ರದ್ದು

• ಸಿಎಟಿ ಮಹತ್ವದ ಆದೇಶ; ಸರ್ಕಾರಕ್ಕೆ ಭಾರಿ ಮುಖಭಂಗ • ಪೊಲೀಸರು ಮನುಷ್ಯರೇ, ಭಾರಿ ಜನದಟ್ಟಣೆ ನಿಯಂತ್ರಿಸಲು ಅವರು ಮಂತ್ರವಾದಿಗಳಲ್ಲ; ಇಲ್ಲ ದೇವರಲ್ಲ; ಅವರ ಬಳಿ ಅಲ್ಲಾವುದ್ದೀನ್ ದೀಪವಿಲ್ಲ: ಸಿಎಟಿ ಅಭಿಮತ • ಇತರೆ ಅಧಿಕಾರಿಗಳಿಗೂ ಆದೇಶದ ಅನುಕೂಲವನ್ನ ಸರ್ಕಾರ ಕಲ್ಪಿಸುವ ವಿಶ್ವಾಸವಿದೆ: ನ್ಯಾಯಪೀಠ

ಬೆಂಗಳೂರು, ಜು. 1 (ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ದುರಂತದ ಹೊಣೆ ಹೊರಿಸಿ ಬೆಂಗಳೂರು ನಗರ ಹೆಚ್ಚುವರಿ ಪೊಲೀಸ್ ಆಯುಕ್ತ, ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅಮಾನತು ಆದೇಶವನ್ನು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಇಂದು ರದ್ದುಪಡಿಸಿರುವುದು ರಾಜ್ಯ ಸರ್ಕಾರಕ್ಕೆ ಭಾರಿ ಮುಖಭಂಗವಾಗಿದೆ.



ನ್ಯಾಯಮೂರ್ತಿ ಬಿ.ಕೆ.ಶ್ರೀವಾತ್ಸವ ಮತ್ತು ಸಂತೋಷ್ ಮೆಹ್ರಾ ಅವರನ್ನೊಳಗೊಂಡ ನ್ಯಾಯಪೀಠ ಆದೇಶ ನೀಡಿದ್ದು, ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅವರನ್ನು ತಕ್ಷಣ ಸೇವೆಗೆ ಮರುನಿಯೋಜಿಸಬೇಕು, ಹಿಂದಿನ ಎಲ್ಲಾ ಭತ್ಯೆ, ಸೌಲಭ್ಯ ಒದಗಿಸಬೇಕು ಎಂದು ನಿರ್ದೇಶನ ನೀಡಿದೆ.

ಐಪಿಎಸ್ ಅಧಿಕಾರಿಯ ಅರ್ಜಿಯ ವಿಚಾರಣೆ ನಡೆಸಿದ ಸಿಎಟಿ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ 3ರಿಂದ 5 ಲಕ್ಷ ಜನ ಸೇರಲು ಆರ್‌ಸಿಬಿ ಆಡಳಿತವೇ ಕಾರಣ. ಪೊಲೀಸರ ಅನುಮತಿ ಪಡೆಯದೇ ಸಂಭ್ರಮಾಚರಣೆಗೆ ಕರೆ ನೀಡಲಾಗಿದೆ. ಕಡಿಮೆ ಅವಧಿಯಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಲು ಪೊಲೀಸರಿಂದ ಸಾಧ್ಯವಿಲ್ಲ. ಆರ್‌ಸಿಬಿ ಸೃಷ್ಟಿಸಿದ ಗೊಂದಲದಿಂದಾಗಿಯೇ ಜನದಟ್ಟಣೆಯಾಗಿದೆ, ಪೊಲೀಸ್ ■6ನೇ ಪುಟಕ್ಕೆ

ಕಾಲ್ತುಳಿತ ದುರಂತಕ್ಕೆ ಆರ್‌ಸಿಬಿ ಕಾರಣ

ಬೆಂಗಳೂರು, ಜು.1– ಕಳೆದ ಜೂನ್ 4 ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ 11 ಜನರ ಸಾವಿಗೆ ಕಾರಣವಾದ ಕಾಲ್ತುಳಿತ ದುರಂತಕ್ಕೆ ರಾಯಲ್ ಚಾಲೆಂಜರ್ಸ್ ಬೆಂಗಳೂರು 'ಪ್ರಾಥಮಿಕ ಹೊಣೆಗಾರ' ಎಂದು ಕೇಂದ್ರ ಆಡಳಿತ ನ್ಯಾಯಮಂಡಳಿ (CAT) ಮಂಗಳವಾರ ಅಭಿಪ್ರಾಯಪಟ್ಟಿದೆ.



RCB ತಂಡದ ಮೊದಲ ಐಪಿಎಲ್ ಟ್ರೋಫಿ ವಿಜಯೋತ್ಸವವನ್ನು ಆಚರಿಸಲು ವಿಧಾನಸೌಧದಿಂದ ವಿಜಯೋತ್ಸವ ಮೆರವಣಿಗೆ ಮತ್ತು ಕ್ರೀಡಾಂಗಣದಲ್ಲಿ ಅಭಿಮಾನಿಗಳ ಕಾರ್ಯಕ್ರಮವನ್ನು ಘೋಷಿಸಿದ ನಂತರ ಕ್ರೀಡಾಂಗಣದ ಬಳಿಯ ಎಂಜಿ ರಸ್ತೆ ಮತ್ತು ಕಬ್ಬನ್ ಪಾರ್ಕ್ ರಸ್ತೆ ಪ್ರದೇಶಗಳಲ್ಲಿ ■6ನೇ ಪುಟಕ್ಕೆ

ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಲು ಕರೆ



ಮಯೂರ ಕನ್ನಡ ಯುವಕರ ಬಳಗ ವತಿಯಿಂದ ಹಳೆ ಸಂತೆಪೇಟೆಯಲ್ಲಿ ಉಚಿತ ಪತ್ರಿಕೆ ವಿತರಿಸುವ ಮೂಲಕ ಪತ್ರಿಕಾ ದಿನ ಆಚರಿಸಲಾಯಿತು.

ಮೈಸೂರು, ಜು.1–ಮಯೂರ ಕನ್ನಡ ಯುವಕರ ಬಳಗ ವತಿಯಿಂದ ಹಳೆ ಸಂತೆ ಪೇಟೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಪತ್ರಿಕೆ ವಿತರಿಸಿ, ಪತ್ರಿಕಾ ದಿನ ಆಚರಿಸಲಾಯಿತು.

ಮಯೂರ ಕನ್ನಡ ಯುವಕರ ಬಳಗದ ಅಧ್ಯಕ್ಷ ಜಿ.ರಾಘವೇಂದ್ರ ಮಾತನಾಡಿ, ಪತ್ರಕರ್ತರಿಗೆ ಬಿಡುವು ಎನ್ನುವುದಿಲ್ಲ. ಹಗಲು, ರಾತ್ರಿ ಎನ್ನದೆ ಕರ್ತವ್ಯ ನಿರ್ವ ಹಿಸುತ್ತಾರೆ. ಕುಟುಂಬದ ಸದಸ್ಯರೊಂ ದಿಗೆ ಕಳೆಯಲು ಸಹ ಅವರಲ್ಲಿ ಸಮಯ ಇರುವುದಿಲ್ಲ. ಒತ್ತಡದ ನಡುವೆಯೇ ಕುಟುಂಬ ಸದಸ್ಯರೆಲ್ಲರೂ ಒಂದೆಡೆ ಸೇರುವ ಹಾಗೆ ಕಾರ್ಯಕ್ರಮ ಏರ್ಪಡಿಸಲು ಪತ್ರಕರ್ತರ ಸಂಘ ಮುಂದಾಗಬೇಕು ಎಂದರು.

ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟ ರಾಜ್, ಎಸ್.ಎನ್.ರಾಜೇಶ್, ಮಯೂರ ಕನ್ನಡ ಯುವಕರ ಬಳಗದ ಕಾರ್ಯ ದರ್ಶಿ ಮಂಜುನಾಥ್, ಹಿರಿಯ ಪತ್ರಿಕಾ ವಿತ ರಕರಾದ ರಮಾಬಾಯಿ, ರವಿಚಂದ್ರ, ಯೋಗೇಶ್, ರಾಕೇಶ್, ಹರೀಶ್ ನಾಯ್ಡು ಇನ್ನಿತರರು ಹಾಜರಿದ್ದರು.

ಜು.6ರಂದು ವಿಶ್ವ ವೈದ್ಯರ ದಿನಾಚರಣೆ



ಮೈಸೂರು, ಜು.1–ಅರಸು ಜಾಗೃತಿ ಅಕಾಡೆಮಿ ಚಾರಿಟೆಬಲ್ ಟ್ರಸ್ಟ್, ಅನ್ವೇಷಣಾ ಸೇವಾ ಟ್ರಸ್ಟ್ ಸಹಕಾರ ದೊಂದಿಗೆ ವಿಶ್ವ ವೈದ್ಯರ ದಿನಾ ಚರಣೆ ಅಂಗವಾಗಿ ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ವಿಶಿಷ್ಟವಾದ ಚಿಕಿತ್ಸಾ ವಿಧಾನಗಳಿಂದ ಸಾಧನೆ ಮಾಡಿರುವ 6 ಮಂದಿ ವೈದ್ಯರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜು.6ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ದಿ ಇನ್ಸ್‌ಟಿ ಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂ ಗಣದಲ್ಲಿ ಏರ್ಪಡಿಸಲಾಗಿದೆ.

ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್.ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸುವರು. ಡಾ.ಬಿ.ಸಿ. ರಾಯ್ ಭಾವಚಿತ್ರಕ್ಕೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಪುಷ್ಪಾರ್ಚನೆ ಮಾಡುವರು. ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಮೆಡಿಕಲ್ ಸೂಪ ರಿಂಟೆಂಡೆಂಟ್ ಡಾ.ಕೆ.ಎಸ್. ಸದಾ ನಂದ ಅಧ್ಯಕ್ಷತೆ ವಹಿಸುವರು. ಡಾ.ಬಿ.ಸಿ.ರಾಯ್ ಅವರ ಸಾಧನೆ ಗಳನ್ನು ಕುರಿತು ಅಂತರರಾಷ್ಟ್ರೀಯ ಖ್ಯಾತಿಯ ಲೈಂಗಿಕ ಮತ್ತು ಗರ್ಭ ಧಾರಣಾ ತಜ್ಞ ಡಾ.ಸಿ.ಶರತ್‌ಕುಮಾರ್ ಮತ್ತು ಚುಟುಕು ಸಾಹಿತ್ಯ ಪರಿಷತ್ತಿನ ಸಂಸ್ಥಾ ಪಕರಾದ ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಮಾತನಾಡುವರು.

ಮುಖ್ಯ ಅತಿಥಿಗಳಾಗಿ ಮೈಸೂರು ಸರ್ಕಾರಿ ಆಯುರ್ವೇದಿಕ್ ಕಾಲೇಜಿನ ಪ್ರಾಚಾರ್ಯ ಡಾ.ಕೆ.ಎಸ್.ರಾಧಾಕೃಷ್ಣ ರಾಮರಾವ್, ಅನ್ವೇಷಣಾ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಆರ್ಯ ಅಮರ ನಾಥರಾಜೇ ಅರಸ್ ಮತ್ತು ವೈದ್ಯ ವಾರ್ತಾ ಪ್ರಕಾಶನದ ನಿರ್ದೇಶಕ ಹೆಚ್.ಎಂ.ಟಿ. ಲಿಂಗರಾಜೇ ಅರಸ್ ಪಾಲ್ಗೊಳ್ಳುವರು.

ಅಪರಿಚಿತ ವ್ಯಕ್ತಿಗೆ ವಾಹನ ಡಿಕ್ಕಿ

ಮೈಸೂರು, ಜು.1(ಬಿಎಲ್‌ಯು)– ನಗರದ ನೆಲ್ಸನ್ ಮಂಡೇಲಾ ರಸ್ತೆಯಲ್ಲಿರುವ ಹನುಮಂತನಗರ ಕ್ರಾಸ್ ಬಳಿ ಅಪರಿಚಿತ ಪಾದಚಾರಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಆತ ಮೃತಪಟ್ಟಿರುವ ಘಟನೆ ನಡೆದಿದೆ.

ಜೂನ್ 9ರಂದು ಈ ಘಟನೆ ನಡೆದಿದ್ದು, ವಾಹನ ಡಿಕ್ಕಿ ಹೊಡೆದ ಕಾರಣ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ವ್ಯಕ್ತಿಯನ್ನು ನಗರದ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡ ಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆತ ಜೂನ್ 28ರಂದು ಮೃತಪಟ್ಟಿ ದ್ದಾನೆ. ಅಪರಿಚಿತ ವ್ಯಕ್ತಿಯ ವಯಸ್ಸು ಸುಮಾರು 45ರಿಂದ 55 ವರ್ಷವಾಗಿದ್ದು, 5.6 ಅಡಿ ಎತ್ತರವಿದ್ದಾನೆ. ಗೋಧಿ ಬಣ್ಣ, ಸಾಧಾರಣ ಮೈಕಟ್ಟು, ಬಿಳಿ ಗಡ್ಡ, ಬಿಳಿ ಕೂದಲಿರುವ ಈತನ ಬಲಗೈನಲ್ಲಿ ಮಂಗಳಮ್ಮ ಎಂಬ ಹೆಸರಿನ ಹಚ್ಚೆ ಇದೆ. ಈತನ ವಾರಸುದಾರರಿದ್ದಲ್ಲಿ ನರಸಿಂಹರಾಜ ಸಂಚಾರ ಪೊಲೀಸ್ ಠಾಣೆ ಸಂಪರ್ಕಿಸಬಹುದು.

ನಿಧನ

ಮಾಜಿ ಕಾರ್ಪೋರೇಟರ್ ಕೆ.ಎಂ.ಶಂಕರ್



ಮೈಸೂರು, ಜು.1(ಆರ್‌ಕೆ)–ಮೈಸೂರಿನ ಕೆಜಿ ಕೊಪ್ಪಲು ನಿವಾಸಿ ಮಾಜಿ ಕಾರ್ಪೋರೇಟರ್ ಕೆ.ಎಂ.ಶಂಕರ್(63) ಇಂದು ಸಂಜೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸಹೋದರರು, ಬಂಧು–ಬಳಗದವರನ್ನು ಅಗಲಿದ್ದಾರೆ. ನಾಳೆ (ಜು.2) ಬೆಳಗ್ಗೆ ಕೆಜಿ ಕೊಪ್ಪಲು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

2007ರಿಂದ 2012ರವರೆಗೆ ಶಾರದಾದೇವಿನಗರ (ಅಂದಿನ ವಾರ್ಡ್ ನಂಬರ್ 22) ಭಾಗದ ಮೈಸೂರು ಮಹಾನಗರಪಾಲಿಕೆ ಸದಸ್ಯರಾಗಿ ಶಂಕರ್ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ಅನಾರೋಗ್ಯಕ್ಕೆ ತುತ್ತಾಗಿದ್ದ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ.

ಮುದ್ದಂಡ ಕಾವೇರಮ್ಮ



ಮೈಸೂರಿನ ಜೆ.ಪಿ.ನಗರ, ಎ ಬ್ಲಾಕ್, 5ನೇ ಮೇನ್, 11ನೇ ಕ್ರಾಸ್ ನಿವಾಸಿ ದಿವಂಗತ ಪೂವಯ್ಯ ಅವರ ಪತ್ನಿ ಮುದ್ದಂಡ ಕಾವೇರಮ್ಮ (ತಂಬುಕುತೀರ) ಮಂಗಳವಾರ ಬೆಳಗ್ಗೆ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಮೃತರು ಆರು ಮಂದಿ ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರಪೇಟೆ ತಾಲೂಕಿನ ಸೂರ್ಲಬ್ಬಿಯ ಮುದ್ದಂಡ ಒಕ್ಕ ರುದ್ರ ಭೂಮಿಯಲ್ಲಿ ನಾಳೆ (ಜು.2) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಕೆಲ್ ಫರ್ನಾಂಡೀಸ್



ಮೈಸೂರಿನ ಬನ್ನಿಮಂಟಪ 'ಸಿ' ಬಡಾವಣೆ ನಿವಾಸಿ ಹಾಗೂ ರೋಟರಿ ಮೈಸೂರು ಮಿಡ್‌ಟೌನ್ ಮಾಜಿ ಅಧ್ಯಕ್ಷ ಮೈಕೆಲ್ ಫರ್ನಾಂಡೀಸ್ (82) ಬೆಂಗಳೂರಿನಲ್ಲಿ ಸೋಮವಾರ ನಿಧನ ರಾದರು. ಮೃತರು ಪತ್ನಿ ಲೆಟ್ಟಿ ಫರ್ನಾಂಡೀಸ್, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜುಲೈ 4ರಂದು ಮಹದೇವಪುರ ರಸ್ತೆ, ಗಾಂಧಿನಗರದ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೋನಿಕಾ ರಾಜೇಶ್



ಮೈಸೂರಿನ ರಾಜೀವ್‌ನಗರ ನಿವಾಸಿ ಎಲ್.ಎ.ಸ್ವಾಮಿ ಅವರ ಪುತ್ರಿ ಮೋನಿಕಾ ರಾಜೇಶ್ (49) ಸೋಮವಾರ ನಿಧನರಾದರು. ಮೃತರು ತಂದೆ, ಸಹೋದರಿ, ಸಹೋದರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ರಮ್ಮನಹಳ್ಳಿಯಲ್ಲಿರುವ ಕ್ರಿಶ್ಚಿಯನ್ ಸಿಮೆಟ್ರಿ ಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಎಸ್.ಹೇಮಚಂದ್ರ



ಮೈಸೂರಿನ ಆಲನಹಳ್ಳಿ ನಿವಾಸಿ ಬಿ.ಸಿದ್ದಲಿಂಗಪ್ಪ ಅವರ ಪುತ್ರ ಎಸ್.ಹೇಮಚಂದ್ರ (62) ಅವರು ಇಂದು ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಇಂದಿರಮ್ಮ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಅಪಾರ ಬಂಧು ವರ್ಗ ಅಗಲಿದ್ದಾರೆ. ನಾಳೆ (ಜು.2) ಮಧ್ಯಾಹ್ನ 12.30 ಗಂಟೆಗೆ ಚಾಮುಂಡಿಬೆಟ್ಟದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೀತಾ ಇಂದ್ರಕುಮಾರ್



ಮೈಸೂರಿನ ಮಾರುತಿ ಟೆಂಟ್ ರಸ್ತೆಯ 9ನೇ ಕ್ರಾಸ್, ಮಲೆ ಮಹದೇಶ್ವರ ದೇವಸ್ಥಾನ ಸಮೀಪದ ನಿವಾಸಿ ಗೀತಾ ಇಂದ್ರಕುಮಾರ್ (76) ಮಂಗಳವಾರ ನಿಧನರಾದರು. ಮೃತರು ಫೋಟೋಗ್ರಾಫರ್ ಸುಮಂತ್, ಓರ್ವ ಪುತ್ರಿ, ಮೊಮ್ಮಕ್ಕಳನ್ನು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು.

ಪ್ರಿಯಾಂಕ್ ಖರ್ಗೆ ಇನ್ನೊಂದು ಜನ್ಮ ಎತ್ತಿ ಬಂದರೂ ಆರ್‌ಎಸ್‌ಎಸ್ ಅಲ್ಲಾಡಿಸಕ್ಕಾಗಲ್ಲ

ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಸವಾಲು



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಜು.1(ಬಿಎಲ್‌ಯು)– ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಇನ್ನೊಂದು ಜನ್ಮ ಎತ್ತಿ ಬಂದರೂ ಆರ್‌ಎಸ್‌ಎಸ್ (ರಾಷ್ಟ್ರೀಯ ಸ್ವಯಂ ಸೇವಕ ಸಂಘ) ಅನ್ನು ಅಲ್ಲಾಡಿ ಸಲು ಆಗುವುದಿಲ್ಲ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಇಂದಿಲ್ಲಿ ಸವಾಲು ಹಾಕಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳ ವಾರ ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಅವರು, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆರ್‌ಎಸ್‌ಎಸ್ ಅನ್ನು ಬ್ಯಾನ್ ಮಾಡಲಾಗುವುದು ಎಂಬ ಪ್ರಿಯಾಂಕ್ ಖರ್ಗೆ ಟ್ವೀಟ್‌ಗೆ ಮಹೇಶ್ ತಿರುಗೇಟು ನೀಡಿದರು.

ಈಗಾಗಲೇ ಆರ್‌ಎಸ್‌ಎಸ್ ಅನ್ನು ಮೂರು ಬಾರಿ ಬ್ಯಾನ್ ಮಾಡಿದ್ದ ಹಿಂದಿನ ಕಾಂಗ್ರೆಸ್ ಸರ್ಕಾರ, ಬಳಿಕ ಅದನ್ನು ತೆರವುಗೊಳಿಸಿತ್ತು. ಆದ ಕಾರಣ ಇಡೀ ದೇಶದಲ್ಲಿಯೇ ಗಟ್ಟಿಯಾದ ಸಂಘಟನೆ ಇರುವ, ದೇಶಪ್ರೇಮದ ಸಿದ್ಧಾಂತ ವಿರುವ ಆರ್‌ಎಸ್‌ಎಸ್ ಅನ್ನು ಕಾಂಗ್ರೆಸ್ ನವರು ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ಮಹೇಶ್ ಟಾಂಗ್ ನೀಡಿದರು.

ನಾನು ದೇವರಾಜ್ ಅರಸ್ ಅವರ ಮಾದರಿಯಲ್ಲೇ ಆಡಳಿತ ನಡೆಸುತ್ತಿದ್ದೇನೆ ಎಂದು ಸಿದ್ದರಾಮಯ್ಯ ಅವರು ತಮ್ಮ ಬೆನ್ನು ತಾವು ತಟ್ಟಿಕೊಳ್ಳುತ್ತಿದ್ದಾರೆ. ಆದರೆ ದೇವರಾಜ ಅರಸ್ ಅವರಿಗೆ ಸಿದ್ದ ರಾಮಯ್ಯ ಯಾವುದೇ ವಿಚಾರದಲ್ಲೂ ಸಮಾನರಲ್ಲ ಎಂದು ಟೀಕಿಸಿದರು.

ದೇವರಾಜ ಅರಸ್ ಅವರು ಹಾವ ನೂರ್ ಕಮಿಷನ್ ಜಾರಿ ಮಾಡಿ ಹಿಂದು ಳಿದ ವರ್ಗದವರನ್ನು ಆರ್ಥಿಕ, ಸಾಮಾ ಜಿಕ ಹಾಗೂ ರಾಜಕೀಯವಾಗಿ ಮೇಲೆತ್ತಿ ದ್ದರು. ಅಂದು ದೇವರಾಜ ಅರಸ್ ನೀಡಿರುವ ಕೊಡುಗೆಯಿಂದಾಗಿ ಇಂದಿಗೂ ಅವರ ಗುಣಗಾನ ಮಾಡುತ್ತಾರೆ. ಆದರೆ ಎರಡನೇ ಬಾರಿ ಮುಖ್ಯಮಂತ್ರಿಯಾಗಿ ರುವ ಸಿದ್ದರಾಮಯ್ಯ, ಇಂತಹ ಒಂದೇ ಒಂದು ಜನಪರ ಯೋಜನೆ ಜಾರಿ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದರು.

ನಾನು ಹಿಂದುಳಿದ ವರ್ಗಗಳ ಪರ ವಾಗಿದ್ದೇನೆ ಎಂದು ಹೇಳುತ್ತಾರೆ. ಆದರೆ ಹಿಂದುಳಿದ ವರ್ಗಕ್ಕೆ ಶಕ್ತಿ ನೀಡುವ ಬದಲು ದಮನ ಮಾಡುತ್ತಿದ್ದಾರೆ. ಮುಗ್ಧರಾದ ಹಿಂದುಳಿದ ವರ್ಗದವರಿಗೆ ಇವರ ಮೋಸ ದಾಟ ತಿಳಿಯುತ್ತಿಲ್ಲ. ನಿನ್ನೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಸಭೆ ಮಾಡಿದ್ದು, ಈಗ ಅದೇನು ಮಾಡು ತ್ತಾರೆಯೋ ಕಾದು ನೋಡಬೇಕು ಎಂದರು.

ಕೇಂದ್ರ ಸರ್ಕಾರ ನೀಡುವ ಅಕ್ಕಿಯನ್ನು ನಾನು ಕೊಟ್ಟೆ ಎಂದು ಸಿದ್ದರಾಮಯ್ಯ ಜಂಭ ಕೊಚ್ಚಿಕೊಳ್ಳುತ್ತಾರೆ. ಇವರು ಬೇರೆ ಯವರು ಕೊಟ್ಟ ಅಕ್ಕಿಯನ್ನು ಜನರಿಗೆ ಕೊಟ್ಟರೆ ದೇವರಾಜ ಅರಸ್ ಅವರು ಅಕ್ಕಿ ಬೆಳೆಯುವ ಭೂಮಿಯನ್ನೆ ಜನರಿಗೆ ಕೊಟ್ಟರು. ಇಂತಹ ಒಂದೇ ಒಂದು ಕೊಡುಗೆಯನ್ನು ಸಿದ್ದರಾಮಯ್ಯ ನೀಡಿ ದ್ದಾರೆಯೇ ಎಂದು ಪುನರ್ ಪ್ರಶ್ನಿಸಿದರು.

ಅಧಿಕಾರ ಇರುವಾಗ ಹಿಂದುಳಿದ ವರ್ಗಕ್ಕೆ ಯಾವ ಅನುಕೂಲವನ್ನು ಮಾಡು ವುದಿಲ್ಲ. ಆದರೆ ಚುನಾವಣೆ ಸಂದರ್ಭ ಬಂದಾಗ ಹಾಗೂ ಅಧಿಕಾರ ಹೋಗುವ ಪರಿಸ್ಥಿತಿಯಲ್ಲಿ ನಾನು ಹಿಂದುಳಿದ ವರ್ಗದ ವ್ಯಕ್ತಿ ಎಂದು ಟ್ರಂಪ್ ಕಾರ್ಡ್ ಬಳಸು ತ್ತಾರೆ ಎಂದು ಟೀಕಾಪ್ರಹಾರ ನಡೆಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ನಗರ ಒಬಿಸಿ ಮೋರ್ಚಾ ಅಧ್ಯಕ್ಷ ಮೈ.ಕು.ರಾಜೇಶ್, ಜಿಲ್ಲಾ ವಕ್ತಾರ ದಯಾ ನಂದ್ ಪಟೇಲ್, ನಗರ ಮಾಧ್ಯಮ ಸಂಚಾ ಲಕ ಮಹೇಶ್‌ರಾಜ್ ಅರಸ್, ಸಹ ಮಾಧ್ಯಮ ಸಂಚಾಲಕ ಬಿ.ಎಂ.ಸಂತೋಷ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಡಾ.ಶೋಭಾರಿಗೆ ಅಭಿನಂದನೆ



ವೈದ್ಯರ ದಿನಾಚರಣೆ ಅಂಗವಾಗಿ ಕೆ.ಆರ್. ಆಸ್ಪತ್ರೆ ಅಧೀಕ್ಷಕಿ ಡಾ.ಶೋಭಾ ಅವರಿಗೆ ಶುಭಾಶಯ ಕೋರಲಾಯಿತು. ಮೈಸೂರು ತಾಲೂಕು ನಾಯಕರ ಸಂಘದ ಅಧ್ಯಕ್ಷ ಉದ್ಬೂರು ಎನ್.ಮಹದೇವಸ್ವಾಮಿ, ಮುಖಂಡರಾದ ಕಡಕೊಳ ಕುಮಾರ ಸ್ವಾಮಿ, ಇಲವಾಲ ಕೃಷ್ಣಪ್ಪ, ಸೋಮು, ಚಂದ್ರು, ನಾಗೇಂದ್ರ ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ಪೂಜೆಗೆ ಅನುಕೂಲಕ್ಕೆ ಮನವಿ



ಆಷಾಢ ಮಾಸದ ಪ್ರಯುಕ್ತ ಚಾಮುಂಡೇಶ್ವರಿ ಅಮ್ಮನವರ ದರ್ಶನಕ್ಕೆ ಬೆಟ್ಟಕ್ಕೆ ಬರುವ ಭಕ್ತರಿಗೆ ಅಧಿಕಾರಿಗಳು ಸರಿಯಾದ ವ್ಯವಸ್ಥೆ ಕಲ್ಪಿಸದೆ ಮೊದಲನೆಯ ಆಷಾಢ ಶುಕ್ರವಾರದಲ್ಲಿ ತುಂಬಾ ಅವ್ಯವಸ್ಥೆ ಕಂಡು ಬಂದಿತು. ಹಾಗಾಗಿ ಜಯ ಕರ್ನಾಟಕ ಸಂಘಟನೆ ವತಿಯಿಂದ ಸಾರ್ವಜನಿಕರಿಗೆ ಸೂಕ್ತ ಸೌಕರ್ಯ, ಧರ್ಮ ದರ್ಶನಕ್ಕೆ ಆದ್ಯತೆ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಸಂವಿಧಾನದಲ್ಲಿರುವ 'ಜಾತ್ಯಾತೀತ, ಸಮಾಜವಾದ' ಸೇರಿದಂತೆ ಯಾವುದೇ ಪದಗಳನ್ನು ತೆಗೆಯಲು ಬಿಡುವುದಿಲ್ಲ

ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಕೆ



ಮೈಸೂರು, ಜು.1(ಜಿಎ)– ಆರ್‌ಎಸ್‌ಎಸ್ ಮುಖಂಡ ದತ್ತಾತ್ರೇಯ ಹೊಸಬಾಳೆ ಸಂವಿಧಾನದಲ್ಲಿರುವ 'ಜಾತ್ಯಾ ತೀತ ಮತ್ತು ಸಮಾಜವಾದ' ಪದಗಳನ್ನು ತೆಗೆದು ಹಾಕಬೇಕು ಎಂದು ಹೇಳಿದ್ದಾರೆ. ಆದರೆ ದೇಶದ ಬಹುಜನರು ಜಾತ್ಯಾ ತೀತ ಮತ್ತು ಸಮಾಜವಾದ ಮಾತ್ರವಲ್ಲ ಸಂವಿಧಾನದ ಒಂದು ಪದವನ್ನೂ ತೆಗೆ ಯಲು ಬಿಡುವುದಿಲ್ಲ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ, ಆರ್‌ಎಸ್‌ಎಸ್‌ನ ಕುಮ್ಮಕ್ಕಿನಿಂದ ಸಂವಿ ಧಾನದ ಆಶಯಗಳನ್ನು ತಿರುಚುವ ಮತ್ತು ಸಂವಿಧಾನವನ್ನು ಬದಲಿಸುವ ಕುತಂತ್ರಕ್ಕೆ ಮುಂದಾದರೆ ದೇಶದಾದ್ಯಂತ ರಕ್ತಕ್ರಾಂತಿ ನಡೆಯಲಿದೆ ಎಂದು ಎಚ್ಚರಿಸಿದರು.

ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಸಂವಿಧಾನ ನೀಡುತ್ತಿರುವ ಕೊಡುಗೆ ಬಗ್ಗೆ ನಾವು ಚರ್ಚೆಗೆ ಬರುತ್ತೇವೆ. ದೇಶಕ್ಕೆ ಮನುಸ್ಮೃತಿಯ ಕೊಡುಗೆ ಏನು? ಎಂಬ ವಿಚಾರದ ಬಗ್ಗೆ ಆರ್‌ಎಸ್‌ಎಸ್‌ನವರು ಚರ್ಚೆಗೆ ಬರಲಿ ಎಂದು ಸವಾಲು ಹಾಕಿದ ಅವರು, ಆರ್‌ಎಸ್‌ಎಸ್ ಮತ್ತು ಬಿಜೆಪಿ ಯವರು ಸಂವಿಧಾನದ ಬಗ್ಗೆ ಪದೇಪದೆ ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಮೂಲಕ ಬಹುಜನ ರನ್ನು ಪ್ರಚೋದಿಸುತ್ತಿ ದ್ದಾರೆ. ಶೋಷಿತ ಸಮು ದಾಯಗಳ ತಾಳ್ಮೆ ಯನ್ನು ಪರೀಕ್ಷಿಸುತ್ತಿ ದ್ದಾರೆ. ಆದರೆ ಸಂವಿಧಾನ ವನ್ನು ಬದಲಿಸುವ ಆರ್‌ಎಸ್‌ಎಸ್‌ನ ಕುತಂತ್ರ, ದಲಿತ, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ಮುಂದೆ ನಡೆಯುವು ದಿಲ್ಲ. ಸಂವಿಧಾನದ ವಿರುದ್ಧ ಮಾತನಾಡು ವವರ ಬಾಯಿಗೆ ಹೇಗೆ ಬೀಗಹಾಕಬೇಕು ಎಂಬುದು ನಮಗೂ ತಿಳಿದಿದೆ ಎಂದರು.

ದಲಿತ ಸಂಘರ್ಷ ಸಮಿತಿ ಹಿರಿಯ ಮುಖಂಡ ಹರಿಹರ ಆನಂದಸ್ವಾಮಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಜಾತ್ಯಾತೀತ ಮತ್ತು ಸಮಾಜವಾದ ಎಂಬ ಪದ ಗಳನ್ನು ಸೇರಿಸಿರಲಿಲ್ಲ. ಆದರೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜಾತ್ಯಾತೀತ ಮತ್ತು ಸಮಾಜವಾದ ಪದಗಳನ್ನು ಸೇರಿಸಿದ್ದಾರೆ. ಆದ್ದರಿಂದ ಈ ಪದಗಳನ್ನು ಸಂವಿಧಾನದಿಂದ ಕೈಬಿಡಬೇಕು ಎಂದು ಆರ್‌ಎಸ್‌ಎಸ್ ಮುಖಂಡ ದತ್ತಾತ್ರೇಯ ಹೊಸಬಾಳೆ ಹೇಳಿರುವುದು ನಿಜಕ್ಕೂ ಅವಿವೇಕದ ಪರಮಾವಧಿ ಎಂದರು.

ಸುದ್ದಿಗೋಷ್ಠಿಯಲ್ಲಿ ಸಾಹಿತಿ ಅಶೋಕಪುರಂ ಸಿದ್ದಸ್ವಾಮಿ, ಸೋಮಯ್ಯ ಮಲೆಯೂರು, ಸಿ.ಹರ ಕುಮಾರ್, ಅಶೋಕಪುರಂ ದೊಡ್ಡಗರಡಿ ಅಧ್ಯಕ್ಷ ಮಹೇಶ್, ಆದಿ ಕರ್ನಾಟಕ ಸಂಸ್ಥೆಯ ಅಧ್ಯಕ್ಷ ಸಿದ್ದರಾಜು, ದಲಿತ ಮುಖಂಡ ನಾಗರಾಜು ಉಪಸ್ಥಿತರಿದ್ದರು.

ಸಾಯಿ ಮಂದಿರದಲ್ಲಿ ಗುರು ಪೂರ್ಣಿಮೆ

ಮೈಸೂರು, ಜು.1–ಮೈಸೂರಿನ ರಾಮಕೃಷ್ಣನಗರದ ಇ ಮತ್ತು ಎಫ್ ಬ್ಲಾಕ್‌ನಲ್ಲಿರುವ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ ವತಿಯಿಂದ ಜು.10ರಂದು ಗುರು ಪೂರ್ಣಿಮೆ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 7 ಗಂಟೆಗೆ ಕಾಕಡಾರತಿ ಆರಂಭವಾಗಲಿದ್ದು, 7.30ಕ್ಕೆ ಪ್ರತಿಷ್ಠಾನ ಮೂರ್ತಿಗೆ ವೇದಘೋಷ ಗಳೊಂದಿಗೆ ಜಲಾಭಿಷೇಕ, ಪುಷ್ಪಾರ್ಚನೆ ನಡೆಯಲಿದೆ. 8.30ಕ್ಕೆ ಅಷ್ಟಧಾತು ಮೂರ್ತಿಗೆ ಪ್ರಾಕಾರೋತ್ಸವ ಮತ್ತು ಕ್ಷೀರಾಭಿಷೇಕ ಸೇರಿದಂತೆ ಪೂಜೆ ನೆರವೇರಲಿದೆ. ಸಂಜೆ 6 ಗಂಟೆಗೆ ಧೂಪಾರತಿ, ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ಮಟ್ಟದ ಕಿಡ್ಸ್ ಅಥ್ಲೆಟಿಕ್ಸ್: ಚಿನ್ನದ ಪದಕ ಗೆದ್ದ ಅಕ್ಷರ



ಮೈಸೂರು, ಜು.1–ಇತ್ತೀಚೆಗೆ ಬೆಂಗ ಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನಡೆದ ರಾಜ್ಯ ಮಟ್ಟದ ಕಿಡ್ಸ್ ಅಥ್ಲೆಟಿಕ್ಸ್ ಕ್ರೀಡಾ ಕೂಟದಲ್ಲಿ ಮೈಸೂರಿನ ವಿದ್ಯಾರ್ಥಿನಿ ಅಕ್ಷರ ಚಿನ್ನದ ಪದಕ ಗೆದ್ದಿದ್ದಾರೆ. ಲಾಂಗ್ ಜಂಪ್‌ನಲ್ಲಿ ಚಿನ್ನದ ಪದಕವನ್ನು ಮುಡಿ ಗೇರಿಸಿಕೊಂಡಿದ್ದಾರೆ. ಮೈಸೂರಿನ ನಿವಾಸಿ ಯಾಗಿರುವ ಡಾ.ಲೋಕೇಶ್ ಎಂ.ಆರ್ ಮತ್ತು ಭವ್ಯ ದಂಪತಿ ಪುತ್ರಿಯಾಗಿರುವ ಅಕ್ಷರ ಮೈಸೂರಿನ ಖಾಸಗಿ ಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿ ಸಿದ್ದ ಸಾವಿರಾರು ಅಥ್ಲೀಟ್ಸ್‌ಗಳು ರಾಜ್ಯ ಮಟ್ಟದ ಕಿಡ್ಸ್ ಅಥ್ಲೆಟಿಕ್ಸ್ ಕ್ರೀಡಾಕೂಟ ದಲ್ಲಿ ಭಾಗವಹಿಸಿದ್ದರು. ಅಕ್ಷರ ಅವರು ಮೈಸೂರಿನ ಓವೆಲ್ ಅಥ್ಲೆಟಿಕ್ಸ್ ತರಬೇತು ದಾರ ಪ್ರಭಾಕರ್ ಮಾರ್ಗದರ್ಶನದಲ್ಲಿ ಕಳೆದ ಹಲವು ವರ್ಷಗಳಿಂದ ಅಭ್ಯಾಸ ಮಾಡುತ್ತಿದ್ದು, ಈಗಾಗಲೇ ಹಲವು ಜಿಲ್ಲಾ ಮಟ್ಟದ ಸ್ಪರ್ಧೆ, ರಾಜ್ಯ ಮಟ್ಟದ ಸ್ಪರ್ಧೆ ಯಲ್ಲಿ ಪದಕಗಳನ್ನು ಗೆದ್ದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.07.2025 ಬುಧವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025ರಿಂದ 05.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ–2025, ಬೆಳಗ್ಗೆ 9 ಗಂಟೆಯಿಂದ ಮಹಾನ್ಯಾಸ ಪೂರ್ವಕ ಏಕಾದಶವಾರ ರುದ್ರ ಪಾರಾಯಣ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಪುಣ್ಯಾಹ, ನಾಂದಿ, ಗಣಪತಿ ಪೂಜಾ, ಮಹಾಸಂಕಲ್ಪ, ಕಲಶಸ್ಥಾಪನಾ, ಸಪ್ತಶತಿ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶ್ರೀ ಮೃತ್ಯುಂಜಯ ಅಮೃತೇಶ್ವರಿ ಹೋಮ, ಶ್ರೀ ಅಸಿತಾಂಗ ಬ್ರಾಹ್ಮ್ಯಾದಿ ಅಷ್ಟಮಿಥುನಭೈರವಾದಿ ಹೋಮ, ಶ್ರೀ ಬಾಲಾತ್ರಿಪುರ ಸುಂದರೀ, ಶ್ರೀ ರಾಜಶ್ಯಾಮಲ, ಶ್ರೀ ಮಹಾಲಕ್ಷ್ಮೀ, ಶ್ರೀ ಶರಭೇಶ್ವರ, ಶ್ರೀ ಸುಬ್ರಹ್ಮಣ್ಯ, ಶ್ರೀ ಮಹಾಪ್ರತ್ಯಂಗೀರ, ಶ್ರೀ ಭ್ರಮರದುರ್ಗಾ, ಶ್ರೀ ಪಕ್ಷಿದುರ್ಗಾ, ಶ್ರೀ ಅಗ್ನಿದುರ್ಗಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಬಲಿಹರಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್, ಜಯಲಕ್ಷ್ಮಿಪುರಂ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** 11ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ, ಸಂಜೆ 6 ಗಂಟೆಗೆ ಭದ್ರಾವತಿಯ ಜನಪದ ಕಲಾವಿದ ಶ್ರೀ ಮಹಾರಾಜ ಲಕ್ಷ್ಮಣರಾವ್ ಘೋರತ್ ಮತ್ತು ತಂಡದವರಿಂದ ಶ್ರೀ ಅಂಬಾ ಭವಾನಿ ದೇವಿಯ ಮಹಾಗೋಂದಳಿ ಪೂಜೆ, ಪ್ರಸಾದ ವಿನಿಯೋಗ, ಸ್ಥಳ: ಸಮಿತಿ ಆವರಣ, ಕುವೆಂಪುನಗರ.

■ **ವೃತ್ತಿ ರಂಗಭೂಮಿ ರಂಗಾಯಣ ದಾವಣಗೆರೆ :** 15 ದಿನಗಳ ರಂಗ ಸಂಗೀತ ಮತ್ತು ಅಭಿನಯ ರಂಗ ಗೀತೆಗಳ ಕಲಿಕಾ ಕಾರ್ಯಾಗಾರ, ಉದ್ಘಾಟನೆ : ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಅತಿಥಿಗಳು : ರಂಗ ಸಮಾಜದ ಸದಸ್ಯ ಹೆಚ್.ಎಸ್. ಸುರೇಶ್‌ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಹಿರಿಯ ರಂಗಕರ್ಮಿ ವೈ.ಎಂ. ಪುಟ್ಟಣ್ಣಯ್ಯ, ಕುಲಸಚಿವ ಡಾ. ಎಂ.ಜಿ. ಮಂಜುನಾಥ್, ಅಧ್ಯಕ್ಷತೆ : ವೃತ್ತಿ ರಂಗಭೂಮಿ ರಂಗಾಯಣ ದಾವಣಗೆರೆ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ಸ್ಥಳ: ಕೆಎಸ್‌ಜಿಎಚ್ ಸಭಾಂಗಣ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ವಿವಿ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಟಿ. ಉದಯಕಿರಣ್, ಪಿ.ಎಸ್. ರಂಜನಿ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ಮನೋರಂಜನ, 9.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್ ಜಸ್‌ರಾಜ್ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಎಂ. ಪ್ರಭಾಕರ್, 12.45 ಜನಪದ ಸಂಗೀತ–ಬಸವಯ್ಯ ಮತ್ತು ಸಂಗಡಿಗರಿಂದ ಸಂಕಮ್ಮನ ಕಥೆ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಹೆಚ್.ಕೆ. ನಾರಾಯಣ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಚೆಪ್ಪರ್ ಎ.ಇ. ವಾಮನ ನಂಬೂದರಿ – ಹಾಡುಗಾರಿಕೆ, 4.00 ಮಹಿಳಾ ರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ –ಎಸ್. ಈಶ್ವರ ಭಟ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕೃಷಿ ವಿಜ್ಞಾನ ಕೇಂದ್ರದ ವಿಸ್ತರಣಾ ಕಾರ್ಯಕ್ರಮಗಳನ್ನು ಕುರಿತು ಸಂವಾದ ಭಾಗವಹಿಸುತ್ತಾರೆ –ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಪ್ರಧಾನ ವಿಜ್ಞಾನಿ ಡಾ. ಜಿ.ಎಸ್. ಯೋಗೀಶ್ ಮತ್ತು ಚಾಮರಾಜನಗರ ತಾಲೂಕು ಅಂಕನಶೆಟ್ಟಿಪುರದ ಸೌಹಾರ್ದ ರೈತ ಉತ್ಪಾದಕ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸಿ. ಸುರೇಶ್, ಪ್ರಸ್ತುತಿ–ಎನ್. ಕೇಶವಮೂರ್ತಿ, ಬಾನುಲಿ ಬೇಸಾಯ–ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ– ಆರ್. ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ಮೈಸೂರು ಆಕಾಶವಾಣಿಯ 90ರ ಸಂಭ್ರಮದ ಅಂಗವಾಗಿ ವಿಶೇಷ ಕಾರ್ಯಕ್ರಮ ಸರಣಿ ನುಡಿನಾದ ಸಂಗಮ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ನಾಟಕ

ತಲಕಾಡಿನಲ್ಲಿಂದು, ತಿ. ನರಸೀಪುರ ತಾಲೂಕು

■ **ಶ್ರೀ ಹಸ್ತಿಕೇರಿ ಮಠದ ವಿಕಾಸ ವೇದಿಕೆ ಟ್ರಸ್ಟ್ :** ಶ್ರೀಮದ್ ಹಿಮವದ್ ಕೇದಾರ ವೈರಾಗ್ಯ ಸಿಂಹಾಸನಾ ಧೀಶ್ವರ ಶ್ರೀ ಶ್ರೀ 1008 ಜಗದ್ಗುರು ರಾವಲ್ ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜಾ ಮಹೋತ್ಸವ, ಬೆಳಗ್ಗೆ 8.30ಕ್ಕೆ ಆಶೀರ್ವಚನ, ಮಧ್ಯಾಹ್ನ 12ಕ್ಕೆ ಮಹಾಪ್ರಸಾದ, ಅಧ್ಯಕ್ಷತೆ : ಹಸ್ತಿಕೇರಿ ಮಠದ ಮಠಾಧ್ಯಕ್ಷ ಡಾ. ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿಗಳು.

ಧರ್ಮಯ್ಯನ ಹುಂಡಿ, ತಿ. ನರಸೀಪುರ ತಾಲೂಕು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಬಸವ ಬಳಗ :** ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಜನ್ಮ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ, ಸಾನ್ನಿಧ್ಯ : ಸೂರ್ಯಸಿಂಹಾಸನ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಸಮ್ಮುಖ : ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ರಾಜಶೇಖರ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಆಶಯ ನುಡಿ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ : ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ ಕೆಬ್ಬೇಹುಂಡಿ, ಸ್ಥಳ: ಧರ್ಮಯ್ಯನಹುಂಡಿ, ತಿ. ನರಸೀಪುರ ತಾ.

ಬಂಡಿಪಾಳ್ಯ ಎಪಿಎಂಸಿ ಬಳಿ ಅಂಡರ್‌ಪಾಸ್ ಕಾಮಗಾರಿ ಪ್ರಗತಿ

● ವಾಹನದಟ್ಟಣೆ, ಆ ಮೂಲಕ ಅಪಘಾತ ತಡೆಗೆ ಕ್ರಮ ● 2025ರ ಡಿಸೆಂಬರ್ ಒಳಗೆ ಯೋಜನೆ ಪೂರ್ಣ ● ಮೈಸೂರು ಸುತ್ತ ಪ್ರಮುಖ ಜಂಕ್ಷನ್‌ಗಳಲ್ಲಿ ಅಂಡರ್‌ಪಾಸ್ ನಿರ್ಮಾಣ

ಮೈಸೂರು,ಜು.1(ಆರ್‌ಕೆ)– ವಾಹನಗಳ ಸಂಚಾರ ದಟ್ಟಣೆ, ಅಪಘಾತಗಳನ್ನು ತಡೆಯಲು ಮೈಸೂರು ಸುತ್ತಲಿನ ರಾಷ್ಟ್ರೀಯ ಹೆದ್ದಾರಿಗಳ 8 ಕಡೆ ಅಂಡರ್‌ಪಾಸ್ ನಿರ್ಮಿಸಲು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಹೆಚ್‌ಎಐ)ವು ಮುಂದಾಗಿದ್ದು, ಮೈಸೂರು–ನಂಜನಗೂಡು ರಸ್ತೆಯ ಬಂಡಿಪಾಳ್ಯ ಎಪಿಎಂಸಿ ಬಳಿ ಕಾಮಗಾರಿ ಪ್ರಗತಿಯಲ್ಲಿದೆ.

ರಿಂಗ್‌ರೋಡ್ ಜಂಕ್ಷನ್‌ನಿಂದ 1 ಕಿ.ಮೀ. ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಯನ್ನು ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಬಾಕ್ಸ್ ಡ್ರೈನ್, ಮೀಡಿಯನ್, ಸೂಚನಾ ಫಲಕಗಳು, ಬೀದಿದೀಪ ಸೇರಿದಂತೆ ಎಲ್ಲಾ ಮೂಲಸೌಕರ್ಯಗಳೊಂದಿಗೆ ಅಂಡರ್‌ಪಾಸ್ ನಿರ್ಮಿಸಲಾಗುತ್ತಿದ್ದು, ಪ್ರಸಕ್ತ ವರ್ಷಾಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಿ, ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಎನ್‌ಹೆಚ್‌ಎಐ ಅಧಿಕಾರಿಗಳು ತಿಳಿಸಿದ್ದಾರೆ.

ಬಂಡೀಪುರ, ಊಟಿ, ನಂಜನಗೂಡು ಮತ್ತು ಕೇರಳದ ವೈಯನಾಡ್‌ನಂತಹ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ಮೈಸೂರು–ನಂಜನಗೂಡು ರಸ್ತೆ, ಸದಾ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಅದರಲ್ಲೂ ಬಂಡಿಪಾಳ್ಯ ಎಪಿಎಂಸಿ ಬಳಿ ವಾಹನ ದಟ್ಟಣೆ ವಿಪರೀತವಾಗಿ ರುತ್ತದೆ. ಸದ್ಯ ಎಪಿಎಂಸಿ ಬಳಿಯೇ ಅಂಡರ್‌ಪಾಸ್ ನಿರ್ಮಿಸುತ್ತಿರುವುದರಿಂದ ಪ್ರವಾಸಿ ವಾಹನಗಳ ಸುಗಮ ಸಂಚಾರದ ಜೊತೆಗೆ ಎಪಿಎಂಸಿಗೆ ಬಂದುಹೋಗುವ ವಾಹನಗಳ ಸಂಚಾರಕ್ಕೂ ಅನುಕೂಲವಾಗಲಿದೆ.

ಎಲ್ಲೆಲ್ಲಿ ಅಂಡರ್‌ಪಾಸ್?: ರಸ್ತೆ ಸುರಕ್ಷತೆ ಹಾಗೂ ಸಾರ್ವಜನಿಕರ ವಾಹನಗಳು ಸುಗಮವಾಗಿ ಸಂಚರಿಸಲು ಅನುಕೂಲವಾಗುವಂತೆ ಅಗತ್ಯ ಸ್ಥಳದಲ್ಲಿ 1 ಕಿ.ಮೀ. ಉದ್ದದ ಅಂಡರ್‌ಪಾಸ್ ನಿರ್ಮಿಸಲುದ್ದೇಶಿಸಲಾಗಿದೆ. ನಂಜನಗೂಡು ರಸ್ತೆಯ ಎಪಿಎಂಸಿ ಬಳಿ, ಹೊಸಹಳ್ಳಿ ಸಮೀಪ, ಕಳಲೆ ಗ್ರಾಮದ ಬಳಿ, ತಿ.ನರಸೀಪುರದ ಕೆಂಪಯ್ಯನಹುಂಡಿ, ಹುಣಸೂರು ರಸ್ತೆಯ ಬನ್ನಿಕುಪ್ಪೆ ಹಾಗೂ ನಂಜನಗೂಡು ರಸ್ತೆಯ ಗಣಪತಿ ಸಚ್ಚಿದಾನಂದ ಆಶ್ರಮದ ಬಳಿ ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಒಟ್ಟು 40 ಕೋಟಿ: ಕರ್ನಾಟಕ ರಾಜ್ಯ ಸರ್ಕಾರದ ರಾಷ್ಟ್ರೀಯ ಹೆದ್ದಾರಿಗಳ ವಿಭಾಗದ ಸಹಯೋಗದಲ್ಲಿ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರವು ಅಂಡರ್‌ಪಾಸ್ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಂಜನಗೂಡು ಹೆದ್ದಾರಿಯ ಸಚ್ಚಿದಾನಂದ ಆಶ್ರಮ, ಎಪಿಎಂಸಿ ಸೇರಿದಂತೆ ಮೈಸೂರು ಜಿಲ್ಲೆ ವ್ಯಾಪ್ತಿಯ ಹೆದ್ದಾರಿಗಳ 8 ಪ್ರಮುಖ ಜಂಕ್ಷನ್‌ಗಳಲ್ಲಿ ತಲಾ 5 ಕೋಟಿ ರೂ.ಗಳಂತೆ ಒಟ್ಟು 40 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅಂಡರ್‌ಪಾಸ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಎನ್‌ಹೆಚ್‌ಎಐ ಅಧಿಕಾರಿಗಳು ತಿಳಿಸಿದ್ದಾರೆ.

ಅತಿವೇಗ, ಅಜಾಗರೂಕತೆಯ ಚಾಲನೆಯಿಂದಾಗಿ ಮೈಸೂರು–ನಂಜನಗೂಡು ಹೆದ್ದಾರಿ, ಮೈಸೂರು–ತಿ.ನರಸೀಪುರ ಹೆದ್ದಾರಿ ಹಾಗೂ ಮೈಸೂರು–ಹುಣಸೂರು ಹೆದ್ದಾರಿಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಇದರಿಂದ ಅಪಾರ ಮಂದಿ ಸಾವು–ನೋವಿಗೆ ತುತ್ತಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೆದ್ದಾರಿಗಳಲ್ಲಿ ರಸ್ತೆ ಸುರಕ್ಷತೆ ಹಾಗೂ ಸುಗಮ ಸಂಚಾರಕ್ಕೆ ಸಹಕಾರಿಯಾದ ಅಂಡರ್‌ಪಾಸ್‌ಗಳನ್ನು 8 ಕಡೆಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ಮೈಸೂರು ನಗರ ಮತ್ತು ಜಿಲ್ಲಾ ಸಂಚಾರ ಪೊಲೀಸರೊಂದಿಗೆ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಅಂಡರ್‌ಪಾಸ್ ನಿರ್ಮಿಸಲು ಗುರುತಿಸಿರುವ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದರು. ಆ ವೇಳೆ ಸಂಚಾರ ದಟ್ಟಣೆ ನಿಯಂತ್ರಿಸಿ, ಸುಗಮ ಸಂಚಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಿ, ಯೋಜನೆ ರೂಪಿಸಿದ್ದರು.

ಈಗಾಗಲೇ ಎಪಿಎಂಸಿ ಬಳಿ ಅಂಡರ್‌ಪಾಸ್ ಕಾಮಗಾರಿ ತೀವ್ರಗತಿಯಲ್ಲಿ ನಡೆಯುತ್ತಿದ್ದು, 2025ರ ಡಿಸೆಂಬರ್ ಮಾಹೆಯೊಳಗಾಗಿ ಪೂರ್ಣಗೊಳಿಸುವಂತೆ ಟೆಂಡರ್ ಪಡೆದಿರುವ ಆಂಧ್ರ ಪ್ರದೇಶ ಮೂಲದ ಕೃಷಿ ಇನ್‌ಫ್ರಾಟೆಕ್ ಲಿಮಿಟೆಡ್ ಸಂಸ್ಥೆಗೆ ಸೂಚನೆ ನೀಡಲಾಗಿದೆ. ಉಳಿದ 7 ಕಡೆಗಳಲ್ಲೂ ಶೀಘ್ರ ಕಾಮಗಾರಿ ಆರಂಭವಾಗುವ ನಿರೀಕ್ಷೆ ಇದೆ.



ಮೈಸೂರು–ನಂಜನಗೂಡು ಹೆದ್ದಾರಿಯ ಬಂಡಿಪಾಳ್ಯ ಎಪಿಎಂಸಿ ಬಳಿ ಅಂಡರ್‌ಪಾಸ್ ಕಾಮಗಾರಿ ಪ್ರಗತಿಯಲ್ಲಿರುವುದು.

ಹೃದಯಾಘಾತಕ್ಕೆ ನೈಜ ಕಾರಣ ಪತ್ತೆ ಮಾಡಿ, ಅದನ್ನು ತಡೆಯಲು ನಾವು ಬದ್ಧ

ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮೂಲಕ ಭರವಸೆ; ಹೃದಯ ಜ್ಯೋತಿ, ಗೃಹ ಆರೋಗ್ಯದ ಮೂಲಕ ಜನರ ಆರೋಗ್ಯದ ಮೇಲೆ ನಿಗಾ

ಬೆಂಗಳೂರು, ಜು.1(ಕೆಎಂಶಿ)– ಅಧಿಕ ಮಂದಿ ಹೃದಯಾಘಾತದಿಂದ ಸಾವಿಗೀಡಾಗುತ್ತಿರುವುದಕ್ಕೆ ನಿಖರ ಕಾರಣ ಪತ್ತೆ ಹಚ್ಚಿ, ಪರಿಹಾರ ಮಾರ್ಗೋಪಾಯ ಕಂಡುಕೊಳ್ಳಲು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ರವೀಂದ್ರನಾಥ್ ನೇತೃತ್ವದಲ್ಲಿ ತಜ್ಞರ ಸಮಿತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕ ಮಾಡಿದ್ದಾರೆ.

ಸಮಿತಿ 10 ದಿನದೊಳಗೆ ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ನೀಡುವಂತೆ ಆದೇಶ ಮಾಡಿದ್ದಾರೆ. ರಾಜ್ಯದಲ್ಲಿ ಎಳೆಯ ವಯಸ್ಸಿನವರು, ಯುವಜನರ ಹಠಾತ್ ನಿಧನಕ್ಕೆ ಕಾರಣಗಳೇನು, ಕೋವಿಡ್ ಲಸಿಕೆ ದುಷ್ಪರಿಣಾಮಗಳೇನಾದರೂ ಇರಬಹುದೇ ಎಂದು ಕೂಲಂಕುಷವಾಗಿ ಅಧ್ಯಯನ ನಡೆಸಲು ಇದೇ ಸಮಿತಿಗೆ ಫೆಬ್ರವರಿಯಲ್ಲೇ ಆದೇಶ ಮಾಡಲಾಗಿತ್ತು.

ತಜ್ಞ ವೈದ್ಯರ ತಂಡ ಹೃದ್ರೋಗಿಗಳನ್ನು ಪರೀಕ್ಷೆಗೊಳಪಡಿಸಿ ವಿಶ್ಲೇಷಣೆ ಮಾಡುವ ಕಾರ್ಯವೂ ನಡೆದಿದೆ. ಆದರೆ, ಅಲ್ಪ ಕಾಲದಲ್ಲೇ ಹಠಾತ್ ಹೃದಯಾಘಾತಕ್ಕೆ ಒಳಗಾಗಿ ಸಾವಿಗೀಡಾಗುತ್ತಿರುವುದು ಆಘಾತಕಾರಿ ವಿಷಯವಾಗಿದೆ.

ಅದರಲ್ಲೂ ಹಾಸನ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಲು ಕಾರಣ ಏನೆಂಬ ಬಗ್ಗೆಯೂ ತಜ್ಞರು ತಪಾಸಣೆ ನಡೆಸಲಿದ್ದಾರೆ.

ಬದುಕಿ ಬಾಳಬೇಕಾದ ಸಣ್ಣ ವಯಸ್ಸಿನವರು, ಯುವಜನರು, ಅಮಾಯಕ ಜೀವಗಳ ಬಲಿ, ಅವರ ಕುಟುಂಬಸ್ಥರ ಕಾಳಜಿ ನಮಗೂ ಇದೆ. ಆತುರಾತುರವಾಗಿ ಕೊರೊನಾ ಲಸಿಕೆಗೆ ಅಧಿಕೃತ ಅನುಮೋದನೆ ಕೊಟ್ಟು ಜನರಿಗೆ ನೀಡಿದ್ದೂ ಕೂಡಾ ಈ ಸಾವಿಗೆ ಕಾರಣವಿರಬಹುದು ಎಂಬುದನ್ನು ಅಲ್ಲಗಳೆಯಲಾಗದು. ವಿಶ್ವದ ಅನೇಕ ಅಧ್ಯಯನಗಳು ಇತ್ತೀಚೆಗೆ ಹೆಚ್ಚಾಗಿರುವ ಹೃದಯಸ್ತಂಭನಕ್ಕೆ ಕೋವಿಡ್ ಲಸಿಕೆ ಕಾರಣ ಎಂಬುದನ್ನು ಹೇಳಿವೆ.

ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರಣಿ ಸಾವುಗಳಿಗೆ ನೈಜ ಕಾರಣ ಪತ್ತೆ ಮಾಡಿ, ತಡೆಯುವಲ್ಲಿ ನಾವು ಸಂಪೂರ್ಣ ಬದ್ಧರಿದ್ದೇವೆ ಈ ಉದ್ದೇಶದಿಂದಲೇ ಹೃದಯ ಜ್ಯೋತಿ ಮತ್ತು ಗೃಹ ಆರೋಗ್ಯದಂತಹ ಯೋಜನೆಗಳನ್ನು ಈಗಾಗಲೇ ಜಾರಿಗೆ ಕೊಟ್ಟು ಸಾರ್ವಜನಿಕರ ಆರೋಗ್ಯದ ಮೇಲೆ ನಿಗಾ ವಹಿಸಲಾಗಿದೆ.

ಜನರ ಆರೋಗ್ಯ ರಕ್ಷಣೆಗಾಗಿ ಸರ್ಕಾರದಿಂದ ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದು ಸಾರ್ವಜನಿಕರು ಎದೆ ನೋವು, ಉಸಿರಾಟದ ತೊಂದರೆ ಕಂಡು ಬಂದರೆ, ಅಲಕ್ಷ್ಯ ಮಾಡದೆ ಸಮೀಪದ ಆರೋಗ್ಯ ಕೇಂದ್ರಗಳಿಗೆ ತೆರಳಿ ವೈದ್ಯಕೀಯ ಪರೀಕ್ಷೆಗೆ ಒಳಪಡುವಂತೆ ಟ್ವೀಟ್ ಮೂಲಕ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

3ನೇ ವರ್ಷದ ಸವಿನೆನಪು



ಎನ್.ಪಂಚಲಿಂಗಯ್ಯ

ನಿಧನ: 02.07.2022 ಎಂಸಿಸಿ ನಿವೃತ್ತಿ
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತ್ನಿ ಚಿಕ್ಕದೇವಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬದವರು, ನಜರ್‌ಬಾದ್ ಮೈಸೂರು

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, ಶ್ರೀ ನಿಂಗರಾಜು ಬಿನ್ ಶ್ರೀ ಮೂಗನಾಯಕ, ನಂಬರ್ 183, ಎಸ್. ಬೆಳತ್ತೂರು ಗ್ರಾಮ ಅಂತರಸಂತೆ ಹೋಬಳಿ, ಹೆಗ್ಗಡದೇವನಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ ಎಂಬುವವರಿಂದ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು ಈ ಪ್ರಕಟಣೆಯಾದ ಹದಿನೈದು ದಿನಗಳೊಳಗಾಗಿ ತಿಳಿಸತಕ್ಕದ್ದು, ಈ ಮೇಲೆ ಹೇಳಿದ ಹದಿನೈದು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರೀ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಹದಿನೈದು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್


1. ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಅಂತರಸಂತೆ ಹೋಬಳಿ ಹಳೆಮಗ್ಗೆ ಗ್ರಾಮದ 1 ಎಕರೆ 36 ಗುಂಟೆ ವಿಸ್ತೀರ್ಣವುಳ್ಳ ಸರ್ವೆ ನಂಬರ್ 4/2 ರ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಎಂ.ಎಂ.ರಸ್ತೆ ; ಪಶ್ಚಿಮಕ್ಕೆ: ಡಿ. ಸುಂದರದಾಸ್‌ರವರ ಜಮೀನು ; ಉತ್ತರಕ್ಕೆ: ಅಪ್ಪಾಜಿಯವರ ಸರ್ವೆ ನಂಬರ್ 4/3 ರ ಜಮೀನು ; ದಕ್ಷಿಣಕ್ಕೆ: ಸುನಂದಮ್ಮನವರಿಗೆ ಸೇರಿದ ಸರ್ವೆ ನಂಬರ್ 4/4.

2. ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಅಂತರಸಂತೆ ಹೋಬಳಿ ಹಳೆಮಗ್ಗೆ ಗ್ರಾಮದ 1 ಎಕರೆ 36 ಗುಂಟೆ ವಿಸ್ತೀರ್ಣವುಳ್ಳ ಸರ್ವೆ ನಂಬರ್ 4/4 (ಈ ಹಿಂದಿನ ಸರ್ವೆ ನಂಬರ್ 4/2 ಭಾಗ) ರ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಎಂ.ಎಂ.ರಸ್ತೆ ; ಪಶ್ಚಿಮಕ್ಕೆ: ಡಿ. ಸುಂದರದಾಸ್‌ರವರ ಜಮೀನು ; ಉತ್ತರಕ್ಕೆ: ಸರ್ವೆ ನಂಬರ್ 4/2ರ ಜಮೀನು ; ದಕ್ಷಿಣಕ್ಕೆ: ಸರ್ವೆ ನಂಬರ್ 4/1 ರ ಜಮೀನು.

Sd/- A.V. Jayarama Rao, B.A., LL.B.
Advocate, No. 1230/A, CH 36/A, 2nd Cross (Behind Ramamandira), Krishnamurthypuram, Chamaraja Mohalla, Mysore-570 004.
Date: 26-6-2025







ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯಿತಿ ಕಾರ್ಯಾಲಯ, ರಮ್ಮನಹಳ್ಳಿ
TOWN PANCHYATHI, RAMMANAHALLI, MYSURU DISTRICT-570019
ಮೈಸೂರು ಜಿಲ್ಲೆ–570019, ದೂರವಾಣಿ ಸಂಖ್ಯೆ : 0821–2001931
ಇ–ಮೇಲ್: itstaff_ulb_rammanahalli@yahoo.com, www.rammanahalli.mrc.gov.in

ಸಂಖ್ಯೆ : ಪ.ಪಂ.ರ/ತಾಂತ್ರಿಕ/ಸಿ.ಆರ್–01/2025–26 ದಿನಾಂಕ : 30.06.2025

ಟೆಂಡರ್ ಪ್ರಕಟಣೆ

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾಮಾನ್ಯ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–01 ನಿಯಮದಂತೆ ಟೆಂಡರ್ ಕರೆಯಲಾಗಿದ್ದು, ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ರಿಂಗ್ ರಸ್ತೆ ಹಂಸ ಕಫೆ ಹತ್ತಿರ ಸಾತಗಳ್ಳಿ ಬಿ ಝೋನ್‌ನಲ್ಲಿ ಒಳಚರಂಡಿ ಮಾರ್ಗವನ್ನು ಬದಲಾಯಿಸುವ ಕಾಮಗಾರಿ. ಅಂದಾಜು ಮೊತ್ತ **ರೂ. 4.50** ಲಕ್ಷ, ಮುಂಗಡ ಠೇವಣಿ ಮೊತ್ತ **ರೂ.11,250.00** ಹಾಗೂ ಟೆಂಡರ್ ಫಾರಂ ಬೆಲೆ **ರೂ. 500 +** ತೆರಿಗೆ. ಮೇಲ್ಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೇದಾರರು ಟೆಂಡರ್ ಫಾರಂಗಾಗಿ **ದಿನಾಂಕ: 17.07.2025 ರ ಸಂಜೆ 4:00 ರವರೆಗೆ** ಅರ್ಜಿ ಸಲ್ಲಿಸಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ **ಕೊನೆಯ ದಿನಾಂಕ: 18.07.2025 ರ ಸಂಜೆ 4:00 ರವರೆಗೆ** ಹಾಗೂ ಟೆಂಡರ್‌ಗಳನ್ನು ತೆರೆಯುವ **ದಿನಾಂಕ:18.07.2025 ಸಂಜೆ 5:30 ರವರೆಗೆ** ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

ವಾಸಾಸಂಇ/ಮೈಸೂರು/ಶಿರಡಿ ಸಾಯಿ/553/2025–26

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಿಮ್ಮ ಮಂಡಿ ಸರ್ಜರಿ ಆದ ಮೇಲೆ ಕೆಲ ದಿನ ವಾಕರ್ ಉಪಯೋಗಿಸಬೇಕಾಗುತ್ತೆ.

ಗುಂಡ : ಪರ್ವಾಗಿಲ್ಲ ಡಾಕ್ಟ್ರೇ... 'ಜಾನಿ ವಾಕರ್' ಆಗಬಹುದಾ ಡಾಕ್ಟ್ರೇ?

ಮೈಸೂರು ಮಿತ್ರ
ಬುಧವಾರ, 2 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಅಂಜಿ ಬದುಕಬೇಕಾಗಿರುವುದು ಭಗವಂತನಿಗೆ ಹೊರತು, ಯಾರೋ ಎಲುಬಿಲ್ಲದ ನಾಲಿಗೆಯಿಂದ ನಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ ಎಂಬ ನಾಲ್ಕು ಜನರಿಗೆ ಅಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ

ನಿಮ್ಮ ಪತ್ರಗಳು

ಹದಗೆಟ್ಟಿರುವ ರಸ್ತೆ ಸರಿಪಡಿಸುವುದೆಂದು?



ಮಾನ್ಯರೆ,

ಮೈಸೂರಿನ ಹೃದಯ ಭಾಗದ ರಸ್ತೆಗಳಲ್ಲೊಂದಾದ ವಿ.ವಿ. ಮೊಹಲ್ಲಾದ 2ನೇ ಮುಖ್ಯ ರಸ್ತೆ (ನಿರ್ಮಲಾ ಕಾನ್ವೆಂಟ್ ರಸ್ತೆ)ಯು ಹಳ್ಳಕೊಳ್ಳಗಳಿಂದ ಕೂಡಿದ್ದು, ದ್ವಿಚಕ್ರ ವಾಹನ ಚಾಲಕರು ಹಾಗೂ ಪಾದಚಾರಿಗಳಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಕಾರಣ ಇಲ್ಲಿ ದ್ವಿಚಕ್ರ ವಾಹನ ಓಡಿಸುವುದೇ ಹರಸಾಹಸ ವಾಗಿದೆ. ರಸ್ತೆ ಎಲ್ಲೆಂದರಲ್ಲಿ ಹಳ್ಳ-ದಿಣ್ಣೆಗಳಿಂದ ಕೂಡಿದೆ. ಇದರ ಜೊತೆಗೆ ಇಲ್ಲಿ ನಿರ್ಮಲಾ ಕಾನ್ವೆಂಟ್ ಸಹ ಇರುವುದರಿಂದ ವಿದ್ಯಾರ್ಥಿಗಳು ಬಹಳ ಎಚ್ಚರಿಕೆಯಿಂದ ನಡೆದುಕೊಂಡು ಹೋಗುವ ಪರಿಸ್ಥಿತಿ ಉಂಟಾಗಿದೆ. ವಾಯುವಿಹಾರಕ್ಕೆ ಚೆಲುವಾಂಬ ಉದ್ಯಾನವನಕ್ಕೆ ತೆರಳುವವರಿಗೂ ಇದರಿಂದ ಸಾಕಷ್ಟು ಕಿರಿಕಿರಿ ಉಂಟಾಗಿರುವುದರಿಂದ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಆದಷ್ಟು ಬೇಗ ಎಚ್ಚೆತ್ತುಕೊಂಡು ಈ ರಸ್ತೆಯನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಂಡು ಜನರು ನಿರಾಳವಾಗಿ ಈ ರಸ್ತೆಯಲ್ಲಿ ಸಂಚರಿಸಲು ಅನುವು ಮಾಡಿಕೊಡಬೇಕಿದೆ.

–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಮತದಾರನ ಗುರುತಿನ ಚೀಟಿ ಕೊಡಿಸಿದ ಶಾಸಕ ಹರೀಶ್‌ಗೌಡರಿಗೆ ಅಭಿನಂದನೆ

ಮಾನ್ಯರೆ,

ಸಹಕಾರ ಸಂಘದ ಗುರುತಿನ ಚೀಟಿ ಕಳೆದುಕೊಂಡ ಮತದಾರನಿಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಗುರುತಿನ ಚೀಟಿಯ ನಕಲು ಪ್ರತಿ ನೀಡಲು ವಿಪರೀತ ಸತಾಯಿಸಿದರು. ಅವರ ಈ ನಡೆ ತುಂಬಾ ಖಂಡನೀಯ. ನಾವುಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೊ ಅಥವಾ ಇಲ್ಲವೊ ಎಂಬುದು ತಿಳಿಯುತ್ತಿಲ್ಲ. ಸಂವಿಧಾನ ಕೊಟ್ಟಿರುವ ಅವಕಾಶವನ್ನು ಕಸಿದುಕೊಳ್ಳುವುದು ಒಳ್ಳೆಯ ಬೆಳವಣಿಗೆಯಲ್ಲ. ಚಾಮರಾಜನಗರ ತಾಲೂಕು ಕ್ಷೇತ್ರದ ಪುಣಜನೂರು ಕೃಷಿ ಪತ್ತಿನ ಸಹಕಾರ ಸಂಘದ ಮತದಾರ ಗುರುನಾಯಕ ಎಂಬುವರು ಗುರುತಿನ ಚೀಟಿ ಕಳೆದುಕೊಂಡಿದ್ದರು. ಅದನ್ನು ಕೊಡಿಸಲು 4 ಘಂಟೆಗಳ ಕಾಲ ಕಾದು ಕುಳಿತುಕೊಳ್ಳಬೇಕಾಯಿತು. ಕೊನೆಗೆ ಚುನಾವಣಾಧಿಕಾರಿ ಕಚೇರಿಯಿಂದ ಗುರುತಿನ ಚೀಟಿಯ ದೃಢೀಕೃತ ಪ್ರತಿಯನ್ನು ತರಿಸಿಕೊಟ್ಟ ಬ್ಯಾಂಕ್‌ನ ಮಾಜಿ ಅಧ್ಯಕ್ಷರು ಹಾಗೂ ಹುಣಸೂರಿನ ಶಾಸಕರೂ ಆದ ಜಿ.ಡಿ.ಹರೀಶ್‌ಗೌಡರಿಗೆ ಅಭಿನಂದನೆಗಳು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಮಾನವೀಯತೆಯ ಮೌಲ್ಯ ಎತ್ತ ಸಾಗಿದೆ

ಮಾನ್ಯರೆ,

ಸಮಾಜ ಎತ್ತ ಸಾಗಿದೆ. ಮನುಜ ಮನುಷ್ಯತ್ವವನ್ನೇ ಮರೆತನೆ. ಒಂದೊಂದು ಪ್ರಕರಣವು ಮನುಷ್ಯನ ಕ್ರೂರತ್ವವನ್ನು ತೋರಿಸುತ್ತಿದೆ. ಮನುಷ್ಯನ ದ್ವೇಷಕ್ಕೆ ಮೂಕ ಪ್ರಾಣಿಗಳು ಬಲಿಯಾಗುತ್ತಿದೆ. ಇದಕ್ಕೆ ಮಾಟ ಮಂತ್ರವು ಕಾರಣವಾಗುತ್ತಿದೆ. ಅಮೂಲ್ಯವಾದ ಸಂಬಂಧಗಳು, ತಾಯಿ ಮಕ್ಕಳ ಸಂಬಂಧ, ಸಹೋದರ ಸಹೋದರಿಯರ ಸಂಬಂಧ ಕುಟುಂಬದ ವ್ಯವಸ್ಥೆಯಲ್ಲಿ ಮರೆಯಾಗಿದೆ. ಹಣಕ್ಕೆ, ಸ್ವಾರ್ಥಕ್ಕೆ ಬೆಲೆ ನೀಡುತ್ತಿದ್ದಾನೆ. ಇದೆಲ್ಲಾ ನೋಡುತ್ತಿದ್ದರೆ ಮನುಷ್ಯನ ಮಾನವೀಯತೆಯ ಮೌಲ್ಯ ಎತ್ತ ಸಾಗಿದೆ ಎಂಬ ಪ್ರಶ್ನೆ ಕಾಡುತ್ತದೆ. ಎಲ್ಲರ ಮನಸ್ಸನ್ನು ಅರಿಯುವ ಮನಶಾಸ್ತ್ರಜ್ಞರು ಈ ನಡವಳಿಕೆಗೆ ಉತ್ತರ ನೀಡಿ ಸರಿದಾರಿಯತ್ತ ಕರೆದೊಯ್ಯಬೇಕಾಗಿದೆ. ಮಾನವೀಯತೆಯ ಪಾಠಗಳು ಪಠ್ಯಪುಸ್ತಕಗಳಲ್ಲಿ ಸೇರಬೇಕಾಗಿದೆ

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಯುವ ಜನಾಂಗಕ್ಕೆ ಧೈರ್ಯ ತುಂಬುವ ಕೆಲಸ ಮಾಡಿ

ಮಾನ್ಯರೆ,

ಹಾಸನ ಜಿಲ್ಲೆಯಲ್ಲಿ ಇತ್ತೀಚೆಗೆ ಯುವಕರು ಹೃದಯಾಘಾತದಿಂದ ಸಾವಿಗೀಡಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಆದರೆ ಕೆಲವು ಖಾಸಗಿ ದೃಶ್ಯ ಮಾಧ್ಯಮಗಳು ಈ ವಿಚಾರವನ್ನು ಜನರು ಭಯ ಪಡುವ ರೀತಿಯಲ್ಲಿ ಪದೇ-ಪದೆ ತೋರಿಸಿ ಒಂದು ರೀತಿಯಲ್ಲಿ ಭಯ ಉಂಟು ಮಾಡುತ್ತಿವೆ. ಈ ಕಾರಣಕ್ಕಾಗಿಯೇ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಜನರು ಕಾಲಿಡದಂತಹ ಸ್ಥಿತಿ ನಿರ್ಮಾಣವಾಗಿದೆ. ಕೋವಿಡ್‌ಗಿಂತಲೂ ಭಯಂಕರವಾಗಿ, ವರ್ಣರಂಜಿತವಾಗಿ ಇದರ ಬಗ್ಗೆ ವ್ಯಾಖ್ಯಾನ ಮಾಡಿ, ಯುವ ಜನಾಂಗ ಒಂದು ರೀತಿಯಲ್ಲಿ ಮಾನಸಿಕವಾಗಿ ಭಯ ಭೀತರಾಗುವಂತೆ ಬಿಂಬಿಸಲಾಗುತ್ತಿದೆ. ಸರ್ಕಾರ ಈ ಬಗ್ಗೆ ಕೆಲವು ಖಾಸಗಿ ಮಾಧ್ಯಮಗಳಿಗೆ ಕಡಿವಾಣ ಹಾಕಬೇಕು. ಯುವ ಜನಾಂಗಕ್ಕೆ ಧೈರ್ಯ ತುಂಬುವ ಕೆಲಸ ಮಾಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಬಾನು ಮುಷ್ತಾಕ್, ದೀಪಾ ಭಾಸ್ತಿ ಜಂಟಿಯಾಗಿ ದಸರಾ ಉದ್ಘಾಟಿಸಲಿ

ಮಾನ್ಯರೆ,

ವಿಶ್ವ ವಿಖ್ಯಾತ ಮೈಸೂರು ದಸರಾ ಸಮೀಪಿಸುತ್ತಿದೆ. ಇದು ಸಂತಸದ ವಿಷಯ. ಇದರ ಜೊತೆಗೆ ದಸರಾ ನಡೆಸುವ ಸಂಬಂಧ ಮುಖ್ಯಮಂತ್ರಿಯವರು ಮೈಸೂರು ಭಾಗದ ಜನಪ್ರತಿನಿಧಿಗಳೊಡನೆ ಹಾಗೂ ಹಿರಿಯ ಅಧಿಕಾರಿಗಳೊಡನೆ ಉನ್ನತ ಮಟ್ಟದ ಸಭೆ ನಡೆಸಿರುವುದಾಗಿ ವರದಿಯಾಗಿದ್ದು, ಅಂತಿಮವಾಗಿ ದಸರಾ ಉದ್ಘಾಟನೆಯನ್ನು ಕನ್ನಡ ಭಾಷೆಯ (ನಮ್ಮ ಭಾಷೆ) ಒಂದು ಕೃತಿಗೆ ಅಂತರ ರಾಷ್ಟ್ರೀಯ ಬೂಕರ್ ಪ್ರಶಸ್ತಿ ತಂದು ಕೊಟ್ಟ ಲೇಖಕಿ ಬಾನು ಮುಷ್ತಾಕ್ ಅಥವಾ ದೀಪಾ ಭಸ್ತಿಯವರ ಹೆಸರನ್ನು ಹೆಸರಿಸಿರುವುದು ಬಹಳ ಸಂತಸದ ವಿಷಯ. ಆದರೆ ಬೂಕರ್ ಪ್ರಶಸ್ತಿ ಲಭಿಸುವುದಕ್ಕೆ ಈ ಇಬ್ಬರೂ ಲೇಖಕಿಯರ ಸಹಕಾರವೂ ಇದೆ. ಬಾನು ಮುಷ್ತಾಕ್ ಅವರು ಕೃತಿಕಾರರಾದರೆ, ದೀಪಾ ಭಸ್ತಿಯವರು ಅನುವಾದಕರಾಗಿ ಆಂಗ್ಲ ಭಾಷೆಗೆ ಅನುವಾದಿಸಿದ್ದಾರೆ. ಆದ್ದರಿಂದ ಕನ್ನಡಕ್ಕೆ ಬೂಕರ್ ಪ್ರಶಸ್ತಿ ಲಭಿಸಲು ಈ ಇಬ್ಬರು ಲೇಖಕಿ ಹಾಗೂ ಅನುವಾದಕಿ ಯರ ಸಹಕಾರ ಬಹಳ ಮುಖ್ಯ. ಆದ್ದರಿಂದ ದಸರಾ ಮಹೋತ್ಸವವನ್ನು ಇವರಿಬ್ಬರು ಜಂಟಿಯಾಗಿ ಉದ್ಘಾಟಿಸಲಿ ಎಂಬುದು ನನ್ನ ಆಶಯ.

–ಪ್ರದೀಪ್, ಯರಗನಹಳ್ಳಿ, ಮೈಸೂರು

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ವಿಜ್ಞಾನ ಭಿಕ್ಷು ವಿರಚಿತ ಯೋಗ ಸಾರ ಸಂಗ್ರಹ

ಯೋಗಶಾಸ್ತ್ರದ ಆಧಾರ ಗ್ರಂಥಗಳು ಪತಂಜಲಿಯ ಯೋಗ ಸೂತ್ರಗಳು, ಅವುಗಳ ಮೇಲೆ ವ್ಯಾಸನು ರಚಿಸಿರುವ ಭಾಷ್ಯ ಮತ್ತು ಇವುಗಳನ್ನು ವಿವರಿಸುವ ವಾಚಸ್ಪತಿ ಮಿಶ್ರನ ಯೋಗ ವೈಶಾರದೀ ಎಂಬ ವ್ಯಾಖ್ಯಾನ. ಪತಂಜಲಿಯ ಕಾಲ ಕ್ರಿಸ್ತ ಪೂರ್ವ ಒಂದನೆಯ ಅಥವಾ ಎರಡನೆಯ ಶತಮಾನವಿರಬಹುದೆಂದೂ, ಭಾಷ್ಯಕಾರ ವ್ಯಾಸನಕಾಲ ಕ್ರಿಸ್ತಶಕ ನಾಲ್ಕನೆಯ ಶತಮಾನವಾಗಿದ್ದಿರಬಹುದೆಂದೂ ಊಹಿಸಲಾಗಿದೆ. ವಾಚಸ್ಪತಿ ಮಿಶ್ರನ ಕಾಲ ಸುಮಾರು ಒಂಬತ್ತನೆಯ ಅಥವಾ ಹತ್ತನೆಯ ಶತಮಾನ. ಇದಾದ ಮೇಲೆ ಕ್ರಿಸ್ತಶಕ ಹದಿನಾಲ್ಕನೆಯ ಅಥವಾ ಹದಿನೈದನೆಯ ಶತಮಾನದಲ್ಲಿದ್ದ ವಿಜ್ಞಾನ ಭಿಕ್ಷು ಎಂಬ ಮಹಾಮೇಧಾವಿಯು ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಗಳ ಮೇಲೆ ಅಪಾರ ಪರಿಣಾಮವನ್ನು ಬೀರಿದ ಹಲವು ಗ್ರಂಥಗಳನ್ನು ಬರೆದನು. ಸಾಂಖ್ಯ, ಯೋಗ, ವೇದಾಂತ ಶಾಸ್ತ್ರಗಳಲ್ಲಿ ಪರಿಣತನಾಗಿದ್ದು, ಈ ಶಾಸ್ತ್ರಗಳಿಗೆ ದೊಡ್ಡ ಕೊಡುಗೆ ನೀಡಿದ್ದಾನೆ. ಈ ಶಾಸ್ತ್ರಗಳಲ್ಲಿರುವ ವಿಷಮಾಂಶಗಳನ್ನು ಬದಿಗೊತ್ತಬೇಕು. ಸಮನ್ವಯವನ್ನು ಸಾಧಿಸಾಧಿಸಬೇಕು ಎನ್ನುವುದು ವಿಜ್ಞಾನ ಭಿಕ್ಷುವಿನ ಧ್ಯೇಯ.

ವಿಜ್ಞಾನ ಭಿಕ್ಷು ವಿರಚಿತ ಗ್ರಂಥಗಳು ಅನೇಕ.

1) ಯೋಗಸಾರ ಸಂಗ್ರಹ 2) ಸಾಂಖ್ಯ ಪ್ರವಚನ ಭಾಷ್ಯ, 3) ಬ್ರಹ್ಮ ಮೀಮಾಂಸಾಭಾಷ್ಯ 4) ಈಶ್ವರ ಗೀತಾ ಭಾಷ್ಯ 5) ಪ್ರಶ್ನೋಪನಿಷದಾಲೋಕ 6) ಯೋಗವಾರ್ತಿಕ 7) ಸಾಂಖ್ಯಸಾರಮ್ ಎಂಬವು ಉಪಲಬ್ಧವಾಗಿವೆ.

ಯೋಗ ಸಾರ ಸಂಗ್ರಹದಲ್ಲಿ ನಾಲ್ಕು ಭಾಗಗಳಿದ್ದು ಅವುಗಳನ್ನು ಅಂಶ ಎಂದು ಕರೆಯಲಾಗಿದೆ. ಇವು ಯೋಗ ಸೂತ್ರಗಳ ನಾಲ್ಕು ಪಾದಗಳಿಗೆ ಸಂವಾದಿಯಾಗಿವೆ ಎಂದರೆ ಸಮಾಧಿಪಾದದ ವಿಷಯಗಳನ್ನು ಪ್ರಥಮ ಅಂಶದಲ್ಲೂ, ಸಾಧನಪಾದದ ವಿಷಯಗಳನ್ನು ದ್ವಿತೀಯ ಅಂಶದಲ್ಲೂ, ವಿಭೂತಿಪಾದದ ವಿಷಯಗಳನ್ನು ತೃತೀಯ ಅಂಶದಲ್ಲೂ, ಕೈವಲ್ಯಪಾದದ ವಿಷಯಗಳನ್ನು ಚತುರ್ಥ ಅಂಶದಲ್ಲೂ ಚರ್ಚಿಸಲಾಗಿದೆ. ಯೋಗವಾರ್ತಿಕ ಮುಂತಾದ ಗ್ರಂಥಗಳಲ್ಲಿ ತಾನು ಹೇಳಿರುವುದನ್ನು ವಿಜ್ಞಾನಭಿಕ್ಷು ಯೋಗಸಾರ ಸಂಗ್ರಹದಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾನೆ ಎನ್ನಬಹುದು.

ಮೊದಲನೆಯ ಯೋಗ ಸೂತ್ರ ಅಥ ಯೋಗಾನುಶಾಸನಮ್ ಶಾಸ್ತ್ರದ ಆರಂಭವನ್ನು ತಿಳಿಸುತ್ತದೆ. ಎರಡನೆಯ ಸೂತ್ರ ಯೋಗಶ್ಚಿತ್ತ ವೃತ್ತಿ ನಿರೋಧಃ ಯೋಗದ ಲಕ್ಷಣವನ್ನು ತಿಳಿಸುತ್ತದೆ. ಚಿತ್ತವೆಂದರೆ ಅಂತಃಕರಣ. ಇದರಲ್ಲಿ ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಿ ಎಂಬ ಐದು ವೃತ್ತಿಗಳಿವೆ. ಇವುಗಳ ನಿರೋಧವನ್ನು ಮಾಡಿದರೆ ಯೋಗ. ಯೋಗ ಎಂಬುದರ ಮುಖ್ಯಾರ್ಥ ಸಮಾಧಿ. ಹಾಗಿದ್ದರೆ ಆಸನ ಇತ್ಯಾದಿಗಳು ಯೋಗವಲ್ಲವೆ? ಅವೂ ಯೋಗವೇ. ಏಕೆಂದರೆ ಅವು ಸಮಾಧಿಸ್ಥಿತಿಯನ್ನು ಪಡೆಯಲು ಬೇಕಾದ ಸಾಧನಗಳು. ಸಮಾಧಿಯು ಎರಡು ವಿಧ–ಸಂಪ್ರಜ್ಞಾತ ಸಮಾಧಿ ಮತ್ತು ಅಸಂಪ್ರಜ್ಞಾತ ಸಮಾಧಿ. ಇವುಗಳನ್ನು ವಿಜ್ಞಾನ ಭಿಕ್ಷು ಚೆನ್ನಾಗಿ ವಿವರಿಸಿದ್ದಾನೆ. ಸಂಪ್ರಜ್ಞಾತ ಸಮಾಧಿಯಲ್ಲಿ ವಿತರ್ಕ, ವಿಚಾರ, ಆನಂದ, ಅಸ್ಮಿತಾ ಎಂಬ ನಾಲ್ಕು ಹಂತಗಳಿವೆ. ಧ್ಯಾನಕ್ಕಾಗಿ ಸ್ವೀಕರಿಸಿದ ವಸ್ತು ಸ್ಥೂಲವಾಗಿದ್ದರೆ ಆ ಸ್ಥಿತಿಯನ್ನು ವಿತರ್ಕ ಎಂದು ಕರೆಯುತ್ತೇವೆ. ಆ ವಸ್ತು ಸೂಕ್ಷ್ಮವಾದಾಗ ಅದು ವಿಚಾರ ಎನಿಸಿಕೊಳ್ಳುತ್ತದೆ. ಅನಂತರ ಉಂಟಾಗುವ ಸಮಾಧಿಸ್ಥಿತಿ ಆನಂದ. ಕೊನೆಯ ಸ್ಥಿತಿ ಅಸ್ಮಿತಾ. ಇವೆಲ್ಲವೂ ಸಂಪ್ರಜ್ಞಾತವೇ. ಇದನ್ನು ದಾಟಿದ ಸ್ಥಿತಿ ಅಸಂಪ್ರಜ್ಞಾತ. ಇದರಲ್ಲಿ ಧ್ಯಾನಕರ್ತಾ, ಧ್ಯಾನವಿಷಯ, ಧ್ಯಾನ–ಇವೆಲ್ಲವೂ ಒಂದೇ ಅಗುತ್ತವೆ.

ಸಾಂಖ್ಯದರ್ಶನದ ಪ್ರಕೃತಿ –ಪುರುಷ ಎಂಬ ಎರಡು ತತ್ತ್ವಗಳ ಜೊತೆಗೆ ಯೋಗದರ್ಶನವು ಈಶ್ವರ (ದೇವರು) ಎಂಬ ಮೂರನೆಯ ತತ್ತ್ವವನ್ನೂ ಒಪ್ಪಿಕೊಂಡಿದೆ. ಈಶ್ವರ ಪ್ರಣಿಧಾನವು ಸಮಾಧಿ ಸಿದ್ದಿಗೂ ಕೈವಲ್ಯ ಸಿದ್ಧಿಗೂ ಆವಶ್ಯಕವೆಂದು ಪತಂಜಲಿಯು ಒತ್ತಿ ಹೇಳಿದ್ದಾನೆ. ಇದನ್ನು ವರ್ಣಿಸುವಾಗ ವಿಜ್ಞಾನಭಿಕ್ಷು ಯೋಗ–ವೇದಾಂತಗಳ ಸಮನ್ವಯವನ್ನು ಮಾಡಿದ್ದಾನೆ.

ಯೋಗ ಸಾರ ಸಂಗ್ರಹದ ಎರಡನೆಯ ಅಂಶದಲ್ಲಿ ವಿಜ್ಞಾನ ಭಿಕ್ಷು ಅಷ್ಟಾಂಗ ಯೋಗದ ಪೂರ್ಣ ಸ್ವರೂಪವನ್ನು ವಿವರಿಸಿದ್ದಾನೆ. ಈ ಬಗೆಗೆ ಹೇಳುವಾಗ ಗರುಡ ಪುರಾಣ, ಮೋಕ್ಷಧರ್ಮಪರ್ವ, ಭಗವದ್ಗೀತೆ, ಅನುಗೀತೆ ಮುಂತಾದ ಗ್ರಂಥಗಳ ವಾಕ್ಯಗಳನ್ನು ಉದ್ಧರಿಸಿದ್ದಾನೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಎಂಬ ಎಂಟು ಅಂಗಗಳ ವರ್ಣನೆಯಲ್ಲಿ ಈಶ್ವರ ಗೀತೆಯ ಶ್ಲೋಕಗಳನ್ನು ವಿಜ್ಞಾನಭಿಕ್ಷು ಉಪಯೋಗಿಸಿಕೊಂಡಿದ್ದಾನೆ.

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಾಪರಿಗ್ರಹೌ।
ಯಮಾಃ ಸಂಕ್ಷೇಪತಃ ಪ್ರೋಕ್ತಾ: ಚಿತ್ತ ಶುದ್ಧಿಪ್ರದಾ ನೃಣಾಮ್॥

ಅಹಿಂಸೆ, ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವುದು), ಬ್ರಹ್ಮಚರ್ಯ, ಅಪರಿಗ್ರಹ ಎಂಬ ಐದು ಯಮಗಳು. ಮನಸ್ಸಿನ ಶುದ್ಧಿಗಾಗಿ ಇವುಗಳ ಆಚರಣೆ.

ತಪಃ ಸ್ವಾಧ್ಯಾಯಸಂತೋಷಾಃ ಶೌಚಮೀಶ್ವರಪೂಜನಮ್।
ಸಮಾಸಾನ್ನಿಯಮಾಃ ಪ್ರೋಕ್ತಾಃ ಯೋಗ ಸಿದ್ಧಿಪ್ರದಾಯಿನಃ॥

ತಪಸ್ಸು, ಸ್ವಾಧ್ಯಾಯ (ಓಂಕಾರ ಜಪ), ಸಂತೋಷ, ಶುಚಿತ್ವ, ಈಶ್ವರ ಪ್ರಣಿಧಾನ (ದೇವಪೂಜೆ) ಎಂಬ ಐದು ನಿಯಮಗಳು.

ಈ ನಿಯಮಗಳು ಯೋಗದ ಸಫಲತೆಗೆ ಕಾರಣ. ಯೋಗಿಯಾಗಲು ಬಯಸುವವನು ಮೊದಲು ಯಮಗಳನ್ನೂ ನಿಯಮಗಳನ್ನೂ ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

ಯೋಗದ ಮೂರನೆಯ ಅಂಗ ಆಸನ. ಇಂದು ಇದಕ್ಕೆ ಹೆಚ್ಚು ಪ್ರಾಧಾನ್ಯ–ವಿಜ್ಞಾನ ಭಿಕ್ಷು ಸ್ವಸ್ತಿಕಾಸನ, ಪದ್ಮಾಸನ, ಅರ್ಧ ಪದ್ಮಾಸನ ಎಂಬ ಮೂರನ್ನು ಮಾತ್ರ ಈಶ್ವರ ಗೀತೆಗೆ ಅನುಸಾರವಾಗಿ ವಿವರಿಸಿದ್ದಾನೆ.

ಆಸನಂ ಸ್ವಸ್ತಿಕಂ ಪ್ರೋಕ್ತಂ ಪದ್ಮಮರ್ಧಾಸನಂ ತಥಾ।
ಆಸನಾನಾರಿತು ಸರ್ವೇಷಾಮೇತದಾಸನಮುತ್ತಮಮ್ ॥ ಇತ್ಯಾದಿ

ಪ್ರಾಣಾಯಾಮವನ್ನು ವಿವರಿಸುವಾಗ ಅದರ ನಾಲ್ಕು ರೂಪಗಳನ್ನು ನಾರದ ಪುರಾಣಾನುಸಾರವಾಗಿ ವಿಜ್ಞಾನಭಿಕ್ಷು ವಿವರಿಸಿದ್ದಾನೆ. ರೇಚಕ, ಪೂರಕ, ಕುಂಭಕ, ಶೂನ್ಯಕ ಎಂಬವು ಪ್ರಾಣಾಯಾಮದ ನಾಲ್ಕು ರೂಪಗಳು. ಇವುಗಳನ್ನೆಲ್ಲ ಯೋಗಸಾರ ಸಂಗ್ರಹದಲ್ಲಿ ಸವಿಸ್ತರವಾಗಿ ಪ್ರತಿಪಾದಿಸಲಾಗಿದೆ. ಪ್ರತ್ಯಾಹಾರವನ್ನು ವಿಜ್ಞಾನ ಭಿಕ್ಷು ನಾರದ ಪುರಾಣದಿಂದ ಶ್ಲೋಕಗಳನ್ನು ಉದಾಹರಿಸಿ ವಿವರಿಸಿದ್ದಾನೆ.

ವಿಷಯೇಷು ಪ್ರಸಕ್ತಾನಿ ಇಂದ್ರಿಯಾಣಿ ಮುನೀಶ್ವರಾಃ।
ಸಮಾಹೃತ್ಯ ನಿಗೃಹ್ಣಾತಿ ಪ್ರತ್ಯಾಹಾರಸ್ತು ಸ ಸ್ಮೃತಃ॥

(ಇಂದ್ರಿಯಗಳು ಸ್ವಾಭಾವಿಕವಾಗಿ ವಿಷಯಗಳ ಕಡೆಗೆ ಓಡುತ್ತವೆ. ಅವನ್ನು ಹಿಡಿದು ನಿಗ್ರಹಕ್ಕೆ ಒಳಪಡಿಸುವುದನ್ನು ಪ್ರತ್ಯಾಹಾರವೆನ್ನುತ್ತಾರೆ.

ಅನಿರ್ಜಿತ್ಯೇಂದ್ರಿಯಗ್ರಾಮಂ ಯಸ್ತು ಧ್ಯಾನಪರೋ ಭವೇತ್ ।
ಮೂಢಾತ್ಮಾನಂ ಚ ತಂ ವಿದ್ಯಾತ್ ಧ್ಯಾನಂ ಚಾಸ್ಯನ ಸಿಧ್ಯತಿ ॥

(ಇಂದ್ರಿಯಗಳ ಗುಂಪನ್ನು ಗೆಲ್ಲದೆ ಧ್ಯಾನವನ್ನು ಮಾಡಲು ಹೊರಟವನನ್ನು ಮೂಢನೆಂದು ತಿಳಿಯಬೇಕು. ಅಂತಹವನಿಗೆ ಧ್ಯಾನವು ಸಿದ್ಧಿಸದು). ಮುಂದಿನ ಮೂರು ಯೋಗಾಂಗಗಳಾದ ಧಾರಣಾ, ಧ್ಯಾನ, ಸಮಾಧಿ ಎಂಬವನ್ನು ಯೋಗ ಸೂತ್ರದಲ್ಲಿ ವಿಭಕ್ತಿಪಾದದಲ್ಲಿ ಹೇಳಲಾಗಿದೆ. ಅವನ್ನು ವಿಜ್ಞಾನಭಿಕ್ಷು ಎರಡನೆಯ ಅಂಶದಲ್ಲೇ ಹೇಳಿರುವುದು ಉಚಿತವಾಗಿದೆ. ಯಾವ ವಸ್ತು ಧ್ಯಾನಕ್ಕಾಗಿ ಸ್ವೀಕರಿಸಲ್ಪಡುವುದೋ ಅದರಲ್ಲಿ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸುವುದು ಧಾರಣಾ–ಆ ವಸ್ತು ಯೋಗಿಯ ಹೃದಯ ಕಮಲ ಆಗಿರಬಹುದು ಅಥವಾ ಬಾಹ್ಯವಾದ ಸೂರ್ಯೋದಯ, ಚಂದ್ರೋದಯ, ಪರ್ವತ ಶಿಖರ ಮುಂತಾದ ಯಾವುದೇ ಭವ್ಯ ವಸ್ತುವಾಗಿರಬಹುದು.

ಹೃತ್ಪುಂಡರೀಕೇ ನಾಭ್ಯಾಂ ವಾ ಮೂರ್ಧ್ನಿ ಪರ್ವತಮಸ್ತಕೇ।
ಏವಮಾದಿ ಪ್ರದೇಶೇಷು ಧಾರಣಾ ಚಿತ್ತಬಂಧನಮ್ ॥

ಎಂಬುದು ಈಶ್ವರಗೀತೆಯ ಮಾತು.

ಯೋಗದ ಏಳನೆಯ ಅಂಗವಾದ ಧ್ಯಾನ ಅತ್ಯಂತ ಮುಖ್ಯ. ಧ್ಯಾನ ಎಂದರೆ ಏನು? ವಿಜ್ಞಾನಭಿಕ್ಷು ಹೇಳುತ್ತಾನೆ–

ತತ್ರ ದೇಶೇ ಧ್ಯೇಯಾಕಾರವೃತ್ತಿಪ್ರವಾಹೋ
ವೃತ್ತ್ಯಂತರಾವ್ಯವಹಿತೋ ಧ್ಯಾನಮ್ ।

ಧ್ಯೇಯವೆಂದು ಸ್ವೀಕರಿಸಿರುವ ವಸ್ತುವಿನ ಆಕಾರದ ವೃತ್ತಿ ಪ್ರವಾಹವು ಬೇರೆ ಯಾವ ಚಿತ್ತವೃತ್ತಿಯಿಂದಲೂ ವ್ಯವಧಾನವಿಲ್ಲದೆ ಹರಿಯುತ್ತಿದ್ದರೆ ಅದು ಧ್ಯಾನ. ಇದು ಮನಸ್ಸಿನ ಏಕಾಗ್ರತೆ ಇದ್ದಾಗ ಮಾತ್ರ ಸಿದ್ಧವಾಗುತ್ತದೆ. ಇದಕ್ಕೆ ಸಾಕಷ್ಟು ಅಭ್ಯಾಸ ಆವಶ್ಯಕ.

ಯೋಗದ ಕೊನೆಯ ಅಥವಾ ಎಂಟನೆಯ ಅಂಗ ಸಮಾಧಿ ಯೋಗ ಎಂದರೆ ಸಮಾಧಿ ಎಂದು ವ್ಯಾಸಭಾಷ್ಯದ ವಾಕ್ಯ. ಪತಂಜಲಿಯೂ–

ತದೇವಾರ್ಥಮಾತ್ರ ನಿರ್ಭಾಸಂ ಸ್ವರೂಪ ಶೂನ್ಯಮಿವ ಸಮಾಧಿಃ

ಎಂದು ಸಮಾಧಿಯ ಲಕ್ಷಣವನ್ನು ಹೇಳಿದ್ದಾನೆ. ಯೋಗಿಗೆ ಧ್ಯೇಯ ಮಾತ್ರ ಗೋಚರವಾಗಬೇಕು, ತನ್ನ ಸ್ವರೂಪವು ಶೂನ್ಯವಾಗಬೇಕು, ಆಗಲೇ ಸಮಾಧಿ. ಅದನ್ನು ಯೋಗ ಸಾರ ಸಂಗ್ರಹದಲ್ಲಿ–

"ತದೇವ ಧ್ಯಾನಂ ಯದಾ ಧ್ಯೇಯಾವೇಶವಶಾ ಧ್ಯಾನ ಧ್ಯೇಯಧ್ಯಾತೃ ಭಾವದೃಷ್ಟಿಶೂನ್ಯಂ ಸತ್ ಧ್ಯೇಯಮಾತ್ರಾಕಾರಂ ಭವತಿ ತದಾಸಮಾಧಿ!" ನಾನು ಧ್ಯಾನ ಮಾಡುತ್ತಿದ್ದೇನೆ, ಇದು ಧ್ಯೇಯವಸ್ತು ಎಂಬ ಜ್ಞಾನವಿರುವವರೆಗೂ ಅದು ಧ್ಯಾನ. ಈ ಧ್ಯಾನ–ಧ್ಯೇಯ–ಧ್ಯಾತೃ ಎಂಬ ತ್ರಿಪುಟೀಲಯವಾಗಿ ಕೇವಲ ಧ್ಯೇಯವೇ ಉಳಿದಾಗ ಅದು ಸಮಾಧಿ. ಸಮಾಧಿ ಸ್ಥಿತಿಯಲ್ಲಿದ್ದವನಿಗೆ ಬಾಹ್ಯ ಪ್ರಪಂಚದ ಯಾವ ಘಟನೆಗಳೂ ಗೋಚರಿಸುವುದಿಲ್ಲ.

ತದೈವಮಾತ್ಮನ್ಯವರುದ್ಧ ಚಿತ್ತೋ
ನವೇದ ಕಿಂಚಿದ್ ಬಹಿರಂತರಂವಾ।
ಯಥೇಷುಕಾರೋ ನೃಪತಿಂ ವ್ರಜಂತಂ
ಇಷೌ ಗತಾತ್ಮಾ ನ ದದರ್ಶ ಪಾರ್ಶ್ವೇ॥

ಸಮಾಧಿಯಲ್ಲಿ ಚಿತ್ತವನ್ನು ಆತ್ಮನಲ್ಲಿ ಸ್ಥಿರಗೊಳಿಸಿದ ಯೋಗಿಗೆ ಹೊರಗಿನದು. ಒಳಗಿನದು ಏನೂ ತಿಳಿಯದು. ಅವನ ಚಿತ್ತ ಧ್ಯೇಯ ವಸ್ತುವನ್ನು ಮಾತ್ರ ತಿಳಿದಿರುತ್ತದೆ. ಬಿಲ್ಲುಗಾರನು ಲಕ್ಷ್ಯವನ್ನು ಹೊಡೆಯಬೇಕಾದಾಗ ಮನಸ್ಸನ್ನು ಲಕ್ಷ್ಯದಲ್ಲೇ ನೆಟ್ಟಿರುತ್ತಾನೆ. ಆಗ ಪಕ್ಕದಲ್ಲಿ ರಾಜನು ಹಾದು ಹೋದರೂ ಆ ರಾಜನನ್ನು ನೋಡುವುದಿಲ್ಲ. ಇದು ಒಂದು ದೃಷ್ಟಾಂತ. ಏಕಾಗ್ರವಾದ ಮನಸ್ಸಿನಿಂದಲೇ ಧ್ಯಾನ, ಸಮಾಧಿಗಳು ಸಿದ್ಧವಾಗುತ್ತವೆ ಎಂಬುದು ಇಲ್ಲಿ ಸಾರಾಂಶ. ಇಲ್ಲಿ ವಿಜ್ಞಾನಭಿಕ್ಷು ಹೇಳಿರುವ ವಿಶೇಷಗಳನ್ನು ತಿಳಿಸಲು ಲೇಖನದಲ್ಲಿ ಅವಕಾಶವಿಲ್ಲ.

ಮೂರನೆಯ ಅಂಶದಲ್ಲಿ ವಿಭೂತಿಗಳ, ಎಂದರೆ ಯೋಗ ಸಾಧನೆಯಿಂದ ಉಂಟಾಗಬಹುದಾದ ಅತಿಮಾನುಷ ಶಕ್ತಿಗಳ ವರ್ಣನೆ ಇದೆ. ಈ ಶಕ್ತಿಗಳು ಅಥವಾ ಸಿದ್ಧಿಗಳು ಯೋಗದ ಮುಖ್ಯೋದ್ದೇಶವಾದ ಸಮಾಧಿ ಪ್ರಾಪ್ತಿಗೆ ಅಡ್ಡಿಗಳು. ಇದನ್ನೇ ಪತಂಜಲಿ ಮಹರ್ಷಿಯು 'ತೇಸಮಾಧಾವುಪಸರ್ಗಾಃ ವ್ಯುತ್ಥಾನೇ ಸಿದ್ಧಯಃ' ಎಂದಿದ್ದಾನೆ. ಉಪಸರ್ಗಾಃ ಎಂದರೆ ಇಲ್ಲಿ ವಿಘ್ನಗಳು. ಈ ರೀತಿಯಾದ ಸಿದ್ಧಿಗಳನ್ನು ಪಡೆದ ಯೋಗಿಗಳು ಈಗ ಯಾರೂ ಪ್ರಪಂಚದಲ್ಲಿಲ್ಲ. ಆದ್ದರಿಂದ ಇದರ ಬಗೆಗೆ ಏನನ್ನೂ ಹೇಳುವುದು ಅನವಶ್ಯಕ.

ನಾಲ್ಕನೆಯ ಅಂಶದಲ್ಲಿ ವಿಜ್ಞಾನಭಿಕ್ಷು ಕೈವಲ್ಯವನ್ನು ವಿವರಿಸಿದ್ದಾನೆ. ಕೈವಲ್ಯ ಎಂದರೆ ಮೋಕ್ಷ, ಮುಕ್ತಿ. ಮೋಕ್ಷದ ಸ್ವರೂಪವೇನೆಂಬ ಬಗೆಗೆ ದಾರ್ಶನಿಕರಲ್ಲಿ ಭೇದಗಳಿವೆ. ಪತಂಜಲಿಯು–

ಪುರುಷಾರ್ಥಶೂನ್ಯಾನಾಂ ಗುಣಾನಾಂ ಪ್ರತಿಪ್ರಸವ: ಕೈವಲ್ಯಮ್ ಸ್ವರೂಪ ಪ್ರತಿಷ್ಠಾ ವಾಚಿತಿಶಕ್ತಿಃ ಎಂಬ ಸೂತ್ರದಲ್ಲಿ ಯೋಗಶಾಸ್ತ್ರಾನು ಸಾರವಾಗಿ ಕೈವಲ್ಯ (ಮೋಕ್ಷ) ಎಂದರೆ ಏನೆಂದು ತಿಳಿಸಿದ್ದಾನೆ. ಸತ್ತ್ವವೇ ಮುಂತಾದ ಗುಣಗಳು ತಾವು ಮಾಡಬೇಕಾದ ಕಾರ್ಯ ಮುಗಿದ ಕಾರಣ, ತಮಗೆ ಮೂಲವಾದ ಪ್ರಕೃತಿಗೆ ಹಿಂದಿರುಗಿ ಹೋಗುವುದು ಅವುಗಳ ದೃಷ್ಟಿಯಿಂದ ಕೈವಲ್ಯ ಯೋಗಿಗಾದರೋ ಚೈತನ್ಯಶಕ್ತಿಯು ತನ್ನ ಶುದ್ಧರೂಪಕ್ಕೆ ಹಿಂದಿರುಗುವುದೇ ಕೈವಲ್ಯ.

ಈ ಪ್ರಸಂಗದಲ್ಲಿ ವಿಜ್ಞಾನಭಿಕ್ಷು ತನ್ನ ಬಹುಶಾಸ್ತ್ರಜ್ಞಾನವನ್ನು ತೋರಿಸಿದ್ದಾನೆ. ಸಾಂಖ್ಯರ, ವೇದಾಂತಿಗಳ, ವೈಶೇಷಿಕರ, ನೈಯಾಯಿಕರ, ಇತರರ ಅಭಿಪ್ರಾಯದಲ್ಲಿ ಮೋಕ್ಷವೆಂದರೇನು ಅದು ಯಾವುದೂ ಪತಂಜಲಿಯು ಹೇಳಿರುವ ಮೋಕ್ಷಸ್ವರೂಪಕ್ಕೆ ವಿರುದ್ಧವಲ್ಲ ಎಂದು ಹೇಳಿದ್ದಾನೆ. ಮೋಕ್ಷವು ಸುಖರೂಪವಾದುದು ಎಂಬ ವಾದವನ್ನು ಶ್ರುತಿ–ಸ್ಮೃತಿ–ತರ್ಕಗಳ ಆಧಾರದಿಂದ ತಳ್ಳಿ ಹಾಕಿದ್ದಾನೆ.

ಯೋಗಸಾರ ಸಂಗ್ರಹದಲ್ಲಿ ಇಂತಹ ಅನೇಕ ಗ್ರಾಹ್ಯ ವಿಚಾರಗಳು ತುಂಬಿರುವುದರಿಂದ ಯೋಗಶಾಸ್ತ್ರ ಜಿಜ್ಞಾಸುಗಳು ಈ ಗ್ರಂಥದ ಅಧ್ಯಯನವನ್ನು ಮಾಡಬಹುದು.

ಸಕಾಲಿಕ



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,
ಮೊ: 98450 48051

ಇದು ಮಕ್ಕಳ ಕಳ್ಳ–ಪೊಲೀಸ್ ಆಟವಯ್ಯಾ!

ಹೈಕಮಾಂಡ್ ಪ್ರತಿನಿಧಿಯಾಗಿ ರಾಜಧಾನಿ ಬೆಂಗಳೂರಿಗೆ ಬಂದಿರುವ ಸಂಧಾನಕಾರ ರಣದೀಪ್ ಸಿಂಗ್ ಸುರ್ಜೇವಾಲ ಕಾಂಗ್ರೆಸ್‌ನ ಅತೃಪ್ತ ಶಾಸಕರ ದುಃಖ–ದುಮ್ಮಾನಗಳಿಗೆ ಕಿವಿಗೊಟ್ಟು, ಎದ್ದಿರುವ ಹೊಗೆಯನ್ನು ಆರಂಭದಲ್ಲಿಯೇ ಆರಿಸಲು ಮುಂದಾಗಿದ್ದಾರೆ. ಫಲಶ್ರುತಿ ಕಾದು ನೋಡಬೇಕಷ್ಟೆ!

ಆದರೆ, ರಾಜ್ಯದ ಜನತೆಯ ಪಾಲಿಗೆ ಇದೊಂದು ರೀತಿಯಲ್ಲಿ ಮಕ್ಕಳಾಡುವ ಕಳ್ಳ–ಪೊಲೀಸ್ ಜೂಟಾಟ ಇದ್ದಂತೆ, ತಮಾಷೆಯಾಗಿ ಜನರ ನಡುವೆ ನಗೆಪಾಟಲಿಗೆ ಗುರಿಯಾಗಿದೆ. ಅಲ್ಲದೆ, ಈ ಸಂಧಾನ–ಸಮಾಲೋಚನೆಗಳೆಲ್ಲ 'ಜೋಕ್'ನಂಥಾಗಿ ಮತದಾರರಿಗೆ ಮನರಂಜನೆ ನೀಡುತ್ತಿದೆ. ಶಾಸಕರಲ್ಲಿ ಭುಗಿಲೆದ್ದಿರುವ ಅಸಮಾಧಾನದ ಹೊಗೆ ಜ್ವಾಲೆಯಾಗಿ ಸರ್ಕಾರ–ಪಕ್ಷವನ್ನು ಸುಡಲಿದೆ ಎಂಬ ಮುಂಜಾಗರೂಕ ಕ್ರಮ ಇದಾಗಿದೆ. ಆದರೆ ಇದು ಕಣ್ಣೊರೆಸುವ ಹಾಗೂ ತಿಪ್ಪೇ ಸಾರಿಸುವ ಕಸರತ್ತು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೂ ಕೂಡ. ಆದರೂ ಶಾಸಕರಿಗೆ ಇದು ತಿಪ್ಪೆ ಕೆದಕಿ ಹೈಕಮಾಂಡ್‌ಗೆ ಕೆಟ್ಟ ವಾಸನೆ ತಲುಪಿಸುವ ಕಸರತ್ತಾಗಿದೆ. ಅಲ್ಲದೆ ಇಂಥ ಪ್ರಜಾಪ್ರಭುತ್ವದ ಅಣಕ ನಿಲ್ಲಿಸಿ.

ಹಾಗೂ–ಹೀಗೂ ಇನ್ನೂ 5–6 ತಿಂಗಳೂ ಕಾಲ ದೂಡೋಣ. ನಂತರ ಹೈಕಮಾಂಡ್ ಅಂತರಂಗದಲ್ಲಿ ಅಡಗಿರುವಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪಟ್ಟ ಕಟ್ಟಿ ಕೈ ತೊಳೆದುಕೊಳ್ಳುವ ರಾಜಕೀಯ ಲೆಕ್ಕಾಚಾರದಲ್ಲಿ ಮುಳುಗಿದ್ದಾರೆ. ಆದರೆ ಈ ಪ್ರಯತ್ನ ಅಷ್ಟು ಸುಲಭವಾಗಿ ಜಾರಿಯಾಗುವಂತೆ ಕಾಣುತ್ತಿಲ್ಲ. ಏಕೆಂದರೆ ಸಿಎಂ ಸಿದ್ದರಾಮಯ್ಯ ಕಡಿಮೆ ಆಸಾಮಿಯೇನಲ್ಲ. ಪಟ್ಟಿಗೆ ಪಟ್ಟು ಹಾಕಿ ಹೈಕಮಾಂಡ್‌ಗೇ 'ಸುಸ್ತು' ಮಾಡುವ ಕಲೆ ಕರಗತ ಮಾಡಿಕೊಂಡಿದ್ದಾರೆ.

ಹೈಕಮಾಂಡ್‌ಗೆ ಸೆಡ್ಡು ಹೊಡೆಯಲು ಹಿಂದೆ ಮುಂದೆ ನೋಡುವುದಿಲ್ಲ. ಅಂದರೆ ಹೈಕಮಾಂಡ್ 'ಜುಟ್ಟು' ಒಂದು ರೀತಿಯಲ್ಲಿ ಸಿಎಂ ಸಿದ್ದರಾಮಯ್ಯ ಕೈಯ್ಯಲ್ಲಿಯೇ ಇದೆ. ತಮ್ಮನ್ನು ಒಲಿಸಿಕೊಂಡು ಅವರ ಮನದ ಇಂಗಿತದಂತೆ ಸರ್ಕಾರ ರಚನೆ–ಇಲ್ಲ ಸಿಎಂ ಬದಲಾವಣೆ ರಗಳೆ ಇಲ್ಲದೆ ನಡೆದರೆ 'ಓಕೆ' ಇಲ್ಲವಾದರೆ 'ಜೋಕೆ' ಎನ್ನುವ ಎಚ್ಚರಿಕೆ ನೀಡಲೂ ಸಿಎಂ ಹಿಂದೆ–ಮುಂದೆ ನೋಡುವ ಆಸಾಮಿಯಲ್ಲ.

ಪಕ್ಷದಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ತಾಳ ಹಾಕುತ್ತಿದ್ದಾರೆ. ಅಲ್ಲದೆ ಡಿಸಿಎಂ ಶಿವಕುಮಾರ್ ಕೈಹಿಡಿದು ಮೇಲೆತ್ತಿ 'ಜೈ' ಎನ್ನುತ್ತಿದ್ದಾರೆ. ಆದರೆ ಅವರ ಲೆಕ್ಕಾಚಾರವೇ ಬೇರೆ ಇದ್ದಂತಿದೆ. ಅಂದರೆ ರಾಜ್ಯದಲ್ಲಿ ತಮ್ಮ ಪ್ರಭಾವಕ್ಕೆ ಮುಕ್ಕು ಬರಬಾರದು. ತಾವೇನಿದ್ದರೂ ರಾಜ್ಯಕ್ಕೆ ಸೀಮಿತವಾದ 'ಹೈಕಮಾಂಡ್' ಆಗಿರಬೇಕೆಂಬ ಆಶಾಭಾವ. ಈಗ ರಾಜ್ಯದಲ್ಲಿ ನಡೆಯುತ್ತಿರುವ ಶಾಸಕರ ಸರ್ಕಸ್ ಕೇವಲ ಮನರಂಜನೆಗಾಗಿ. ಎಲ್ಲವೂ ಡೆಲ್ಲಿಮಯ. ಅಂದರೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ, ಕೆ.ಸಿ.ವೇಣುಗೋಪಾಲ್..... ಹಾಗೂ ನಾಮಕಾವಸ್ತೆ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹೇಳಿದಂತೆಯೇ ನಡೆಯುವುದು. ಉಳಿದ ಈ ರಾಜಕೀಯ ನಡೆಯಲ್ಲಾ 'ಕಾಗೆ' ಹಾರಿಸುವ ಕೆಲಸ.



ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್ ವಿಜಯೇಂದ್ರ ಆರ್.ಅಶೋಕ್

> "ಈಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದರೂ ಕಾಂಗ್ರೆಸ್ ಹಾಗೂ ಬಿಜೆಪಿ ಒಂದು ರೀತಿ ಅಣ್ಣ ತಮ್ಮಂದಿರಂತೆ. ಜೆಡಿಎಸ್ ಕೂಡ ಬಿಜೆಪಿ ಒಳಗೆ ಸೇರಿಬಿಟ್ಟಿದೆ. ಏಕೆಂದರೆ ಎರಡೂ ಪಕ್ಷಗಳ ನಡೆ-ನುಡಿ-ಆಡಳಿತ ಭ್ರಷ್ಟಾಚಾರ ಎಲ್ಲವೂ ಒಂದೇ ರೀತಿ."

ಹೈಕಮಾಂಡ್ ಇಲ್ಲವೇ ಸಿದ್ದರಾಮಯ್ಯರಿಗೆ ರಾಜ್ಯದಲ್ಲಿ ಈಗ ನಡೆಯುತ್ತಿರುವ ಭ್ರಷ್ಟಾಚಾರ ಗೊತ್ತಿಲ್ಲದ ಸಂಗತಿಯೇನಲ್ಲ. ಇದರ ವಿರುದ್ಧ ಧ್ವನಿ ಎತ್ತಿದ ಶಾಸಕರಾದ ಬಿ.ಆರ್.ಪಾಟೀಲ್ ಹಾಗೂ ಹಿರಿಯ ಶಾಸಕ ರಾಜು ಕಾಗೆ ಅವರಿಗೆ ಬಹಿರಂಗ ಎಚ್ಚರಿಕೆ; ತಹಸೀಲ್ದಾರ್ ಕಚೇರಿಗೆ ಭೇಟಿ ನೀಡಿ ಅಲ್ಲಿನ ಲಂಚಾವತಾರದ ಬಗ್ಗೆ ಜಿಗುಪ್ಸೆಗೊಂಡು 'ಲಂಚದ ಬೋರ್ಡ್' ಹಾಕಿ ಎಂದು ಉಗಿದು ಸುಮ್ಮನಾದ ಸಚಿವ ಭೈರೇಗೌಡರಿಗೆ ಏಕೆ 'ಮಾಫಿ'. ಇದು ಯಾವ ನ್ಯಾಯ. ಕೃಷ್ಣ ಭೈರೇಗೌಡರು ದಕ್ಷ ಹಾಗೂ ಪ್ರಾಮಾಣಿಕ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಜಾತಿ ನೋಡಿ ಶಿಕ್ಷೆಯೆ?

ಇದು ಭ್ರಷ್ಟ ಸರ್ಕಾರ ಎಂಬುದು ಸಾಬೀತಾಗಿ ಹೋಗಿದೆ. ಆದ್ದರಿಂದ ಅದರ ಬಗ್ಗೆ ಹೇಳಿದ್ದನ್ನೇ ಹೇಳಿದರೆ ಕಿಸು ಬಾಯಿ ದಾಸನ ಕಥೆಯಂತಾಗುತ್ತದೆ. ಅದರ ಬದಲು ಈಗಿನ ಮಂತ್ರಿ ಮಂಡಲಕ್ಕೆ ಆರು ತಿಂಗಳ ಗಡುವು. ಅದು ಮುಗಿದ ಮೇಲೆ ಈಗಿನ ಎಲ್ಲಾ ಮಂತ್ರಿಗಳನ್ನು ಪಕ್ಷದ ಕೆಲಸಕ್ಕೆ ನಿಯೋಜಿಸಿ, ಹೊಸಬರಿಗೆ ಮಣೆ ಹಾಕಿ. ಈಗಿರುವ ನಿಗಮ ಮಂಡಳಿ ಅಧ್ಯಕ್ಷರಿಗೆ (ಶಾಸಕರು) ಸಚಿವ ಸ್ಥಾನ ನೀಡಿ, ಉಳಿದಿರುವ ಶಾಸಕರಿಗೆ ನಿಗಮ ಮಂಡಳಿ ಸ್ಥಾನಮಾನ ನೀಡಿ ಅವರನ್ನು ತೃಪ್ತಿಪಡಿಸುವ ಸುಲಭ ರಾಜಕೀಯ ಪರಿಹಾರೋಪಾಯ.

ಇದನ್ನು ಬಿಟ್ಟು ಹೊಟ್ಟೆ ತುಂಬಿರುವವರಿಗೇ ಮೃಷ್ಟಾನ ನೀಡುವುದು ಸರಿಯೇ? 'ರೊಟೇಷನ್ ಸಿಸ್ಟಂ' ಜಾರಿಗೆ ತನ್ನಿ. ಆಗ ಶಾಸಕರ ಕಾರ್ಯದಕ್ಷತೆ, ನಿಷ್ಠೆ–ದುಃಖ ದುಮ್ಮಾನಗಳ ಅರಿವು ಈಗ ಸಚಿವರಾಗಿರುವವರಿಗೆ ಅರ್ಥವಾಗುತ್ತದೆ. ಈ ಸರ್ಕಾರದ ಆಯಸ್ಸು ಮೂರು ವರ್ಷಗಳು ಇರಬಹುದು. ನಂತರ ಪಕ್ಷದ ಭವಿಷ್ಯ–ಬಿಜೆಪಿಗೆ ಆದಂತಾಗಬಾರದು ಅಷ್ಟೆ. ಏಕೆಂದರೆ ಹಿಂದಿನ ಸರ್ಕಾರದ ಹಾದಿಯಲ್ಲಿಯೇ ಕಾಂಗ್ರೆಸ್ ಹೆಜ್ಜೆ ಹಾಕುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಇದಕ್ಕೆ ಜ್ಯೋತಿಷಿಗಳ ಬಳಿ ಹೋಗುವ ಅಗತ್ಯವಿಲ್ಲ.

ಈಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದರೂ ಕಾಂಗ್ರೆಸ್ ಹಾಗೂ ಬಿಜೆಪಿ ಒಂದು ರೀತಿ ಅಣ್ಣ ತಮ್ಮಂದಿರಂತೆ. ಜೆಡಿಎಸ್ ಕೂಡ ಬಿಜೆಪಿ ಒಳಗೆ ಸೇರಿಬಿಟ್ಟಿದೆ. ಏಕೆಂದರೆ ಎರಡೂ ಪಕ್ಷಗಳ ನಡೆ–ನುಡಿ–ಆಡಳಿತ ಭ್ರಷ್ಟಾಚಾರ ಎಲ್ಲವೂ ಒಂದೇ ರೀತಿ. ಆಡಳಿತಾರೂಢ ಕಾಂಗ್ರೆಸ್ ಸರ್ಕಾರದಲ್ಲಿ ಶೇ.40 ಅಂದರೆ ವಿರೋಧ ಪಕ್ಷ ಇಲ್ಲ ಶೇ.60 ಎಂದು ಆಪಾದನೆ ಮಾಡುತ್ತಿದೆ ಅಷ್ಟೆ.

ಆಡಳಿತ ಪಕ್ಷದಲ್ಲೀಗ ಒಳ ಜಗಳ. ಅಧಿಕಾರಕ್ಕಾಗಿ ಕಚ್ಚಾಟ ಇವೆಲ್ಲವು ಬಿಜೆಪಿಯಲ್ಲೂ ನಡೆಯುತ್ತಿದೆ. ಕಾಂಗ್ರೆಸ್‌ನಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬದಲಾಯಿಸಿ ಎಂಬ ಕೂಗು ಇದ್ದಂತೆ ಬಿಜೆಪಿಯಲ್ಲೂ ಪಕ್ಷದ ಅಧ್ಯಕ್ಷ ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಅಶೋಕ್ ಬಗ್ಗೆ ಅಪಸ್ವರವಿದೆ.

ಆದರೆ, ಹಿಂದೆ ವಿಜಯೇಂದ್ರ ಹಾಗೂ ಅಶೋಕ್ ಭವಿಷ್ಯದಂತೆ ಸಿಎಂ ಸಿದ್ದರಾಮಯ್ಯರ ಬದಲಾವಣೆ ಆಗಲಿಲ್ಲ. ಆದರೆ, ಆ ಗಡುವು ಮುಗಿಯಿತು. ಈಗ ಹೊಸದಾಗಿ ಮಾಜಿ ಸಚಿವ ಹಾಗೂ ಸಂಸದ ಗೋವಿಂದ ಕಾರಜೋಳ ಈ ಸರ್ಕಾರದ ಹಣೆಬರಹ ಇನ್ನೂ ಆರು ತಿಂಗಳು ಮಾತ್ರವೆಂದು ಭವಿಷ್ಯ ನುಡಿದಿದ್ದಾರೆ. ಇಂಥ ಉಡಾಫೆ ಮಾತುಗಳಿಂದ ಅವರ ಘನತೆ–ಗೌರವಕ್ಕೆ ಧಕ್ಕೆ ಬರುತ್ತದೆಯೇ ಹೊರತು ಅವರ ಕನಸು ಇಲ್ಲವೇ ಭವಿಷ್ಯ ನನಸಾಗುವುದಿಲ್ಲ.

ಇದೇ ರೀತಿ ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವ ಮಾಜಿ ಸಿಎಂ ಹಾಗೂ ಹಾಲಿ ಸಂಸದ ಸದಾನಂದಗೌಡರ ಕಾಲದಲ್ಲಿ ಎಲ್ಲವೂ ಚೆನ್ನಾಗಿತ್ತೆ? ಎಂಬ ಪ್ರಶ್ನೆ ಏಳುತ್ತಿದೆ. ಆದ್ದರಿಂದ ಪಕ್ಷದ ಸಿಹಿ ತಿಂದು ಈಗ ಅದು ಕಹಿ ಎನ್ನುವುದು ಗೌರವ ತರುವ ಮಾತಲ್ಲ.

ಜೆಡಿಎಸ್ ಇನ್ನೂ ಬಿಜೆಪಿಯ ಅಂಗ ಪಕ್ಷದಂತೆ ನಡೆದುಕೊಳ್ಳುತ್ತಾ, ಸಂಘಟನೆಯಲ್ಲೂ ತೊಡಗಿದೆ. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿ ನಿಖಿಲ್ ಪಟ್ಟಾಭಿಷೇಕ ಮಾತ್ರ ಬಾಕಿ ಉಳಿದಿದೆ. ಹೀಗೆ ರಾಜ್ಯದ ರಾಜಕೀಯ ಅಯೋಮಯವಾಗಿದೆ. ಯಾವ ಪಕ್ಷಕ್ಕೂ ಮತದಾರರ ಬಗ್ಗೆ ಕಾಳಜಿ ಕಾಣುತ್ತಿಲ್ಲ. ಇನ್ನು ಜನರ ಭವಿಷ್ಯ ಅಂಧಕಾರದಲ್ಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸರ್ಕಾರದ ವೈಫಲ್ಯ ಖಂಡಿಸಿ ಹಾಸನದಲ್ಲಿ ಜೆಡಿಎಸ್ ಪ್ರತಿಭಟನೆ



ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಹಾಗೂ ಆಡಳಿತ ವೈಫಲ್ಯ ಖಂಡಿಸಿ ಹಾಸನ ಜೆಡಿಎಸ್ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಹಾಸನ: ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಹಾಗೂ ಆಡಳಿತ ವೈಫಲ್ಯ ಖಂಡಿಸಿ ಜೆಡಿಎಸ್ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆ ಆರಂಭಿಸಿದ ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರು, ಎನ್.ಆರ್.ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ಬಂದು ಧರಣಿ ನಡೆಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಎಚ್.ಡಿ.ರೇವಣ್ಣ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ಸಂಪೂರ್ಣ ವಿಫಲವಾಗಿದೆ. ಎಲ್ಲ ಇಲಾಖೆಗಳಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಜಿಲ್ಲೆಯಲ್ಲಿ ಕಾಡಾನೆ ಹಾವಳಿ, ವಿಪರೀತ ಮಳೆ ಕಾರಣ ರೈತರು ಹಾಗೂ ಜನರು ಸಂಕಷ್ಟಕ್ಕೀಡಾದರೂ ಸರ್ಕಾರದಿಂದ ಪರಿಹಾರ ಸಿಗುತ್ತಿಲ್ಲ. ಕೇವಲ ಮುಖ್ಯಮಂತ್ರಿ ಕುರ್ಚಿಗಾಗಿ ಪ್ರತಿದಿನ ಪೈಪೋಟಿ ನಡೆಯುತ್ತಿದೆ ಎಂದು ಆರೋಪಿಸಿದರು.

ಹಿಂದಿನ ಸರ್ಕಾರ ಬೆಳೆ ಹಾನಿಗೆ ಪರಿಹಾರ ಬಿಡುಗಡೆ ಮಾಡಿತ್ತು. ಮನೆ ಕುಸಿತಕ್ಕೆ ಸೂಕ್ತ ಪರಿಹಾರ ಘೋಷಿಸಿತ್ತು. ಆದರೆ ಈ ಸರ್ಕಾರದಲ್ಲಿ ಹೇಳುವವರು, ಕೇಳುವವರು ಇಲ್ಲದಂತಾಗಿದ್ದು, ಎಲ್ಲ ಸಚಿವರು ತಮ್ಮ ಕುರ್ಚಿ ಭದ್ರ ಮಾಡಿಕೊಳ್ಳುವಲ್ಲಿಯೇ ನಿರತರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಸಂಪೂರ್ಣ ಆಡಳಿತ ಕುಸಿದು ಹೋಗಿದ್ದು, ಪೊಲೀಸ್ ಠಾಣೆಗಳಲ್ಲಿ ಬಡವರ ದೂರು ಕೇಳುವವರೇ ಇಲ್ಲದಾಗಿದೆ. ಸಾರ್ವಜನಿಕರು ದೂರು ನೀಡಲು ಹೋದರೆ ದಬ್ಬಾಳಿಕೆ ಮಾಡಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ರಾಜಿ ಪಂಚಾಯಿತಿ ಸಹ ಮಾಡುತ್ತಿದ್ದಾರೆ. ಒಬ್ಬ ಮಾಜಿ ಸೈನಿಕನಿಗೂ ಈ ರೀತಿಯ ಅನುಭವ ಆಗಿದ್ದು, ಈ ರೀತಿಯ ದುರಾಡಳಿತ ಜಿಲ್ಲೆಯಲ್ಲಿ ಮುಂದುವರಿದಿದೆ ಎಂದು ಹೆಚ್.ಡಿ.ರೇವಣ್ಣ ಕಿಡಿಕಾರಿದರು.

ಶಾಸಕ ಎ.ಮಂಜು ಮಾತನಾಡಿ, ಬಡವರಿಗೆ ಮನೆ ವಿತರಣೆ ಮಾಡುವಲ್ಲಿಯೂ ಸರ್ಕಾರ ಲೋಪ ಎಸಗಿದ್ದು, ಒಂದು ಮನೆಗೆ 10 ಸಾವಿರ ವಸೂಲಿ ಮಾಡುತ್ತಿದ್ದಾರೆ. ರಾಜಕೀಯದಲ್ಲಿ ಯಾರೂ ಶಾಶ್ವತ ಅಲ್ಲ. ನಮ್ಮ ಅವಧಿಯಲ್ಲಿ ಮಾಡುವ ಒಳ್ಳೆಯ ಕೆಲಸಗಳು ಶಾಶ್ವತವಾಗಿ ಉಳಿಯುತ್ತದೆ. ನಮ್ಮ ತಾಲೂಕಿನ 50 ಗ್ರಾಮ ಪಂಚಾಯಿತಿಗಳಲ್ಲಿ ಕೇವಲ 16 ಪಂಚಾಯಿತಿಗಳಿಗೆ ಮಾತ್ರ ಮನೆ ಮಂಜೂರಾತಿ ಮಾಡಲಾಗಿದೆ. ಅದು ಕೂಡ ಹಣ ನೀಡಿದವರಿಗೆ ಮಾತ್ರ ಎಂದು ಆರೋಪಿಸಿದರು.

ಉಪಮೇಯರ್ ಹೇಮಲತಾ, ಎಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್, ಜೆಡಿಎಸ್ ಮುಖಂಡರಾದ ಎನ್.ಆರ್ ಸಂತೋಷ್, ಸಮೀರ್ ಅಹಮದ್, ಜಯರಾಮ್, ಮಂಜೇಗೌಡ, ಪರಮ ದೇವರಾಜೇಗೌಡ, ಸಂಗಮ್, ಕಮಲ್ ಕುಮಾರ್, ಗಿರೀಶ್ ಚನ್ನವೀರಪ್ಪ, ಪಕ್ಷದ ವಕ್ತಾರ ರಘು ಹೊಂಗೆರೆ, ಬೈಲಹಳ್ಳಿ ಸತ್ಯನಾರಾಯಣ, ದುದ್ದ ಲಕ್ಷ್ಮಣ್, ಶಂಕರ್, ದೇವರಾಜೇಗೌಡ, ಚಂದ್ರಶೇಖರ್, ದೊಡ್ಡದಿಣ್ಣೆ ಸ್ವಾಮಿ, ಪುಟ್ಟಸ್ವಾಮಪ್ಪ, ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಗ್ರಾಮ ಪಂಚಾಯಿತಿ ಹಾಲಿ ಮತ್ತು ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಪಾಲ್ಗೊಂಡಿದ್ದರು.

ಹಾಸನ ಜಿಲ್ಲೆಯಲ್ಲಿ ಹೆಚ್ಚಿದ ಹೃದಯಾಘಾತ, ಒಂದೂವರೆ ತಿಂಗಳಲ್ಲಿ 21 ಮಂದಿ ಸಾವು

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಾವಿನ ಪ್ರಕರಣಗಳು ಮುಂದುವರಿದಿವೆ. ಸೋಮವಾರ ಒಂದೇ ದಿನ ನಾಲ್ವರು ಮೃತಪಟ್ಟಿದ್ದಾರೆ. ಸೋಮವಾರ ಜಿಲ್ಲೆಯ ಹೊಳೆನರಸೀಪುರದ ಪ್ರಾಧ್ಯಾಪಕ ಮುತ್ತಯ್ಯ (58), ನುಗ್ಗೇಹಳ್ಳಿ ನಾಡ ಕಚೇರಿಯ ಡಿ ಗ್ರೂಪ್ ನೌಕರ ಕುಮಾರ್ (57), ಹಾಸನ ನಗರದ ಆಟೋರಿಕ್ಷಾ ಚಾಲಕ ಸೂರ್ಯನಾರಾಯಣರಾವ್



(63) ಹಾಗೂ ಬೇಲೂರಿನಲ್ಲಿ ಗೃಹಿಣಿ ಲೇಪಾಕ್ಷಿ (50) ಮೃತಪಟ್ಟಿದ್ದಾರೆ.

ಮೇ 20ರಿಂದ ಜೂನ್ 30ರವರೆಗೆ 21 ಜನರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಈ ಪೈಕಿ ನಾಲ್ವರು ಬೆಂಗಳೂರಿನಲ್ಲಿ ಮೃತಪಟ್ಟಿದ್ದಾರೆ. 25 ವರ್ಷದೊಳಗಿನ ಮೂವರು ಯುವತಿಯರು, ಇಬ್ಬರು ಯುವಕರು ಮೃತಪಟ್ಟಿದ್ದಾರೆ. 30 ವರ್ಷ ಮೇಲಿನ 16 ಜನರು ಮೃತಪಟ್ಟಿದ್ದಾರೆ.


ಹೃದಯಾಘಾತಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾ ಆರೋಗ್ಯಾಧಿಕಾರಿಗಳು, ಹಿಮ್ಸ್ ತಜ್ಞರ ಜೊತೆಗೆ ಸಭೆ ನಡೆಸಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿಗೆ ತುರ್ತು ಚಿಕಿತ್ಸೆಯ ತರಬೇತಿ ನೀಡುವುದು ಹಾಗೂ ಶಾಲಾ ಮಕ್ಕಳು, ಸ್ಕೌಟ್ಸ್, ಗೈಡ್ ಸ್ವಯಂ ಸೇವಕರ ಮೂಲಕ ಹೃದಯಾಘಾತದ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ವೈದ್ಯರಿಗೆ ಅಭಿನಂದನೆ...



ವೈದ್ಯರ ದಿನಾಚರಣೆ ಅಂಗವಾಗಿ ಕಾಂಗೂರ್ ಕೇರ್ ಫರ್ಟಿಲಿಟಿ ಆಸ್ಪತ್ರೆ ವೈದ್ಯರಾದ ಡಾ.ದಿಲೀಪ್ ಹಾಗೂ ಡಾ.ಸ್ವಾತಿ ಅವರನ್ನು ಶ್ರೀ ದುರ್ಗಾ ಫೌಂಡೇಶನ್‌ನಿಂದ ಸನ್ಮಾನಿಸಲಾಯಿತು. ಫೌಂಡೇಷನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಸಮಾಜ ಸೇವಕಿ ಖುಷಿ ವಿನು, ಸತ್ಯಸಾಯಿ ಸುರಕ್ಷಾ ಕೇಂದ್ರ ಅಧ್ಯಕ್ಷೆ ಸರಸ್ವತಿ ಹಲಸಗಿ, ವಕೀಲರಾದ ಜಯಶ್ರೀ ಶಿವರಾಮ್, ಸುಶೀಲ, ಮರಿಯಾ ಆಲ್ಫೋನ್ಸ್, ಜಯಲಕ್ಷ್ಮಿ, ಕುಮಾರಿ ಪೂಜಾ, ವಿಕಾಸ್, ಗೋಕುಲ್, ಕುಮಾರಿ ಇನ್ನಿತರರು ಹಾಜರಿದ್ದರು.

ಚಾಮುಂಡಿಬೆಟ್ಟದಲ್ಲಿ ದಾಸೋಹಕ್ಕಾಗಿ 5 ಲಕ್ಷ ರೂ. ದೇಣಿಗೆ



ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪ್ರತಿ ಆಷಾಢ ಶುಕ್ರವಾರ ಜನಸಾಮಾನ್ಯರಿಗೆ ಪ್ರಾಧಿಕಾರ ಒದಗಿಸುವ ಉಪಾಹಾರದ ವ್ಯವಸ್ಥೆಗಾಗಿ ಮೈಸೂರಿನ ಎಸ್‌ಎಲ್‌ವಿ ಬುಕ್ಸ್ ಮಾಲೀಕ ದಿವಾಕರ್ ದಾಸ್, ಚಾಮುಂಡೇಶ್ವರಿ ದೇವಸ್ಥಾನ ಪ್ರಾಧಿಕಾರಕ್ಕೆ 5 ಲಕ್ಷ ರೂ.ಗಳ ಚೆಕ್ಕನ್ನು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರಿಗೆ ಹಸ್ತಾಂತರಿಸಿದರು. ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಬೆಂಗಳೂರು ಜಿಕೆ.ಫೌಂಡೇಶನ್‌ನ ಮಹೇಶ್, ಮಲ್ಲೇಶ್ ಕೋಟೆ, ಜಯರಾಮ್, ಜೆಜೆ ಆನಂದ್, ರಾಹುಲ್ ಕುಂಬರಹಳ್ಳಿ, ಪುನೀತ್ ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು: ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಕಾರ್ಯದರ್ಶಿಯನ್ನಾಗಿ ನ್ಯೂ ಬಂಬೂ ಬಜಾರ್, 7ನೇ ಬ್ಲಾಕ್ ನಿವಾಸಿ ಮಹದೇವಯ್ಯ ಅವರನ್ನು ನೇಮಕ ಮಾಡಲಾಗಿದೆ.

ಸಂಕಷ್ಟದ ಸಮಯದಲ್ಲಿ ನೆರವಾಗುವ ವೈದ್ಯರು ದೈವೀ ಸ್ವರೂಪ

ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯ



ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ವೈದ್ಯರ ದಿನದ ಕಾರ್ಯಕ್ರಮದಲ್ಲಿ ವೈದ್ಯ ದಂಪತಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಜು.1(ಎಂಟಿವೈ)– ನಿಸ್ವಾರ್ಥವಾಗಿ ಸೇವೆ ಸಲ್ಲಿಸುವ ವೈದ್ಯರು ರೋಗಿಗಳಿಗೆ ದೈವೀ ಸ್ವರೂಪದಂತೆ ಸಂಕಷ್ಟದ ಸಮಯದಲ್ಲಿ ನೆರವಾಗುತ್ತಾರೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಮಂಗಳವಾರ ವೈದ್ಯರ ದಿನದ ಅಂಗವಾಗಿ ಆಯೋಜಿಸಿದ್ದ ವೈದ್ಯ ದಂಪತಿಗಳಿಗೆ ಸನ್ಮಾನ ಹಾಗೂ ವೈದ್ಯ ನಮನ ರಾಜ್ಯಮಟ್ಟದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೈದ್ಯರೆಂದರೆ ನಂಬಿಕೆ. ಯಾವುದೇ ಸ್ವಾರ್ಥವಿಲ್ಲದೆ ರೋಗಿಗಳಿಗೆ ಚಿಕಿತ್ಸೆ ನೀಡುವ ಮೂಲಕ ನಿಸ್ವಾರ್ಥ ಸೇವೆ ಮಾಡುತ್ತಾರೆ. ರೋಗಿಗಳ ಸೇವೆಗೆ ಸದಾ ಸಿದ್ಧರಿರುವ ವೈದ್ಯರನ್ನು ವೈದ್ಯ ನಾರಾಯಣೋ ಹರಿ ಎನ್ನುತ್ತಾರೆ. ಈ ಮಾತು ವೈದ್ಯರ ಮಹತ್ವವನ್ನು ಸಾರುತ್ತದೆ ಎಂದರು.

ರೋಗಿಗಳು ಕಷ್ಟದಲ್ಲಿರುವ ತಮ್ಮ ಕೈ ಹಿಡಿಯುವ ವೈದ್ಯರನ್ನು ದೇವರಂತೆ ಕಾಣುತ್ತಾರೆ. ನಂಬಿ ಬಂದ ರೋಗಿಗಳನ್ನು ಆರೈಕೆ ಮಾಡುವ ವೈದ್ಯರು ವಿಶ್ವಾಸಾರ್ಹತೆಯ ಪ್ರತೀಕ. ಎಷ್ಟೇ ಗಂಭೀರ ಸ್ವರೂಪದ ಕಾಯಿಲೆಗೆ ತುತ್ತಾಗಿದ್ದರೂ, ಗಂಭೀರವಾದ ಗಾಯದಿಂದ ಬಳಲುತ್ತಿದ್ದರೂ ಅಸಹ್ಯ ಹಾಗೂ ಮುಜುಗರಕ್ಕೆ ಒಳಗಾಗದೇ ವೈದ್ಯರು ಸೂಕ್ತ ಚಿಕಿತ್ಸೆ ನೀಡುವ ಮೂಲಕ ರೋಗಿಗಳಿಗೆ ಆಪದ್ಬಾಂಧವರಂತೆ ಕಾಣುತ್ತಾರೆ. ಆ ಕಾರಣದಿಂದ ವೈದ್ಯರನ್ನು ಭೂಮಿ ಮೇಲಿರುವ ದೇವರು ಎಂದು ಭಾವಿಸಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಸೇವಾ ಮನೋಭಾವವುಳ್ಳ ವೈದ್ಯ ವೃತ್ತಿ ಮಹತ್ವದ್ದಾಗಿದೆ. ಹಗಲಿರುಳೆನ್ನದೆ ವೈದ್ಯರು ರೋಗಿಗಳ ಆರೋಗ್ಯ ಕಾಪಾಡಲು ಶ್ರಮಿಸುತ್ತಾರೆ. ವೈಯಕ್ತಿಕ ಜೀವನವನ್ನು ತ್ಯಾಗ ಮಾಡಿ ಜನರ ಜೀವ ಕಾಪಾಡಲು ವೈದ್ಯರು ತಮ್ಮ ಜೀವನವನ್ನು ಮುಡುಪಾಗಿಟ್ಟಿರುತ್ತಾರೆ. ಅಂತಃಕರಣ ಹೆಚ್ಚಿರುವ ವೈದ್ಯರು ಸಮಾಜಕ್ಕೆ ಅವಶ್ಯ ಎಂದು ಅವರು ಅಭಿಪ್ರಾಯಪಟ್ಟರು.

ವೈದ್ಯ ದಂಪತಿಗಳಿಗೆ ಸನ್ಮಾನ: ಇದೇ ವೇಳೆ ವೈದ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವೈದ್ಯ ದಂಪತಿಗಳನ್ನು ಸನ್ಮಾನಿಸಲಾಯಿತು. ವೈದ್ಯಕೀಯ ಶಿಕ್ಷಣ ನಿವೃತ್ತ ನಿರ್ದೇಶಕ ಡಾ.ಸಿ.ಆರ್.ತಿರುಮಲಾಚಾರ್, ನಿವೃತ್ತ ವೈದ್ಯಾಧಿಕಾರಿ ಡಾ.ಟಿ.ಎ.ವೀಣಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಪಶುವೈದ್ಯ ಇಲಾಖೆ ಉಪನಿರ್ದೇಶಕ ಡಾ.ನಾಗರಾಜು, ಹಿರಿಯ ಮಕ್ಕಳ ತಜ್ಞೆ ಡಾ.ಜಯಮಾಲ ಆರ್., ಪಶುವೈದ್ಯ ಇಲಾಖೆ ಸಹಾಯಕ ನಿರ್ದೇಶಕ ಡಾ.ವೈ.ಡಿ.ರಾಜಣ್ಣ, ಹಿರಿಯ ವೈದ್ಯಾಧಿಕಾರಿ ಡಾ.ಹೆಚ್.ಎಂ.ಚಂದ್ರಕಲಾ, ನಿವೃತ್ತ ಹಿರಿಯ ವೈದ್ಯಾಧಿಕಾರಿ ಡಾ.ಶಿವರಾಜು ಪಿ., ವೈದ್ಯಾಧಿಕಾರಿ ಡಾ.ಭಾರತಿ ಎಂ., ಜಿಲ್ಲಾ ಆರೋಗ್ಯ ತರಬೇತಿ ಕೇಂದ್ರದ ಉಪನಿರ್ದೇಶಕ ಡಾ.ರವಿ ಎಲ್., ಹಿರಿಯ ವೈದ್ಯಾಧಿಕಾರಿ ಡಾ.ಸೌಮ್ಯಶ್ರೀ ಹೆಚ್.ಕೆ., ಡಾ.ಗುರುರಾಜ್ ಕೆ.ಜಿ., ಡಾ.ಸೌಮ್ಯ ಗುರುರಾಜ್, ಡಾ.ಸಾರಾ ಧನುಷ್, ಡಾ.ಶೀತಲ್ ಸುಬ್ಬಯ್ಯ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಕವಯಿತ್ರಿ ಲತಾ ರಾಜಶೇಖರ್, ಹಿರಿಯ ಸಮಾಜ ಸೇವಕಿ ಡಾ.ಪುಷ್ಪಾ ಅಯ್ಯಂಗಾರ್, ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಆಧ್ಯಾತ್ಮ ಚಿಂತಕಿ ಸುಮತಿ ಸುಬ್ರಮಣ್ಯ ಉಪಸ್ಥಿತರಿದ್ದರು.

ರೋಗ ಬಾಧೆ ನಿಯಂತ್ರಣಕ್ಕೆ ಜಾನುವಾರುಗಳಿಗೆ ವ್ಯಾಕ್ಸಿನೇಷನ್

ದೇಶದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದರೆ; ರಾಜ್ಯದಲ್ಲಿ ಮೈಸೂರು ಅಗ್ರಸ್ಥಾನದಲ್ಲಿದೆ



ಮೈಸೂರು,ಜು.1(ಬಿಎಲ್‌ಯು)– ಜಾನುವಾರುಗಳಿಗೆ ಕಾಲು, ಬಾಯಿ ಜ್ವರ ಮತ್ತು ಚರ್ಮಗಂಟು ರೋಗಕ್ಕೆ ವ್ಯಾಕ್ಸಿನೇಷನ್ ಹಾಕುವಲ್ಲಿ ಇಡೀ ದೇಶದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದರೆ, ಇಡೀ ರಾಜ್ಯದಲ್ಲಿ ಮೈಸೂರು ಅಗ್ರಸ್ಥಾನದಲ್ಲಿದೆ.

ಕಾಲುಬಾಯಿ ಜ್ವರ ಹಾಗೂ ಚರ್ಮಗಂಟು ಜ್ವರ ಜಾನುವಾರುಗಳನ್ನು ನರಳುವಂತೆ ಮಾಡಿ ಪ್ರಾಣವನ್ನೆ ತೆಗೆದುಕೊಳ್ಳುತ್ತದೆ. ಆದ ಕಾರಣ ಪಶು ಸಂಗೋಪನಾ ಇಲಾಖೆಯು ಕಾಲುಬಾಯಿ ಜ್ವರಕ್ಕೆ ವರ್ಷದಲ್ಲಿ ಎರಡು ಬಾರಿ ವ್ಯಾಕ್ಸಿನೇಷನ್ ಹಾಗೂ ಚರ್ಮಗಂಟು ರೋಗಕ್ಕೆ ಒಂದು ಬಾರಿ ವ್ಯಾಕ್ಸಿನೇಷನ್ ಅನ್ನು ಉಚಿತವಾಗಿ ನೀಡುತ್ತದೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜಾನುವಾರು ಸಾಕಾಣಿಕೆ ಮಾಡುವ ಮನೆಗಳಿಗೆ ಹೋಗಿ ವ್ಯಾಕ್ಸಿನೇಷನ್ ನೀಡಲಾಗುತ್ತಿದೆ. ಇದರಿಂದ ಜಾನುವಾರುಗಳು ರೋಗ ಬಾಧೆಯಿಂದ ಪಾರಾಗಿ, ಅವುಗಳ ಜೀವಿತಾವಧಿ ಹೆಚ್ಚಾಗುತ್ತದೆ.

ಒಂದು ವೇಳೆ ವ್ಯಾಕ್ಸಿನೇಷನ್ ನೀಡದಿದ್ದರೆ ಜಾನುವಾರುಗಳು ರೋಗದಿಂದ ಬಳಲುತ್ತಿರುತ್ತದೆ. ಇದರಿಂದ ಗರ್ಭ ಕಟ್ಟುವುದಿಲ್ಲ, ಗರ್ಭ ಕಟ್ಟಿದರೂ ಹೆಚ್ಚು ಹಾಲು ನೀಡುವುದಿಲ್ಲ. ಸ್ವಲ್ಪವೂ ಬಿಸಿಲಿನ ತಾಪ ತಡೆಯಲು ಸಾಧ್ಯವಾಗದೆ ನಿಶ್ಶಕ್ತಿಯಿಂದ ಸಾವನ್ನಪ್ಪುತ್ತದೆ. ಆದರೆ ವ್ಯಾಕ್ಸಿನೇಷನ್ ಹಾಕಿದರೆ ಜಾನುವಾರುಗಳು ರೋಗ ಮುಕ್ತವಾಗಿ ಅವುಗಳ ಜೀವಿತಾವಧಿ ಹೆಚ್ಚಾಗುತ್ತದೆ. ಕರ್ನಾಟಕದಲ್ಲಿ 4.80 ಲಕ್ಷ ಜಾನುವಾರುಗಳಿದ್ದು, ಈಗಾಗಲೇ 4.60 ಲಕ್ಷ ಜಾನುವಾರುಗಳಿಗೆ ವ್ಯಾಕ್ಸಿನೇಷನ್ ನೀಡಲಾಗಿದೆ. 1 ದಿನಕ್ಕೆ 10 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತದೆ. ಹಾಲು ಉತ್ಪಾದನೆ ರೈತರ ಮೂಲ ವೃತ್ತಿಯಾಗಿದ್ದು, ಉತ್ತಮ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಕ್ಷೀರ ಕ್ರಾಂತಿಯಿಂದ ರೈತರು ಹೆಚ್ಚು ಲಾಭ ಪಡೆಯುತ್ತಿದ್ದಾರೆ. ಇದರಿಂದ ಜಾನುವಾರು ಸಾಕಾಣಿಕೆಗೆ ಸಂಬಂಧಿಸಿದಂತೆ ರೈತರು ಯಾವುದೇ ಸಮಸ್ಯೆ ಹೇಳಿದರು ಅದನ್ನು ಪರಿಹಾರ ಮಾಡಲಾಗುತ್ತದೆ.

ಜಾನುವಾರು, ಕುರಿ ಸಾವನ್ನಪ್ಪಿದರೆ ಸರ್ಕಾರದಿಂದ ನೇರ ಪರಿಹಾರ

“ ಕಾಲು, ಬಾಯಿ ಜ್ವರ ಹಾಗೂ ಚರ್ಮ ಗಂಟು ರೋಗ ನಿಯಂತ್ರಣಕ್ಕೆ ಮೈಸೂರಿನಲ್ಲಿ ವ್ಯಾಕ್ಸಿನೇಷನ್ ಮಾಡಲಾಗುತ್ತಿದ್ದು, ಬಹುತೇಕ ಗುರಿ ತಲುಪಿದ್ದೇವೆ. ಜಾನುವಾರು, ಕುರಿಗಳು ಸಾವನ್ನಪ್ಪಿದಾಗ ಅವುಗಳಿಗೆ ಸರ್ಕಾರದಿಂದ ಪರಿಹಾರ ನೀಡಲಾಗುತ್ತಿದೆ. ಜಾನುವಾರು ಸಾವನ್ನಪ್ಪಿದರೆ ಕಾಮಧೇನು ಆಪತ್ತು ನಿಧಿಯಿಂದ 10ರಿಂದ 15 ಸಾವಿರ ರೂಪಾಯಿ ಪರಿಹಾರ, ಕುರಿ ಸಾವನ್ನಪ್ಪಿದರೆ 5ರಿಂದ 7.50 ಸಾವಿರ ರೂಪಾಯಿ ಹಾಗೂ ಕುರಿ ಮರಿ ಮೃತಪಟ್ಟರೆ 3ರಿಂದ 6 ಸಾವಿರ ರೂಪಾಯಿ ಪರಿಹಾರ ದೊರೆಯುತ್ತದೆ. ಹೀಗೆ ಮೃತಪಡುವ ಜಾನುವಾರು ಮತ್ತು ಕುರಿಗಳನ್ನು ಪಶು ವೈದ್ಯರು ಶವ ಪರೀಕ್ಷೆ ಮಾಡುವರು. ಅವರು ನೀಡುವ ವರದಿ ಆಧರಿಸಿ ಪರಿಹಾರ ಬಿಡುಗಡೆ ಮಾಡಲಾಗುವುದು. ಈ ಹಣ ನೇರವಾಗಿ ಜಾನುವಾರು ಹಾಗೂ ಕುರಿ ಸಾಕಾಣಿಕೆ ಮಾಡುವ ವ್ಯಕ್ತಿಯ ಖಾತೆಗೆ ನೇರವಾಗಿ ಜಮಾ ಆಗುತ್ತದೆ. ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರಿಗೆ ನೇರವಾಗಿ ಹಣ ತಲುಪುತ್ತದೆ. ಪಶು ಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದ್ದು, ಇದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ.

–ಡಾ.ನಾಗರಾಜ್, ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಜು.1– ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯನ್ನಾಗಿ ನುಗ್ಗಹಳ್ಳಿ ಗ್ರಾಮದ ಎನ್.ಸಿ. ಶಿವಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 1–ಮೈಸೂರು ಜಿಲ್ಲಾ ಸವಿತಾ ಸಮಾಜದ ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಹಾಗೂ ಎಲ್ಲಾ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಉಚಿತ ವಿದ್ಯಾರ್ಥಿನಿಲಯ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಪಿ. 8105495679, 9611835730, 9945890809 ಸಂಪರ್ಕಿಸಬಹುದು.

ಬಿಂದುಮಣಿ ಮೈಸೂರು ನಗರ ಕಾನೂನು–ಸುವ್ಯವಸ್ಥೆ ಡಿಸಿಪಿ

ಆಂತರಿಕ ಭದ್ರತಾ ವಿಭಾಗದ ಎಸ್ಪಿಯಾಗಿ ಎಂ.ಮುತ್ತುರಾಜ್ ವರ್ಗ



ಬಿಂದುಮಣಿ

ಮೈಸೂರು, ಜು. 1(ಆರ್‌ಕೆ)– ಬೆಂಗಳೂರಿನಲ್ಲಿ ಗುಪ್ತವಾರ್ತಾ ವಿಭಾಗ–1ರಲ್ಲಿ ಎಸ್ಪಿಯಾಗಿ ಸೇವೆ ಸಲ್ಲಿಸುತ್ತಿದ್ದ ಐಪಿಎಸ್ ಅಧಿಕಾರಿ ಆರ್.ಎನ್.ಬಿಂದುಮಣಿ ಅವರನ್ನು ಮೈಸೂರು ನಗರ ಕಾನೂನು –ಸುವ್ಯವಸ್ಥೆ ವಿಭಾಗದ ಡಿಸಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧೀನ ಕಾರ್ಯದರ್ಶಿ ಕೆ.ವಿ. ಅಶೋಕ್ ಇಂದು ವರ್ಗಾವಣೆ ಆದೇಶ ಹೊರಡಿಸಿದ್ದು, ಮೈಸೂರು ನಗರ ಕಾನೂನು –ಸುವ್ಯವಸ್ಥೆ ವಿಭಾಗದ ಡಿಸಿಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂ.ಮುತ್ತುರಾಜ್ ಅವರನ್ನು ಆಂತರಿಕ ಭದ್ರತಾ ವಿಭಾಗದ ಎಸ್ಪಿಯನ್ನಾಗಿ ನಿಯೋಜಿಸಿದ್ದಾರೆ. ಮೂಲತಃ ಬೆಂಗಳೂರಿನವರಾದ ಬಿಂದುಮಣಿ 2021ರ ಕರ್ನಾಟಕ ಕೇಡರ್ ಐಪಿಎಸ್ ಅಧಿಕಾರಿಯಾಗಿದ್ದು, ರಾಜ್ಯ ಗುಪ್ತವಾರ್ತಾ ವಿಭಾಗದಲ್ಲಿ ಎಸ್ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇದೀಗ ಮೈಸೂರು ನಗರ ಡಿಸಿಪಿಯಾಗಿ 2ನೇ ಹುದ್ದೆಗೆ ವರ್ಗಾವಣೆಗೊಂಡಿದ್ದಾರೆ.

ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ...



ಎಂಸಿಡಿಸಿಸಿ ಬ್ಯಾಂಕ್‌ನ ನಿರ್ದೇಶಕರಾಗಿ ಚುನಾಯಿತರಾದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಸಮಾಜ ಸೇವಕ ಎಸ್.ಶ್ರೀಕಾಂತ್ ಹೂಗುಚ್ಛ ನೀಡಿ ಅಭಿನಂದಿಸಿದರು. ಜಯಪುರ ದೊಡ್ಡ ಪ್ರಮಾಣ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘದ ನಿರ್ದೇಶಕ ಮಾವಿನಹಳ್ಳಿ ಅಭಿಷೇಕ್, ಜೆಡಿಎಸ್ ಮುಖಂಡರಾದ ಮಧುಚಂದ್ರ ಮಂಜಣ್ಣ, ಸಂತೋಷ್, ಕೋಣನೂರು ಶಿವಕುಮಾರ್ ಈ ವೇಳೆ ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಪಿ.ಶಿವಕೋಟಾ ರೆಡ್ಡಿ ಮತ್ತು ಡಾ.ಪಿ.ಎಸ್. ಹೇಮಾವತಿ ಮಾರ್ಗದರ್ಶನದಲ್ಲಿ ಹೆಚ್. ಮಂಗಳಗೌರಮ್ಮ ಅವರು Some investigations in the theory of graphs ಮಹಾಪ್ರಬಂಧವನ್ನು ವಿಟಿಯು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಫುಟ್‌ಪಾತ್, ಚರಂಡಿ, ರಾಜಕಾಲುವೆ ಒತ್ತುವರಿ ಮಾಡುವುದು ಒಂದು ದೊಡ್ಡ ರೋಗ; ಇದಕ್ಕೆ ಮದ್ದಿಲ್ಲ

ಜನಸಂಪರ್ಕ ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಗರಂ



ಮೈಸೂರು ವಿಜಯನಗರ 1 ಮತ್ತು 2ನೇ ಹಂತದ(20ನೇ ವಾರ್ಡ್) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡರಿಗೆ ನಿವಾಸಿಗಳಿಂದ ಮನವಿ ಪತ್ರ ಸಲ್ಲಿಸಲಾಯಿತು.

ಮೈಸೂರು, ಜು.1(ಎಸ್‌ಪಿಎನ್)– ನಗರ ವಾಸಿಗಳಿಗೆ ಮನೆ ಮುಂದಿನ ಫುಟ್‌ಪಾತ್, ಚರಂಡಿ ಹಾಗೂ ರಾಜಕಾಲುವೆ ಒತ್ತುವರಿ ಮಾಡುವುದು ಒಂದು ದೊಡ್ಡ ರೋಗ. ಇದಕ್ಕೆ ಯಾವುದೇ ಮದ್ದಿಲ್ಲ. ಇದನ್ನು ತಡೆಯಲು ಸಾಧ್ಯವಾಗುತ್ತಿಲ್ಲ ಎಂದು ಶಾಸಕ ಕೆ.ಹರೀಶ್‌ಗೌಡ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದ ಯೋಗನರಸಿಂಹ ಸ್ವಾಮೀ ದೇವಸ್ಥಾನದ ಮುಂಭಾಗದ ಉದ್ಯಾನವನದ ಯೋಗಮಂಟಪದಲ್ಲಿ ವಿಜಯನಗರ 1 ಮತ್ತು 2ನೇ ಹಂತದ(20ನೇ ವಾರ್ಡ್) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿ ನಿವಾಸಿಯೊಬ್ಬರ ಅಹವಾಲು ಸ್ವೀಕರಿಸುವ ವೇಳೆ ತಮ್ಮ ಅಸಹಾಯಕತೆ ತೋಡಿಕೊಂಡರು.

ವಿಜಯನಗರ ಒಂದನೇ ಹಂತದ ನಿವಾಸಿಯೊಬ್ಬರು ಶಾಸಕರಿಗೆ ತಮ್ಮ ಅಹವಾಲು ಹೇಳುತ್ತಾ, ವಿಜಯನಗರದಲ್ಲಿ ಇತ್ತೀಚೆಗೆ ಫುಟ್‌ಪಾತ್ ಒತ್ತುವರಿ ಹೆಚ್ಚಾಗುತ್ತಿದೆ. ಸಾರ್ವಜನಿಕರು ತಮ್ಮ ಮುಂದಿನ ಫುಟ್‌ಪಾತ್‌ನಲ್ಲಿ ಹೂ ತೋಟ ಮಾಡಿ, ಅದಕ್ಕೆ ತಂತಿಬೇಲಿ ಹಾಕಿ ಫುಟ್‌ಪಾತ್ ಒತ್ತುವರಿ ಮಾಡುತ್ತಾರೆ. ದೊಡ್ಡ ಚರಂಡಿ, ರಾಜಕಾಲುವೆ ಇದ್ದರೆ, ಅದನ್ನೂ ಒತ್ತುವರಿ ಮಾಡುವುದು ಸಾರ್ವತ್ರಿಕವಾಗಿ ಬಿಟ್ಟಿದೆ. ಇದನ್ನು ತಡೆಗಟ್ಟಲು ಪಾಲಿಕೆ ಮತ್ತು ಎಂಡಿಎ ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ ಎಂದು ಶಾಸಕರಲ್ಲಿ ಮನವಿ ಮಾಡಿದ್ದಕ್ಕೆ ಶಾಸಕರು ಈ ಮೇಲಿನಂತೆ ಉತ್ತರಿಸಿದರು.

ಅಪರಾಧ ಪ್ರಕರಣ ಹೆಚ್ಚಳ

“ ವಿಜಯನಗರ 1 ಮತ್ತು 2ನೇ ಹಂತದಲ್ಲಿ ಕಳೆದ ಮೂರು ತಿಂಗಳೀಚೆಗೆ ಬೈಕ್, ಸರಗಳ್ಳತನ, ಕಾರಿನ ಟೈರ್, ಬ್ಯಾಟರಿ ಕಳ್ಳತನ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಕಳೆದ 15 ದಿನಗಳಲ್ಲಿ ಕಾರು, ಜೀಪ್‌ಗಳ ಬ್ಯಾಟರಿ ಕಳವು ಸೇರಿದಂತೆ ಒಟ್ಟು 14 ಪ್ರಕರಣಗಳು ಬೆಳಕಿಗೆ ಬಂದಿವೆ. ಇದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಶಾಸಕರ ಗಮನಕ್ಕೆ ತಂದರಲ್ಲದೆ, ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನೇಮಿಸಿ ಬೀಟ್ ವ್ಯವಸ್ಥೆ ಹೆಚ್ಚಿಸುವಂತೆ ಮನವಿ ಮಾಡಿದರು.

ಜಂಕ್‌ಫುಡ್‌ಗಳ ಗಾಡಿಗಳ ಖಾಲಿ ಮಾಡಿಸಿ: ವಿಜಯನಗರ ಬಡಾವಣೆಯ ಹೈಟೆನ್ಷನ್ ಲೈನ್ ಕೆಳಗಡೆ ಇರುವ ಜಂಕ್ ಫುಟ್ ಅಂಗಡಿಗಳನ್ನು ಖಾಲಿ ಮಾಡಿಸುವಂತೆ ನಿವಾಸಿಯೊಬ್ಬರು ಶಾಸಕರಲ್ಲಿ ಮನವಿ ಮಾಡಿದರು. ವಿಜಯನಗರ 1 ಮತ್ತು 2ನೇ ಬಡಾವಣೆಯಲ್ಲಿ ಯುಜಿಡಿ ಪೈಪ್‌ಲೈನ್ ಅಳವಡಿಸಿ, ಕಾಮಗಾರಿ ಮುಗಿದಿದ್ದರೂ ಆ ಜಾಗದಲ್ಲಿ ಡಾಂಬರ್ ಹಾಕಿಲ್ಲ. ಇದರಿಂದ ಈ ಮಾರ್ಗದಲ್ಲಿ ವಾಹನ ಸವಾರರು, ಪಾದಾಚಾರಿಗಳು ಓಡಾಡುವುದೇ ದುಸ್ತರವಾಗಿದೆ. ಬೇಗ ಡಾಂಬರೀಕರಣ ಮಾಡಿಸಿ ಎಂದು ಶಾಸಕರಲ್ಲಿ ನಿವಾಸಿಗಳು ಮನವಿ ಮಾಡಿದರು.

ಬೀದಿನಾಯಿ ಹಾವಳಿ: ಬಹುತೇಕ ರಸ್ತೆಗಳಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಹಗಲು–ರಾತ್ರಿ ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ. ಹುಚ್ಚುನಾಯಿಗಳ ಕಡಿತದಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಅಲ್ಲದೆ, ಕೆಲ ಮನೆ ಮಾಲೀಕರು ನಾಯಿಗಳನ್ನು ಸಾಕುತ್ತಾರೆ. ನಂತರ ಕಾರಣಾಂತರಗಳಿಂದ ಬೀದಿಗೆ ಬಿಟ್ಟು ಬಿಡುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಶಾಸಕರ ಬಳಿ ಅಲವತ್ತುಗೊಂಡರು.

ಸಭೆಯಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಅಧಿಕಾರಿಗಳಾದ ಸಮೀನಾ, ವೆಂಕಟರಾಮು, ರೆವಿನ್ಯೂ ಅಧಿಕಾರಿ ಪ್ರಸಾದ್, ನವೀನ್, ಕಾರ್ಯಪಾಲಕ ಅಭಿಯಂತರರಾದ (ವಿದ್ಯುತ್) ಎ.ಇ.ದೀಪಕ್, ನಾಗೇಶ್, ಯೋಗೇಶ್, ಎಂಡಿಎ ಸಹಾಯಕರಾದ ಇಂಜಿನಿಯರ್ ಸುರೇಶ್, ಅಶ್ವಿನ್ ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 1–ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದಿರುವ ಮೈಸೂರು ನಗರ ಮತ್ತು ಮೈಸೂರು ಗ್ರಾಮಾಂತರ ವಿಶ್ವಕರ್ಮ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸ್ವೀಕರಿಸುವ ಕೊನೆ ದಿನಾಂಕ ಜುಲೈ 10. ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿ, ಪೋಷಕರ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ಮೂಲ ಅಂಕಪಟ್ಟಿ ಪ್ರತಿ, ವಿದ್ಯಾರ್ಥಿ ಅಥವಾ ಪೋಷಕರ ಮೊಬೈಲ್ ನಂಬರ್ ಜೊತೆ ಅರ್ಜಿಯನ್ನು ಎಲ್‌ಐಜಿ–130, 3ನೇ ಕ್ರಾಸ್, ಗಂಗೋತ್ರಿ ಬಡಾವಣೆ ಇಲ್ಲಿಗೆ ಕಳುಹಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗೆ ಮೊ. 9108814433, 9739809952, 8123452173 ಸಂಪರ್ಕಿಸಬಹುದು.

ಯಶಸ್ವಿನಿ ಮಹಿಳಾ ಸಂಘ: ಬಬ್ಬೂರು ಕಮ್ಮೆ ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಯಶಸ್ವಿನಿ ಮಹಿಳಾ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95ಕ್ಕಿಂತ ಹೆಚ್ಚು, ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆಸಕ್ತರು ಜು.10ರೊಳಗೆ ಅರ್ಜಿಯನ್ನು ಸಂಘದ ಕಚೇರಿಗೆ ತಲುಪಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9845272963, 9886636806 ಸಂಪರ್ಕಿಸಬಹುದು.

ಮೈಸೂರು ಮಿತ್ರ ಬುಧವಾರ 2 ಜುಲೈ 2025

ಯಾರೋ ಕಟ್ಟಿದ ಗೂಡಿಗೆ ಸೇರಿಕೊಂಡ ಸಿಎಂ ಸಿದ್ದರಾಮಯ್ಯ

ಜನರೊಂದಿಗೆ ಜನತಾದಳ, ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ನಿಖಿಲ್ ವಾಗ್ದಾಳಿ

ಕೆ.ಆರ್.ಪೇಟೆ, ಜು.1– ಇರುವೆ ಕಟ್ಟಿದ ಗೂಡಿಗೆ ಹಾವು ಸೇರಿಕೊಂಡಂತೆ ಯಾರೋ ಕಟ್ಟಿದ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು 2 ಬಾರಿ ಸಿಎಂ ಆಗಿರುವ ಸಿದ್ದರಾಮಯ್ಯ ಅವರು ಲಾಟರಿ ಮುಖ್ಯಮಂತ್ರಿಯಾಗಿದ್ದಾರೆ. 2013ರಲ್ಲಿ ಮುಖ್ಯಮಂತ್ರಿಯಾಗಬೇಕಿದ್ದ ಡಾ.ಜಿ.ಪರಮೇಶ್ವರ್ ಅವರನ್ನು ಕೊರಟಗೆರೆಯಲ್ಲಿ ಸೋಲಿಸಿದ್ದು ಯಾರು, ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೇಂದ್ರ ಸರ್ಕಾರದ ಸೇವೆಗೆ ಕಳಿಸಿದ್ದು ಯಾರು ಎಂದು ಸಿದ್ದರಾಮಯ್ಯ ವಿರುದ್ಧ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಪಟ್ಟಣದ ಟಿಎಪಿಸಿಎಂಎಸ್ ಸಮುದಾಯ ಭವನದಲ್ಲಿ ತಾಲೂಕು ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಜೆಡಿಎಸ್ ಸದಸ್ಯತ್ವ ಅಭಿಯಾನ ಹಾಗೂ ಜನರೊಂದಿಗೆ ಜನತಾದಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ರೂಪಿಸಿದ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ಹಿಮಾಚಲ ಪ್ರದೇಶ, ತೆಲಂಗಾಣ, ಕರ್ನಾಟಕ ರಾಜ್ಯಗಳು ದಿವಾಳಿಯಾಗಿವೆ. ಕಾಂಗ್ರೆಸ್ ಶಾಸಕರೇ ಮಾಧ್ಯಮಗಳ ಮುಂದೆ ಬಂದು ಅನುದಾನ ನೀಡುತ್ತಿಲ್ಲ ಕ್ಷೇತ್ರದ ಜನತೆಗೆ ಮುಖ ತೋರಿಸಲು ಆಗುತ್ತಿಲ್ಲ ಎಂದು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇನ್ನು ವಿಪಕ್ಷಗಳ ಶಾಸಕರಿಗೆ ಇನ್ನೆಲ್ಲಿ ಅನುದಾನ ನೀಡುತ್ತಾರೆ. ಕರ್ನಾಟಕ ಸರ್ಕಾರವು ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ಅಗತ್ಯ ವಸ್ತುಗಳ ಬೆಲೆ ಜಾಸ್ತಿ ಮಾಡಿದ್ದರೂ ದಿವಾಳಿಯಾಗಿದ್ದು, ಜನರಿಗೆ ಮೂಲ ಸೌಲಭ್ಯಕ್ಕೆ ಅನುದಾನ ನೀಡುವಲ್ಲಿ ವಿಫಲವಾಗಿದೆ ಎಂದು ಕಿಡಿಕಾರಿದರು.

2 ವರ್ಷ ಅಧಿಕಾರ ಪೂರೈಸಿದ್ದರೂ ಒಂದೇ ಒಂದು ಅಂಬೇಡ್ಕರ್, ಇಂದಿರಾ, ಬಸವ ಯೋಜನೆಯಲ್ಲಿ ಒಂದೇ ಒಂದು ಆಶ್ರಯ ಮನೆ ವಿತರಣೆ ಮಾಡಿಲ್ಲ. ಹಣ ಕೊಟ್ಟ ಕ್ಷೇತ್ರಗಳಿಗೆ ಆಶ್ರಯ ಮನೆಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.


ಅಧಿಕಾರ ಕೊಡಿಸುವುದೇ ಗುರಿ: ಮುಂಬರುವ ಜಿಪಂ, ತಾಪಂ, ಗ್ರಾಪಂ ಹಾಗೂ ಪುರಸಭೆ, ಪಪಂ ಚುನಾವಣೆ ಕಾರ್ಯಕರ್ತರು ನಿಂತು ಜನಪ್ರತಿನಿಧಿಯಾಗುವ ಚುನಾವಣೆಯಾಗಿದ್ದು, ಇದರ ಅಂಗವಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಆಶಯದಂತೆ ರಾಜ್ಯಾದ್ಯಂತ ಪಕ್ಷ ಸಂಘಟನೆಗೆ ಮುಂದಾಗಿದ್ದೇನೆ. ನನ್ನ ಶಿಸ್ತಿನ ಸಿಪಾಯಿಯಂತಹ ಕಾರ್ಯಕರ್ತರಿಗೆ ಅಧಿಕಾರ ಕೊಡಿಸುವುದು ನನ್ನ ಈ ಪಕ್ಷ ಸಂಘಟನೆ ಉದ್ದೇಶವಾಗಿದೆ ಎಂದರು.

ನಮ್ಮ ಪಕ್ಷ ಕಾರ್ಯಕರ್ತರಿಂದ ಬೆಳೆದ ಪಕ್ಷ. ರಾಷ್ಟ್ರೀಯ ಪಕ್ಷಗಳ ಕಾರ್ಯಕರ್ತರು ಚುನಾವಣೆ ವೇಳೆ ಬೇರೆ ಪಕ್ಷಗಳಿಗೆ ವಲಸೆ ಹೋದರು ಹೋಗಬಹುದು. ಆದರೆ ಜೆಡಿಎಸ್ ಕಾರ್ಯಕರ್ತರು ಯಾವುದೇ ಆಮಿಷಕ್ಕೂ ಬಲಿಯಾಗದೇ, ಶಿಸ್ತಿನ ಸಿಪಾಯಿಯಂತಹ ಗಟ್ಟಿ ಕಾರ್ಯಕರ್ತರಾಗಿದ್ದಾರೆ. ಇವರಿಗಾಗಿ ನಾನು ಯಾವುದೇ ತ್ಯಾಗಕ್ಕೂ ಸಿದ್ಧನಿದ್ದೇನೆ ಎಂದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಜಿಲ್ಲೆಯಲ್ಲಿ ಸಂವಿಧಾನದ ಪ್ರಕಾರ ಕೆಲಸ ಮಾಡುತ್ತಿಲ್ಲ ಜೆಡಿಎಸ್ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣ ದಾಖಲಿಸುವ ಕೆಲಸ ಮಾಡುತ್ತಿದ್ದಾರೆ. ಕತ್ತುಘಟ್ಟದಲ್ಲಿ ಒಬ್ಬ ಕಾಂಗ್ರೆಸ್ ಕಾರ್ಯಕರ್ತನ ಉಳಿಸುವ ಕೆಲಸ ಮಾಡಿದ್ದಾರೆ. ನಾವು ಅಶ್ವಮೇಧ ಕುದುರೆ ಕಟ್ಟಿದ್ದೇವೆ. ಕಾಂಗ್ರೆಸ್‌ನವರಿಗೆ ತಾಕತ್ ಇದ್ದರೆ ಕಟ್ಟಿಹಾಕಿ ಎಂದು ಸವಾಲು ಹಾಕಿದರು.

ಇದೇ ವೇಳೆ ನಿಖಿಲ್ ಕುಮಾರಸ್ವಾಮಿ ಅವರಿಗೆ ಬೆಳ್ಳಿ ಗದೆ ನೀಡಿ ಸನ್ಮಾನಿಸಲಾಯಿತು. ಅಲ್ಲದೇ ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣಕ್ಕೆ ಆಗಮಿಸಿದ ನಿಖಿಲ್ ಅವರಿಗೆ ಕೊಬ್ಬರಿ ಹಾಗೂ ಮೂಸಂಬಿ ಹಾರ ಹಾಕಿ ಸ್ವಾಗತಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸುರೇಶ್‌ಗೌಡ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ಕಾರ್ಯಾಧ್ಯಕ್ಷ ಬಿ.ಎಂ.ರಾಮಚಂದ್ರನ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ದಿಶಾ ಸಮಿತಿ ಸದಸ್ಯ ನರಸ ನಾಯಕ್, ಹೆಚ್.ಟಿ.ಲೋಕೇಶ್, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ರಾಜ್ಯ ಜೆಡಿಎಸ್ ವಕ್ತಾರ ಅಶ್ವಿನ್, ಮುಖಂಡರಾದ ಎ.ಆರ್.ರಘು, ಎಸ್.ಎಲ್.ಮೋಹನ್, ಬಿ.ಎಂ.ಕಿರಣ್, ಎ.ಎಂ.ಸಂಜೀವಪ್ಪ, ವಿ.ಎಸ್.ಧನಂಜಯ ಕುಮಾರ್, ಮಲ್ಲೇಶ್, ಮೋಹನ್, ಕುಮಾರಸ್ವಾಮಿ, ವಿ.ಎನ್.ಮಹಾದೇವೇಗೌಡ, ಅಜಯ್ ರಾಮೇಗೌಡ, ಎಸ್.ಆರ್.ನವೀನ್ ಕುಮಾರ್, ಹರೀಶ್, ಜಗದೀಶ್, ತಾಲೂಕು ಮಹಿಳಾ ಜೆಡಿಎಸ್ ಅಧ್ಯಕ್ಷೆ ರೇಖಾ, ತಾಲೂಕು ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ನರಸಿಂಹ, ಕುಶೆಟ್ಟಿ ಸೋಮಶೇಖರ್, ಲೋಕೇಶ್, ಸೇರಿದಂತೆ ಸಾವಿರಾರು ಕಾರ್ಯಕರ್ತರಿದ್ದರು.



ಜೆಡಿಎಸ್ ಸದಸ್ಯತ್ವ ಅಭಿಯಾನ, ಜನರೊಂದಿಗೆ ಜನತಾದಳ ಕಾರ್ಯಕ್ರಮವನ್ನು ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಿದರು.

> ನಿಖಿಲ್ ಕುಮಾರಸ್ವಾಮಿ ಅವರ ನಡೆ ನುಡಿಯಲ್ಲಿ ಅವರ ತಾತನ ಅನುಕರಣೆ ಇದೆ. ರಾಜಕಾರಣದಲ್ಲಿ ಒಳ್ಳೆಯ ಪ್ರಬುದ್ಧತೆ ಇದೆ ಎಂದು ಚಿತ್ರನಟ ಮುಖ್ಯಮಂತ್ರಿ ಚಂದ್ರು ಅವರು ನೆನ್ನೆ ತಾನೆ ಮಾತನಾಡಿರುವುದನ್ನು ನೆನಪಿಸಿಕೊಂಡ ಅವರು, ನಿಖಿಲ್ ಅವರು ಪಕ್ಷ ಕಟ್ಟಲು ತಮ್ಮೆಲ್ಲರ ವಿಶ್ವಾಸದಿಂದ ಮುನ್ನಡೆಯುತ್ತಿದ್ದಾರೆ. ಅದೇ ರೀತಿ ಕುಮಾರಸ್ವಾಮಿಯನ್ನು ಜಿಲ್ಲೆಯಲ್ಲಿ ಅತಿ ಹೆಚ್ಚು ಮತಗಳಿಂದ ಗೆಲ್ಲಿಸಿದ ಕಾರಣ ಅವರು ಪ್ರಧಾನಿ ಮೋದಿ ಸಚಿವ ಸಂಪುಟದಲ್ಲಿ ಪ್ರಭಾವಿ ಮಂತ್ರಿಯಾಗಿದ್ದಾರೆ. ಕುಮಾರಸ್ವಾಮಿ ಅವರು ಹೋಗೆಸೊಪ್ಪು, ಕೊಬ್ಬರಿ, ಮಾವಿಗೆ ಹಾಗೂ ಕೊಬ್ಬರಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರದಿಂದ ಕೊಡಿಸಿದ್ದಾರೆ. ಕೇಂದ್ರದಿಂದ ಹಲವು ಕೈಗಾರಿಕೆಗಳನ್ನು ತಂದು ರಾಜ್ಯವನ್ನು ಅಭಿವೃದ್ಧಿ ಪಡಿಸಲು ಕುಮಾರಸ್ವಾಮಿ ಸಿದ್ದರಾಗಿದ್ದು, ಅವರಿಗೆ ಒಳ್ಳೆಯ ಹೆಸರು ಬರಲಿದೆ ಎಂದು ರಾಜ್ಯ ಸರ್ಕಾರ ಅವರಿಗೆ ಬೆಂಬಲ ನೀಡುತ್ತಿಲ್ಲ. – ಹೆಚ್.ಟಿ.ಮಂಜು, ಶಾಸಕ.

ಬಾಲ್ಯವಿವಾಹ ಪ್ರೋತ್ಸಾಹಿಸಿದರೆ ಕಠಿಣ ಕ್ರಮ

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಎಚ್ಚರಿಕೆ

ಮಂಡ್ಯ, ಜು.1– ಜಿಲ್ಲೆಯ ದೇವಸ್ಥಾನ, ಚರ್ಚ್ ಮತ್ತು ಮಸೀದಿಗಳಲ್ಲಿ ಬಾಲ್ಯವಿವಾಹ ನಡೆಯುವುದು ಕಂಡು ಬಂದಲ್ಲಿ ನೇರವಾಗಿ ಮುಖ್ಯಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಎಚ್ಚರಿಕೆ ನೀಡಿದರು.

ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಬೆಂಗಳೂರು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜಿಲ್ಲಾ ಮತ್ತು ತಾಲೂಕು ಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳೊಂದಿಗೆ ಆಯೋಜಿಸಿದ್ದ ಬಾಲ್ಯವಿವಾಹ ಮುಕ್ತ ಜಿಲ್ಲೆ ಘೋಷಣೆ ಕುರಿತ ಸಮಾಲೋಚನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಜಾಗೃತಿ ಜಾಥಾ ಆಯೋಜಿಸಿ. ವಿದ್ಯಾರ್ಥಿನಿಯರು ಹಾಗೂ ಅವರ ಪೋಷಕರಿಂದ ಬಾಲ್ಯವಿವಾಹ ಪ್ರೋತ್ಸಾಹಿಸುವುದಿಲ್ಲ. ತಡೆಗಟ್ಟುತ್ತೇವೆ ಎಂದು ಪ್ರತಿಜ್ಞೆ ಮಾಡಿಸಿ ಎಂದು ಶಿಕ್ಷಣ ಇಲಾಖೆಗೆ ತಿಳಿಸಿದರು.

ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿನಿಯರು ಹೆಚ್ಚಾಗಿ ಬಾಲ್ಯವಿವಾಹ ಪ್ರಕರಣದಲ್ಲಿ ಪತ್ತೆಯಾಗಿದ್ದು, ಸರ್ಕಾರಿ ಪ್ರೌಢಶಾಲೆ ಪ್ರಾಂಶುಪಾಲರು ಹೆಣ್ಣುಮಕ್ಕಳ ಗೈರು ಹಾಗೂ ಸುತ್ತಮುತ್ತ ಉಂಟಾಗುವ ಬಾಲ್ಯವಿವಾಹವನ್ನು ಗಮನಿಸಬೇಕು. ತಮ್ಮ ಶಾಲಾ ವಿದ್ಯಾರ್ಥಿನಿಯರನ್ನು ಬಾಲ್ಯವಿವಾಹದಿಂದ ರಕ್ಷಿಸಲು ಕ್ರಮಕೈಗೊಳ್ಳಿ ಎಂದರು.

ವಿದ್ಯಾರ್ಥಿಗಳಿಗೆ ಶಾಲೆ, ಕುಟುಂಬ ಮತ್ತು ಸಮಾಜದಿಂದ ಉಂಟಾಗುವ ಸಮಸ್ಯೆ ಮತ್ತು ಅವರ ಅಗತ್ಯತೆಗಳನ್ನು ತಿಳಿಯಲು ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ದೂರು ಸಲಹಾ ಪೆಟ್ಟಿಗೆಯನ್ನು ಕಡ್ಡಾಯವಾಗಿ ಇರಿಸಿ ಎಂದರು.

ಹಳ್ಳಿಗಳಲ್ಲಿ ಹೆಚ್ಚಾಗಿ ಬಾಲ್ಯವಿವಾಹ ನಡೆಯುವ ಸಾಧ್ಯತೆ ಇರುವುದರಿಂದ ಗ್ರಾಮೀಣ ಮಹಿಳೆಯರಿಗೆ ಜಾಗೃತಿ ಮೂಡಿಸುವ ಸಲುವಾಗಿ ಸ್ವಸಹಾಯ ಸಂಘಗಳಲ್ಲಿ ಸಮಾವೇಶ ನಡೆಸಿ ಹಾಗೂ ಬಾಲ್ಯವಿವಾಹದ ದುಷ್ಪರಿಣಾಮ ಕುರಿತು ಒಂದು ಸಾಕ್ಷ್ಯ ಚಿತ್ರ ತಯಾರಿಸಿ ಹಳ್ಳಿಗಳಲ್ಲಿ ಪ್ರದರ್ಶಿಸಿ ಎಂದರು.

ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಆನಂದ್ ಮಾತನಾಡಿ, ಪ್ರತಿ ತಿಂಗಳು ಶಾಲೆ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ಪೋಷಕರ ಸಭೆ ನಡೆಸಿ ಬಾಲ್ಯವಿವಾಹ ಮತ್ತು ಬಾಲಕಾರ್ಮಿಕ ಪದ್ಧತಿಗಳಿಂದ ಉಂಟಾಗುವ ಪರಿಣಾಮ, ಸರ್ಕಾರದಿಂದ ವಿಧಿಸುವ ದಂಡ, ಶಿಕ್ಷೆ ಹಾಗೂ ಪೋಕ್ಸೋ ಕಾಯ್ದೆ ಕುರಿತು ಜಾಗೃತಿ ಮೂಡಿಸಿ ಎಂದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಾಮೂರ್ತಿ, ಜಿಪಂ ಉಪಕಾರ್ಯದರ್ಶಿ ಎಂ.ಬಾಬು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ ಹಾಜರಿದ್ದರು.



ಸಭೆಯಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿದರು.

ಚಿರತೆ ದಾಳಿಗೆ ಜಾನುವಾರು ಬಲಿ

ಪಾಂಡವಪುರ, ಜು.1– ಚಿರತೆ ದಾಳಿಗೆ ಹಸು, ಕರು ಹಾಗೂ 2 ಮೇಕೆಗಳು ಬಲಿಯಾಗಿರುವ ಘಟನೆ ತಾಲೂಕಿನ ದೇವೇಗೌಡನಕೊಪ್ಪಲು ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಕೃಷ್ಣೇಗೌಡ, ಚಂದ್ರಶೇಖರ್ ಅವರಿಗೆ ಸೇರಿದ ಹಸು, ಕರು ಹಾಗೂ ಮೇಕೆಗಳು ಬಲಿಯಾಗಿರುವುದು. ಸೋಮವಾರ ರಾತ್ರಿ ಕೊಟ್ಟಿಗೆಗೆ ನುಗ್ಗಿರುವ ಚಿರತೆ ಹಸು ಮತ್ತು ಕರು, ಮೇಕೆ ಕುತ್ತಿಗೆ ಹಿಡಿದು ಬಲಿ ಪಡೆದಿದೆ. ಬಳಿಕ ಕೊಟ್ಟಿಗೆಯಿಂದ ಕರುವನ್ನು ಎಳೆದೊಯ್ದಿದ್ದು, ಈ ವೇಳೆ ಹಸು, ಕರುಗಳ ಕಿರುಚಾಟ ಕೇಳಿ ಮನೆಯವರು ಹೊರ ಬರುತ್ತಿದ್ದಂತೆಯೇ ಚಿರತೆ ಸ್ಥಳದಿಂದ ಪರಾರಿಯಾಗಿದೆ. ಘಟನೆಯಿಂದ ರೈತರಾದ ಕೃಷ್ಣೇಗೌಡ ಮತ್ತು ಚಂದ್ರಶೇಖರ್ ಅವರಿಗೆ ಸಾವಿರಾರು ರೂ. ನಷ್ಟ ಉಂಟಾಗಿದ್ದು, ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಬಳಿಕ ಪಶು ಇಲಾಖೆ ಅಧಿಕಾರಿಗಳಿಂದ ಜಾನುವಾರುಗಳ ಮರಣೋತ್ತರ ಪರೀಕ್ಷೆ ನಡೆಸಿ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದರು. ಅಲ್ಲದೇ ಚಿರತೆ ಸೆರೆಗೆ ಬೋನ್ ಇಡಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿ ಕುಮಾರ್ ತಿಳಿಸಿದರು.



ಚಿರತೆ ದಾಳಿಗೆ ಹಸು ಮತ್ತು ಮೇಕೆ ಬಲಿಯಾಗಿರುವುದು

ಮಂಡ್ಯ ವಿವಿಯಲ್ಲಿ ಎಂಸಿಎ, ಎಂಬಿಎ ಕೋರ್ಸ್ ಆರಂಭ

ಮಂಡ್ಯ, ಜು.1– ಮಂಡ್ಯ ವಿಶ್ವವಿದ್ಯಾಲಯದಲ್ಲಿ 2025–26ನೇ ಶೈಕ್ಷಣಿಕ ಸಾಲಿನಿಂದ ತಾಂತ್ರಿಕ ಹಾಗೂ ನಿರ್ವಹಣಾ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ)ಯಿಂದ ಅನುಮೋದನೆ ಪಡೆದು ಎಂಸಿಎ ಮತ್ತು ಎಂಬಿಎ ಸ್ನಾತಕೋತ್ತರ ಪದವಿ ಆರಂಭಿಸಲಾಗುತ್ತಿದೆ ಎಂದು ವಿವಿಯ ಉಪ ಕುಲಪತಿ ಶಿವಚಿತ್ತಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ವಿವಿ ಯಾವುದೇ ಪದವಿಯನ್ನು ಸ್ವತಃ ಪ್ರಾರಂಭಿಸಬಹುದಾಗಿದ್ದು, ಎಐಸಿಟಿಇ (ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್) ಅನುಮೋದನೆಯೊಂದಿಗೆ ಮೈಸೂರು ವಿವಿಯ ಪರಿನಿಯಮಾವಳಿಯಂತೆ ಪ್ರಾರಂಭಿಸಲಾಗುತ್ತಿದೆ. ಜಿಲ್ಲೆಯ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಲು ಮುಂದಾಗಬೇಕು ಎಂದರು.

ಜೂ.29ರಂದು ಎಂಸಿಎ ಮತ್ತು ಎಂಬಿಎ ಪದವಿಗಳ ಆರಂಭಕ್ಕೆ ಅನುಮೋದನೆ ದೊರೆತಿದ್ದು, ಬಿಎಸ್ಸಿ ಕಂಪ್ಯೂಟರ್ ಸೈನ್ಸ್, ಎಎಸ್ಸಿ ಮಾಡಿದವರು ಎಂಸಿಎ ಪದವಿಯ ಪ್ರವೇಶ ಪಡೆಯಬಹುದಾಗಿದೆ. ಬಿ.ಕಾಂ, ಬಿಬಿಎ ಸೇರಿದಂತೆ ಯಾವುದೇ ಪದವಿ ಪಡೆದವರು ಎಂಬಿಎ ಪದವಿಗೆ ಪ್ರವೇಶಾತಿ ಪಡೆಯಬಹುದಾಗಿದೆ ಎಂದು ಹೇಳಿದರು.

ಎಂಬಿಎ ಪದವಿ ಪಡೆಯಲು ರಾಜ್ಯದವರಿಗೆ 75,000 ಹೊರ ರಾಜ್ಯದವರಿಗೆ 1,12,000 ಶುಲ್ಕವಿದ್ದು, ಎಂಸಿಎ ಪದವಿಗೆ ರಾಜ್ಯದವರೆಗೆ 49,512 ಹಾಗೂ ಹೊರ ರಾಜ್ಯದವರಿಗೆ 75,930 ಶುಲ್ಕವಿದೆ. ಎಸ್ಸಿ/ಎಸ್ಟಿ ವಿದ್ಯಾರ್ಥಿಗಳು 23,678 ರೂ. ವಿನಾಯ್ತಿ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಕುಲಸಚಿವ ಪ್ರೊ.ಯೋಗನರಸಿಂಹಚಾರಿ, ಸಿಂಡಿಕೇಟ್ ನಾಮನಿರ್ದೇಶಿತ ಸದಸ್ಯ ನಾಗರಾಜ್, ಸಿಂಡಿಕೇಟ್ ಸದಸ್ಯ ಡಾ.ಸುರೇಶ್.ಎಸ್.ಎಲ್, ಬೋಧಕರಾದ ಪ್ರೊದಿಲ್ಷಾದ್ ಬೇಗಂ, ಡಾ.ಪ್ರೇಮ್ ಸಿಂಗ್, ಉದ್ಯೋಗ ಸಂಯೋಜಕ ಗಿರೀಶ್.ಎಂ.ಸಿ ಇದ್ದರು.

ಒಂದನೇ ಪುಟದಿಂದ

ರಾಜ್ಯದ ಸಚಿವರು ಸ್ವಾರ್ಥಿಗಳು!

ಹಾಗೂ ನಾಗರಿಕ ಸಮಾಜಕ್ಕೆ ಮಂಡ್ಯದ ಗಾಂಧಿ ಎಂದೇ ಕರೆಯಲ್ಪಡುತ್ತಿದ್ದ ಮಾಜಿ ಸ್ಪೀಕರ್ ಕೃಷ್ಣ ಮಾದರಿಯಾಗಿದ್ದಾರೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಬಡ ಜನರ ಬಗ್ಗೆ ಕಾಳಜಿ ವಹಿಸದೇ ನೈತಿಕವಾಗಿ ದಿವಾಳಿತನ ಪ್ರದರ್ಶನ ಮಾಡಿ ತನ್ನತನ ಕಳೆದುಕೊಂಡಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾನು ಕಂಡಂತೆ ರಾಜಕಾರಣದಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿದವರೆಂದರೆ ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್.ಪೇಟೆ ಕೃಷ್ಣ ಹಾಗೂ ಬಿ.ಜಿ.ಬಣಕಾರ್ ಮಾತ್ರ. ತಮ್ಮ 40 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಶಾಸಕ, ಸಚಿವ, ಲೋಕಸಭಾ ಸದಸ್ಯರಾಗಿ, ರಾಜ್ಯ ವಿಧಾನಸಭಾ ಅಧ್ಯಕ್ಷರಾಗಿ ವಿವಿಧ ಹಂತಗಳಲ್ಲಿ ಕೆಲಸ ಮಾಡಿದ ಕೃಷ್ಣ ಅವರು ನುಡಿದಂತೆ ನೇರವಾಗಿ ನಡೆಯುವ ಗಾಂಧಿಗಿರಿಯನ್ನು ಮೈಗೂಡಿಸಿಕೊಂಡಿರುವ ಸರಳ ಸಜ್ಜನ ರಾಜಕಾರಣಿಯಾಗಿದ್ದಾರೆ. ಇಂದಿನ ಕಾರ್ಯಕ್ರಮದಲ್ಲಿ ಸಾವಿರಾರು ಕೃಷ್ಣ ಅವರ ಅಭಿಮಾನಿಗಳು ಭಾಗವಹಿಸಿರುವುದೇ ಈ ಕಾರ್ಯಕ್ರಮದ ಸಾರ್ಥಕತೆಯ ಪ್ರತಿಬಿಂಬವಾಗಿದೆ ಎಂದರು.

ಈ ವೇಳೆ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕಾಳೇಗೌಡ ನಾಗವಾರ, ರೈತ ಮುಖಂಡ ಎಂ.ವಿ.ರಾಜೇಗೌಡ, ಕಿಕ್ಕೇರಿಯ ಖ್ಯಾತ ವೈದ್ಯ ಡಾ.ಕೃಷ್ಣ ಹಾಗೂ ಪ್ರಗತಿಪರ ರೈತ ವಿಠಲಾಪುರ ಸುಬ್ಬೇಗೌಡ ಅವರಿಗೆ ಮಾಜಿ ಸ್ಪೀಕರ್ ಕೃಷ್ಣ ಪ್ರಶಸ್ತಿ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕೃಷ್ಣ ಪ್ರಶಸ್ತಿಯೊಂದಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕೆ.ಆರ್.ಪೇಟೆ ಪುರಸಭಾ ಅಧ್ಯಕ್ಷೆ ಪಂಕಜಾ, ಆರ್‌ಟಿಓ ಮಲ್ಲಿಕಾರ್ಜುನ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಮಾಜಿ ಸ್ಪೀಕರ್ ಕೃಷ್ಣ ಅವರ ಧರ್ಮಪತ್ನಿ ಪ್ರೊ.ಇಂದ್ರಮ್ಮ, ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಜವರಾಯಿಗೌಡ, ಪದಾಧಿಕಾರಿಗಳಾದ ವಾಸು, ಕೆ.ಟಿ.ಚಂದ್ರೇಗೌಡ, ಕೆ.ಮಂಜುಳಾ, ಬಿ. ಜವರಾಯಿಗೌಡ, ಚೆನ್ನಿಂಗೇಗೌಡ, ನಾಗರಾಜು, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಅಂ.ಚಿ.ಸಣ್ಣಸ್ವಾಮಿಗೌಡ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಇಂದಿನಿಂದ ರೈಲು ಪ್ರಯಾಣ ದುಬಾರಿ

ವರ್ಗದ ದರಗಳನ್ನು ಪ್ರತಿ ಕಿಲೋ ಮೀಟರ್‌ಗೆ 1 ಪೈಸೆ ಹೆಚ್ಚಿಸಲಾಗಿದೆ. ಆದರೆ ಎಲ್ಲಾ ಎಸಿ ಕೋಚ್‌ಗಳ ದರವನ್ನು ಕಿಲೋ ಮೀಟರ್‌ಗೆ 2 ಪೈಸೆ ಹೆಚ್ಚಳ ಏರಿಕೆ ಮಾಡಲಾಗಿದೆ.

500 ಕಿ.ಮೀ.ವರೆಗಿನ ಪ್ರಯಾಣಕ್ಕೆ ದರ ಹೆಚ್ಚಳ ಇಲ್ಲ: ದೈನಂದಿನ ಪ್ರಯಾಣಿಕರನ್ನು ಗಮನದಲ್ಲಿಟ್ಟುಕೊಂಡು ಉಪನಗರ ರೈಲುಗಳು ಮತ್ತು ಮಾಸಿಕ ಸೀಸನ್ ಟಿಕೆಟ್‌ಗಳಿಗೆ ದರ ಹೆಚ್ಚಳದಿಂದ ವಿನಾಯಿತಿ ನೀಡಲಾಗಿದೆ. 500 ಕಿ.ಮೀ.ವರೆಗಿನ ಸಾಮಾನ್ಯ ಎರಡನೇ ದರ್ಜೆಯ ಪ್ರಯಾಣದ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಆದರೆ ಈ ದೂರವನ್ನು ಮೀರಿದರೆ ಪ್ರತಿ ಕಿಲೋಮೀಟರ್‌ಗೆ ಅರ್ಧ ಪೈಸೆಯ ಸಾಧಾರಣ ಹೆಚ್ಚಳವನ್ನು ಜಾರಿಗೊಳಿಸಲಾಗಿದೆ.

ಸಾಮಾನ್ಯ ಸ್ಲೀಪರ್ ಕ್ಲಾಸ್ ಮತ್ತು ಪ್ರಥಮ ದರ್ಜೆ ಪ್ರಯಾಣಿಕರಿಗೂ ಜುಲೈ 1 ರಿಂದ ಕಿಲೋಮೀಟರ್‌ಗೆ ಅರ್ಧ ಪೈಸೆ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತಿದೆ. 500 ಕಿಮೀ ವರೆಗೆ ಹೆಚ್ಚಳವಿಲ್ಲ ಆದರೆ 5,012 ರಿಂದ 1,500 ಕಿಮೀ ದೂರಕ್ಕೆ 5 ರೂಪಾಯಿ ಹೆಚ್ಚಳ ಮತ್ತು 1,501 ರಿಂದ 2,500 ಕಿಮೀ ದೂರಕ್ಕೆ 10 ರೂಪಾಯಿ ಹೆಚ್ಚಳ ಮಾಡಲಾಗಿದೆ ಎಂದು ಸರ್ಕಾರ ಸುತ್ತೋಲೆ ಹೊರಡಿಸಿದೆ.

2,501 ರಿಂದ 3,000 ಕಿ.ಮೀ.ವರೆಗಿನ ಪ್ರಯಾಣದ ದರದಲ್ಲಿ 15 ರೂಪಾಯಿ ಹೆಚ್ಚಳ ಮತ್ತು ಸ್ಲೀಪರ್ ಕ್ಲಾಸ್ ಶುಲ್ಕದಲ್ಲಿ ಪ್ರತಿ ಕಿಲೋಮೀಟರ್‌ಗೆ 0.5 ಪೈಸೆ ಹೆಚ್ಚಳವಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಎಸಿ, ನಾನ್–ಎಸಿ ಕೋಚ್‌ಗಳ ದರ ಪಟ್ಟಿ ಇಂತಿದೆ: ಎಸಿ ಬೋಗಿ, ಎಸಿ3 ಟೈರ್ ಅಥವಾ 3–ಎಕಾನಮಿ, ಎಸಿ 2–ಟೈರ್, ಮತ್ತು ಎಸಿ ಫಸ್ಟ್/ಎಕ್ಸಿಕ್ಯೂಟಿವ್ ಕ್ಲಾಸ್ (ಅನುಭೂತಿ) ದರವನ್ನು ಪ್ರತಿ ಕಿಲೋ ಮೀಟರ್‌ಗೆ 2 ಪೈಸೆ ಹೆಚ್ಚಿಸಲಾಗಿದೆ.

ನ್ಯಾಯಯುತ ಪರಿಷ್ಕರಣೆಯು ರಾಜಧಾನಿ, ಶತಾಬ್ದಿ, ದುರಂತೋ, ವಂದೇ ಭಾರತ್, ತೇಜಸ್– ರಾಜಧಾನಿ, ಹಮ್ಸಫರ್, ಅಮೃತ್ ಭಾರತ್, ಮಹಾಮಾನ, ಗತಿಮಾನ್, ಅಂತ್ಯೋದಯ, ಜನವರಿ–ಶತಾಬಾದಿ, ಯುವ ಎಕ್ಸ್‌ಪ್ರೆಸ್, ಎಸಿ ವಿಸ್ಟಾಡೋಮ್ ಕೋಚ್‌ಗಳು, ಅನುಭೂತಿ ಕೋಚ್‌ಗಳು ಮತ್ತು ಅನುಭೂತಿ ರಹಿತ ಕೋಚ್‌ಗಳಲ್ಲಿ ಸಾಮಾನ್ಯ ರೈಲು ಸೇವೆಗಳಿಗೂ ಅನ್ವಯಿಸುತ್ತದೆ ಎಂದು ಹಿರಿಯ ರೈಲ್ವೇ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪರ ನೂರು ಶಾಸಕರಿದ್ದಾರೆ

ಉಂಟು ಮಾಡುವಂತಹ ಹೇಳಿಕೆಗಳನ್ನು ಮಾಧ್ಯಮಗಳಿಗೆ ನೀಡಿದ್ದೀರಿ. ತಮ್ಮ ಈ ಬಹಿರಂಗ ಹೇಳಿಕೆಗಳು ಪಕ್ಷಕ್ಕೆ ಮುಜುಗರ ಉಂಟು ಮಾಡುವುದಲ್ಲದೆ, ಪಕ್ಷದ ಶಿಸ್ತು ಉಲ್ಲಂಘನೆ ಆಗಿರುತ್ತದೆ. ತಮ್ಮ ಈ ಅಶಿಸ್ತಿನ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಿ, ಈ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಡಿಕೆ ಶಿವಕುಮಾರ್ ಅವರು ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷದೊಳಗೆ 'ಅಸಮಾಧಾನ' ಮತ್ತು ನಾಯಕತ್ವ ಬದಲಾವಣೆಯ ಬಗ್ಗೆ ಊಹಾಪೋಹಗಳ ನಡುವೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಒನ್ ಟು ಒನ್ ಸಭೆ ನಡೆಸುತ್ತಿರುವ ಸಮಯದಲ್ಲೇ ಇಕ್ಬಾಲ್ ಹುಸೇನ್ ಅವರು ಸಿಎಂ ಬದಲಾವಣೆ ಬಗ್ಗೆ ಹೇಳಿಕೆ ನೀಡಿದ್ದಾರೆ.

ಅಧಿಕಾರಿ ವಿಕಾಸ್‌ಕುಮಾರ್ ಅಮಾನತು ರದ್ದು

ಸಿಬ್ಬಂದಿ ಸಹ ಮನುಷ್ಯರೇ, ಅಷ್ಟೊಂದು ಜನ ದಟ್ಟಣೆ ನಿಯಂತ್ರಿಸಲು ಪೊಲೀಸರು ಮಂತ್ರವಾದಿಗಳೇನಲ್ಲ, ದೇವರಲ್ಲ, ಪೊಲೀಸರ ಬಳಿ ಅಲ್ಲಾವುದ್ದೀನ್ ಅದ್ಭುತ ದೀಪವಿಲ್ಲ, ಸೂಕ್ತ ಸಿದ್ಧತೆ ಮಾಡಿಕೊಳ್ಳಲು ಪೊಲೀಸರಿಗೆ ಸಮಯ ನೀಡಬೇಕಿತ್ತು.

ಸೂಕ್ತ ಕಾರಣಗಳಿಲ್ಲದಿದ್ದರೂ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ, ಕಾರ್ಯಕ್ರಮ ಆಯೋಜಕರಿಗೆ ಪೊಲೀಸರು ಅನುಮತಿ ನೀಡಿಲ್ಲ. ನ್ಯಾಯಪೀಠದ ಆದೇಶದ ಅನುಕೂಲವನ್ನು ಕಾಲ್ತುಳಿತ ದುರಂತದ ಹಿನ್ನೆಲೆಯಲ್ಲಿ ಅಮಾನತುಗೊಂಡ ಇತರ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೂ ಸರ್ಕಾರ ನೀಡುತ್ತದೆ ಎಂಬ ವಿಶ್ವಾಸವಿದೆ ಎಂಬುದಾಗಿ ನ್ಯಾಯಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಪೊಲೀಸ್ ಅಧಿಕಾರಿ ವಿಕಾಸ್ ಕುಮಾರ್ ಪರ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ವಾದ ಮಂಡಿಸಿದರು.

ಐಪಿಎಲ್‌ನ 2025ರ ಟ್ರೋಫಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವ ಆಚರಣೆಯನ್ನು ಆತುರಾತುರವಾಗಿ ಜೂನ್ 3ರಂದು ನಡೆಸಲು ಮುಂದಾದ ವೇಳೆ ಸಂಭವಿಸಿದ ಕಾಲ್ತುಳಿತ ದುರಂತದಲ್ಲಿ 11 ಮಂದಿ ಕ್ರೀಡಾಭಿಮಾನಿಗಳು ಪ್ರಾಣ ಕಳೆದುಕೊಂಡಿದ್ದರು.

ಪ್ರಕರಣ ಸಂಬಂಧ ಸರ್ಕಾರ ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ್, ಬೆಂಗಳೂರು ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್‌ಕುಮಾರ್ ಸೇರಿದಂತೆ ಐವರು ಪೊಲೀಸ್ ಅಧಿಕಾರಿ ಗಳನ್ನು ಅಮಾನತು ಮಾಡಿತ್ತು, ಅಲ್ಲದೆ, ಘಟನೆ ತನಿಖೆ ಹೊಣೆಯನ್ನು ಸಿಐಡಿಗೆ ವಹಿಸಿ ಸರ್ಕಾರ ಆದೇಶಿಸಿತ್ತು. ಘಟನೆ ಸಂಬಂಧ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ, ಸುನಿಲ್ ಮ್ಯಾಥ್ಯೂ, ಕಿರಣ್, ಶಮಂತ್ ಅವರನ್ನು ಬಂಧಿಸಿದ ಸಿಐಡಿ, ನ್ಯಾಯಾಲಯಕ್ಕೆ ಹಾಜರುಪಡಿಸಿ ಬಂಧಿತರ ಕಸ್ಟಡಿಗೆ ಮನವಿ ಮಾಡಿತ್ತಾದರೂ ನ್ಯಾಯಾಂಗ ಬಂಧನಕ್ಕೆ ನೀಡಿ ನ್ಯಾಯಾಲಯ ಆದೇಶಿಸಿತ್ತು

ಮೇಲ್ಮನವಿ ಸಂಬಂಧ ಸೂಕ್ತ ತೀರ್ಮಾನ ಕೈಗೊಳ್ತೇವೆ: ಸಿಎಂ

ಬೆಂಗಳೂರು, ಜು.1(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿ ವಿಕಾಸ್‌ಕುಮಾರ್ ಅಮಾನತು ಆದೇಶ ರದ್ದುಪಡಿಸಿದ ಕೇಂದ್ರ ಆಡಳಿತ ನ್ಯಾಯಮಂಡಳಿ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಅವಕಾಶವಿದ್ದು, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅದೃಷ್ಟದಿಂದ ಮುಖ್ಯಮಂತ್ರಿಯಾಗಿದ್ದಾರೆ ಎಂಬ ಶಾಸಕ ಬಿ.ಆರ್.ಪಾಟೀಲ್ ಹೇಳಿಕೆ ಬಗ್ಗೆ ಮಾಹಿತಿಯಿಲ್ಲ ಪಾಟೀಲ್ ಹಾಗೂ ನಾನು ಒಟ್ಟಿಗೆ ಶಾಸಕರಾಗಿದ್ದು, ನನಗೆ ಮುಖ್ಯ ಮಂತ್ರಿಯಾಗಲು ಅವಕಾಶ ದೊರೆತಿದ್ದರಿಂದ ಈ ರೀತಿ ಹೇಳಿರಬಹುದು ಎಂದರು. ಜಾತಿಗಣತಿ ನಡೆಸಲು ಹಲವು ವ್ಯವಸ್ಥೆ ಕಲ್ಪಿಸಲಾಗಿದೆ. ಆನ್‌ಲೈನ್‌ನಲ್ಲೂ ಜಾತಿವಿವರ ನೀಡಬಹುದು ಅಥವಾ ಮನೆಗಳಿಗೆ ಭೇಟಿ ನೀಡಿ ವಿವರ ಪಡೆಯಬಹುದು. ಗಣತಿ ನಡೆಸದೆ ಚೀಟಿ ಅಂಟಿಸಲಾಗಿದೆ ಎಂಬ ಬಗ್ಗೆ ಸತ್ಯಾಸತ್ಯತೆ ತಿಳಿದು ಪ್ರಶ್ನಿಸಬೇಕು ಎಂದರು.



ಕಾಲ್ತುಳಿತ ದುರಂತಕ್ಕೆ ಆರ್‌ಸಿಬಿ ಕಾರಣ

ಸುಮಾರು 2.5 ಲಕ್ಷ ಅಭಿಮಾನಿಗಳು ನೆರೆದಿದ್ದರು. ಆದ್ದರಿಂದ, ಸುಮಾರು ಮೂರರಿಂದ ಐದು ಲಕ್ಷ ಜನ ಸೇರಿದ ಸಭೆಯಲ್ಲಿ ಸಂಭವಿಸಿದ ಆರ್‌ಸಿಬಿ ಕಾರಣ ಎಂದು ಪ್ರಾಥಮಿಕವಾಗಿ ಕಂಡುಬರುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಇದೇ ವೇಳೆ ಆರ್‌ಸಿಬಿ ಪೊಲೀಸರಿಂದ ಸೂಕ್ತ ಅನುಮತಿ ಅಥವಾ ಒಪ್ಪಿಗೆಯನ್ನು ಪಡೆಯಲಿಲ್ಲ ಎಂದು ಸಿಎಟಿ ಗಮನಿಸಿದೆ. 'ಇದ್ದಕ್ಕಿದ್ದಂತೆ, ಅವರು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಆರ್‌ಸಿಬಿ ಪೋಸ್ಟ್ ಮಾಡಿತ್ತು. ಈ ಮಾಹಿತಿಯ ಪರಿಣಾಮವಾಗಿ ಸಾರ್ವಜನಿಕರನ್ನು ಒಟ್ಟುಗೂಡಿಸಲಾಯಿತು' ಎಂದು ಸಿಎಟಿ ತನ್ನ ಅವಲೋಕನದಲ್ಲಿ ತಿಳಿಸಿದೆ. ಆರ್‌ಸಿಬಿ ಜೂನ್ 4ರ ಬೆಳಿಗ್ಗೆ ಪೆರೇಡ್ ಮತ್ತು ಅಭಿಮಾನಿಗಳ ಕಾರ್ಯಕ್ರಮದ ಬಗ್ಗೆ ತನ್ನ ಸಾಮಾಜಿಕ ಮಾಧ್ಯಮ ಹ್ಯಾಂಡಲ್‌ಗಳಲ್ಲಿ ಪೋಸ್ಟ್ ಮಾಡಿತ್ತು ಮತ್ತು ಇಷ್ಟು ಕಡಿಮೆ ಸಮಯದಲ್ಲಿ ಇಷ್ಟು ದೊಡ್ಡ ಸಭೆಯನ್ನು ನಿರ್ವಹಿಸಲು ಪೊಲೀಸ್ ಇಲಾಖೆಗೆ ಸಾಕಷ್ಟು ಸಮಯವಿರಲಿಲ್ಲ ಎಂದು ನ್ಯಾಯಮಂಡಳಿ ಗಮನಿಸಿದೆ.

ಸರ್ಕಾರಕ್ಕೂ ತೀವ್ರ ತರಾಟೆ: ಇದೇ ವೇಳೆ ರಾಜ್ಯ ಸರ್ಕಾರವನ್ನೂ ತೀವ್ರ ತರಾಟೆಗೆ ತೆಗೆದುಕೊಂಡಿರುವ ಸಿಎಟಿ, ಸಾಕಷ್ಟು ಆಧಾರಗಳಿಲ್ಲದೆ ರಾಜ್ಯ ಸರ್ಕಾರವು ಯಾಂತ್ರಿಕವಾಗಿ ಆದೇಶ ಹೊರಡಿಸಿತ್ತು ಎಂದು ಹೇಳಿದೆ.

ಎಲ್ಲ ಅಧಿಕಾರಿಗಳ ಸ್ಥಾನ ಮರುಸ್ಥಾಪಿಸಿ: ಇದೇ ವೇಳೆ ಕೇಂದ್ರ ಆಡಳಿತ ನ್ಯಾಯಮಂಡಳಿಯ (ಸಿಎಟಿ) ಬೆಂಗಳೂರು ಪೀಠವು ಬೆಂಗಳೂರು ನಗರ ಇನ್ಸ್‌ಪೆಕ್ಟರ್ ಜನರಲ್ ಮತ್ತು ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್ ವಿಕಾಸ್ (ಪಶ್ಚಿಮ) ಅವರ ಅಮಾನತು ರದ್ದುಗೊಳಿಸಿ, ಅವರನ್ನು ತಕ್ಷಣವೇ ಮರುಸ್ಥಾಪಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಜೂನ್ 5ರ ಅಮಾನತು ಆದೇಶವನ್ನು ರದ್ದುಗೊಳಿಸಿ, ವಿಕಾಸ್ ಕುಮಾರ್ ಅವರು ಅಮಾನತನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಯನ್ನು ಅನುಮತಿಸುತ್ತಾ, ಅಮಾನತು ಅವಧಿಯನ್ನು ಪೂರ್ಣ ವೇತನ ಮತ್ತು ಭತ್ಯೆಗಳೊಂದಿಗೆ ಕರ್ತವ್ಯವೆಂದು ಪರಿಗಣಿಸಲಾಗುತ್ತದೆ ಎಂದು ಸಿಎಟಿ ಹೇಳಿದೆ.

ಸರ್ಕಾರಿ ಇಲಾಖೆಯ ಕ್ರಮದಿಂದ ನೊಂದ ನಾಗರಿಕನೊಬ್ಬ ನ್ಯಾಯಾಲಯದ ಮೊರೆ ಹೋಗಿ ತನ್ನ ಪರವಾಗಿ ಕಾನೂನು ಘೋಷಣೆ ಪಡೆದರೆ, ಅದೇ ರೀತಿಯ ಇತರರಿಗೆ ನ್ಯಾಯಾಲಯಕ್ಕೆ ಬರುವ ಅಗತ್ಯವಿಲ್ಲದೆಯೇ ಪ್ರಯೋಜನವನ್ನು ವಿಸ್ತರಿಸಬೇಕು ಎಂಬ ಕಾನೂನಿನ ಸ್ಥಿರ ತತ್ವದ ಕಡೆಗೆ ರಾಜ್ಯ ಸರ್ಕಾರದ ಗಮನ ಸೆಳೆಯುವುದು ನಮ್ಮ ಕರ್ತವ್ಯವೆಂದು ನಾವು ಭಾವಿಸುತ್ತೇವೆ. ಸರ್ಕಾರವು ಅದೇ ಆದೇಶದ ಮೂಲಕ ಅಮಾನತುಗೊಂಡ ಇತರ ಅಧಿಕಾರಿಗಳಿಗೆ ಅದೇ ಪ್ರಯೋಜನವನ್ನು ನೀಡುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ ಎಂದು ನ್ಯಾಯಮೂರ್ತಿ ಬಿ.ಕೆ. ಶ್ರೀವಾಸ್ತವ, ಸದಸ್ಯ (ನ್ಯಾಯಾಂಗ) ಮತ್ತು ಸದಸ್ಯ (ಆಡಳಿತ) ಸಂತೋಷ್ ಮೆಹ್ರಾ ಅವರನ್ನೊಳಗೊಂಡ ಪೀಠ ಹೇಳಿದೆ.

ಅಮಾನತುಗೊಳಿಸಲು ಸಾಕಷ್ಟು ಕಾರಣಗಳೇ ಇಲ್ಲ!: ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸುವ ಕ್ರಮವು ಗಣನೀಯ ಕಾರಣಗಳನ್ನೇ ಆಧರಿಸಿಲ್ಲ. ಈ ಆದೇಶ ಹೊರಡಿಸುವ ಸಮಯದಲ್ಲಿ, ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಕರ್ತವ್ಯಲೋಪ ಅಥವಾ ನಿರ್ಲಕ್ಷ್ಯವನ್ನು ತೋರಿಸಲು ಯಾವುದೇ ಮನವರಿಕೆಯಾಗುವ ಪುರಾವೆಗಳು ಇರಲಿಲ್ಲ. ಈ ಬೆಳವಣಿಗೆಗಳ ಬಗ್ಗೆ ಪೊಲೀಸರಿಗೆ ತಿಳಿದಿದ್ದರೂ ಮತ್ತು ಕ್ರಿಕೆಟ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ನಿರೀಕ್ಷೆಯಿದ್ದರೂ, ಕ್ರಮಗಳನ್ನು ತೆಗೆದುಕೊಳ್ಳಲಾಗಿಲ್ಲ ಎಂದು ಈ ಆದೇಶದಲ್ಲಿ ಹೇಳಲಾಗಿದೆ. ಈ ದಿನಾಂಕದಂದು ಚಾಲ್ತಿಯಲ್ಲಿರುವ ಸಂದರ್ಭಗಳನ್ನು ನೋಡಿದರೆ ಆದೇಶದ ಈ ಭಾಗವು ಸಮರ್ಥನೀಯವಲ್ಲ. ಬೃಹತ್ ಸಭೆಯನ್ನು ಆಯೋಜಿಸಲು ಪೊಲೀಸರು ಬೇರೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಸಿಎಟಿ ಹೇಳಿದೆ.

ಮೇಲ್ನೋಟಕ್ಕೆ, ಅಸಮ್ಮತಿ ಸೂಚಿಸಿದ ಅಮಾನತು ಆದೇಶ ಹೊರಡಿಸುವ ಸಮಯದಲ್ಲಿ, ಗಮನಾರ್ಹ ಕರ್ತವ್ಯ ಲೋಪವನ್ನು ತೋರಿಸಲು ಯಾವುದೇ ಪುರಾವೆಗಳು ಲಭ್ಯವಿರಲಿಲ್ಲ ಎಂದು ತೋರುತ್ತದೆ. ಪೊಲೀಸರು ಎಲ್ಲಾ ವ್ಯವಸ್ಥೆಗಳನ್ನು ಮಾಡಲು ಸಾಕಷ್ಟು ಸಮಯವನ್ನು ಹೊಂದಿದ್ದಾರೆ ಎಂಬ ಅಂಶವನ್ನು ತೋರಿಸಲು ಯಾವುದೇ ಪುರಾವೆಗಳು ಇರಲಿಲ್ಲ.

ಗ್ರಹಚಾರ ಚೆನ್ನಾಗಿತ್ತು, ಸಿಎಂ ಆಗ್ಬಿಟ್ಟ...!

ಕೆಲವರು ಶಾಸಕರಾಗಿದ್ದರೇ, ಇನ್ನೂ ಕೆಲವರು ಸಚಿವರಾಗಿದ್ದಾರೆ. ನಮ್ಮಲ್ಲಿ ಸಿದ್ದರಾಮಯ್ಯ ಅದೃಷ್ಟಶಾಲಿ. ಅವರು ಮುಖ್ಯಮಂತ್ರಿಯಾದರು ಎಂದು ಪಾಟೀಲ್ ಹೇಳಿದ್ದಾರೆ. ವಸತಿ ಇಲಾಖೆಯಲ್ಲಿ ಗೋಲ್‌ಮಾಲ್ ಬಗ್ಗೆ ಆಡಿಯೋ ವೈರಲ್ ಆದ ಬಳಿಕ ಅದು ನನ್ನದೇ ಆಡಿಯೋ ಎಂದು ಒಪ್ಪಿಕೊಂಡಿದ್ದರು. ಇದೀಗ ಬಿ.ಆರ್.ಪಾಟೀಲ್ ಅವರು ಒಂದೊಂದೇ ವಿಚಾರವಾಗಿ ಅಸಮಾಧಾನ ಹೊರಹಾಕುತ್ತಿದ್ದಾರೆ. ಸಚಿವರ ವಿರುದ್ಧ ಅಷ್ಟೇ ಅಲ್ಲ, ಸಿಎಂ ವಿರುದ್ಧವೂ ಬಿ.ಆರ್.ಪಾಟೀಲ್‌ಗೆ ಅಸಮಾಧಾನವಿದೆ ಎಂಬುದು ಅವರ ಮಾತಿನಿಂದ ತಿಳಿಯುತ್ತದೆ. ವಸತಿ ನಿಗಮದಲ್ಲಿ ಮನಿ ಇದ್ರೆ ಮನೆ ಎಂಬ ಆಡಿಯೋ ವಿವಾದದ ಬಳಿಕ ಇದೀಗ ಸಿಎಂ ವಿಚಾರವಾಗಿ ವಿಡಿಯೋವೊಂದು ಚರ್ಚೆಗೆ ಗ್ರಾಸವಾಗಿದೆ 'ಸಿದ್ದರಾಮಯ್ಯ ಲಕ್ಕಿ ಲಾಟರಿ ಹೊಡೆದುಬಿಟ್ಟ, ಸಿದ್ದರಾಮಯ್ಯರ ಸೋನಿಯಾ ಗಾಂಧಿ ಜೊತೆ ಭೇಟಿ ಮಾಡಿಸಿದ್ದೇ ನಾನು. ಸಿದ್ದರಾಮಯ್ಯ ಗ್ರಹಚಾರ ಚೆನ್ನಾಗಿತ್ತು ಆತ ಮುಖ್ಯಮಂತ್ರಿ ಆದ. ನನ್ನ ಗ್ರಹಚಾರ ಚೆನ್ನಾಗಿಲ್ಲ ಎಂದು ಬಿ.ಆರ್.ಪಾಟೀಲ್ ಬೇಸರ ಹೊರ ಹಾಕಿರುವುದು ಆಡಿಯೋದಲ್ಲಿದೆ

ಈಗ ಕಾಲು ಕತ್ತರಿಸಿ ಚಿರತೆ ಹತ್ಯೆ ಬೆಳಕಿಗೆ

ಮಾಡಿಸಿ, ಅರಣ್ಯ ಸಚಿವಾಲಯಕ್ಕೆ ಮಾಹಿತಿ ನೀಡಬೇಕು. ಆದರೆ, ಚಿರತೆ ಸಾವಿನ ಮಾಹಿತಿ ಸಚಿವಾಲಯಕ್ಕೆ ಮಾಹಿತಿ ಕಳುಹಿಸಿಲ್ಲ. ಇದರಿಂದ ಅಧಿಕಾರಿಗಳ ನಡೆ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಚಿರತೆ ಮೃತದೇಹದಿಂದ ನಾಲ್ಕು ಕಾಲುಗಳನ್ನು ಕತ್ತರಿಸಿಕೊಂಡು ಹೋಗಿರುವುದರಿಂದ ಬೇಟೆಗಾಗಿ ಚಿರತೆ ಹತ್ಯೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಎಪಿಸಿಸಿಎಫ್ ನೇತೃತ್ವದಲ್ಲಿ ತನಿಖೆ ನಡೆಸಿ, ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ತಪ್ಪಾಗಿದ್ದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳುವ ಶಿಫಾರಸ್ಸಿನೊಂದಿಗೆ 7 ದಿನಗಳ ಒಳಗಾಗಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ.

ಹುಲಿಗಳ ಸಾವಿನ ಬಗ್ಗೆ ವರದಿ ನೀಡಿ: ರಾಜ್ಯದ ವಿವಿಧೆಡೆ ಕಳೆದ ಐದೂವರೆ ವರ್ಷದಲ್ಲಿ 82 ಹುಲಿಗಳು ಸಾವಿಗೀಡಾಗಿವೆ ಎಂಬ ಮಾಹಿತಿ ಲಭ್ಯವಾಗಿದ್ದು, ಈ ಎಲ್ಲ ಹುಲಿಗಳ ಸಾವಿನ ಬಗ್ಗೆ ವರದಿ ಸಲ್ಲಿಸುವಂತೆ ಅರಣ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ. ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಈ ಸಂಬಂಧ ಸೂಚನೆ ನೀಡಿರುವ ಸಚಿವರು, ಸಾವನ್ನಪ್ಪಿರುವ 82 ಹುಲಿಗಳಲ್ಲಿ ಎಷ್ಟು ಹುಲಿಗಳು ಸಹಜವಾಗಿ ಸಾವನ್ನಪ್ಪಿವೆ? ಎಷ್ಟು ಹುಲಿಗಳು ಅಸಹಜವಾಗಿ ಮೃತಪಟ್ಟಿವೆ? ಅಸಹಜವಾಗಿ ಮೃತಪಟ್ಟ ಹುಲಿಗಳ ಸಾವಿಗೆ ಕಾರಣ ವೇನು? ಎಂಬ ಬಗ್ಗೆ ತನಿಖೆ ನಡೆದು ವರದಿ ಬಂದಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಮೃತಪಟ್ಟ ಯಾವುದಾದರೂ ಹುಲಿಗಳ ಅಂಗಾಂಗ ಅಂದರೆ ಉಗುರು, ಹಲ್ಲು ಇತ್ಯಾದಿ ತೆಗೆಯಲಾಗಿತ್ತೆ? ಹುಲಿಗಳ ಹತ್ಯೆ ಆಗಿದ್ದಲ್ಲಿ ನಿರ್ಲಕ್ಷ್ಯ ತೋರಿದ ಸಿಬ್ಬಂದಿ, ಅಧಿಕಾರಿಗಳ ವಿರುದ್ಧ ಕ್ರಮ ಆಗಿದೆಯೇ? ಎಷ್ಟು ಹುಲಿ ಹತ್ಯೆ ಪ್ರಕರಣ ದಲ್ಲಿ ಆರೋಪಿಗಳನ್ನು ಬಂಧಿಸಲಾ ಗಿದೆ?. ಇದುವರೆಗೆ ಹುಲಿ ಹತ್ಯೆ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗಿದೆ? ಎಷ್ಟು ಪ್ರಕರಣಗಳು ತನಿಖಾ ಹಂತದಲ್ಲಿದೆ. ಯಾವ ಕಾರಣಕ್ಕೆ ತನಿಖೆ ವಿಳಂಬವಾಗಿದೆ ಎಂಬ ಸಂಪೂರ್ಣ ವಿವರವನ್ನು 10 ದಿನಗಳ ಒಳಗಾಗಿ ತಮಗೆ ಸಲ್ಲಿಸಲು ಸೂಚಿಸಿದ್ದಾರೆ.

ಸಮಗ್ರ ತನಿಖೆಗೆ ಹೈಕೋರ್ಟ್ ಆದೇಶ

ಏಕಸದಸ್ಯ ಪೀಠ, ತೀರ್ಪು ಕಾಯ್ದಿರಿಸಿತ್ತು. ಇಂದು ತೀರ್ಪು ಪ್ರಕಟಿಸಿದ ಹೈಕೋರ್ಟ್, ವಿಶೇಷ ತನಿಖಾ ತಂಡದ ತನಿಖೆಯನ್ನು ರದ್ದುಗೊಳಿಸಿ, ಪ್ರಕರಣದ ಸಮಗ್ರ ತನಿಖೆಗೆ ನಡೆಸುವಂತೆ ಸಿಬಿಐಗೆ ಸೂಚಿಸಿದೆ. ಅಲ್ಲದೇ ಎಸ್‌ಐಟಿ ಸಂಗ್ರಹಿಸಿದ ಎಲ್ಲಾ ದಾಖಲೆಗಳನ್ನು ಸಿಬಿಐಗೆ ವರ್ಗಾಯಿಸುವಂತೆ ಆದೇಶಿಸಿದೆ.

ಇನ್ನು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು.

ಈ ಪ್ರಕರಣದಲ್ಲಿ ಹಣ ದುರುಪಯೋಗದ ಆರೋಪಗಳಿದ್ದು, ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಬ್ಯಾಂಕ್ ಮನವಿ ಮಾಡಿತ್ತು. ಆದರೆ, ಹೈಕೋರ್ಟ್ ಈ ಮನವಿಯನ್ನು ತಿರಸ್ಕರಿಸಿತ್ತು. ಈಗ ಬಿಜೆಪಿ ನಾಯಕರ ಅರ್ಜಿ ಪುರಸ್ಕರಿಸಿ ಹೈಕೋರ್ಟ್ ಪ್ರಕರಣವನ್ನು ಸಿಬಿಐಗೆ ವಹಿಸಿದ್ದು, ಮಾಜಿ ಸಚಿವ ಬಿ. ನಾಗೇಂದ್ರ ಸೇರಿದಂತೆ ಹಲವರಿಗೆ ಢವ ಢವ ಶುರುವಾಗಿದೆ.

ಏನಿದು ಪ್ರಕರಣ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆಯ ನಂತರ ಈ ಬಹುಕೋಟಿ ಹಗರಣ ಬೆಳಕಿಗೆ ಬಂದಿದೆ. ಚಂದ್ರಶೇಖರನ್ ಅವರು ಆತ್ಮಹತ್ಯೆಗೂ ಮುನ್ನ ಬರೆದಿದ್ದ ಡೆತ್‌ನೋಟ್‌ನಲ್ಲಿ ಮೂವರು ಹೆಸರು ಹಾಗೂ ಬಹುಕೋಟಿ ಹಗರಣ ನಡೆದಿರುವ ಬಗ್ಗೆ ಉಲ್ಲೇಖಿಸಿದ್ದರು.

ಈ ಬೆನ್ನಲ್ಲೇ ಬ್ಯಾಂಕ್‌ನಿಂದ 94 ಕೋಟಿ ರೂ. ಅಕ್ರಮವಾಗಿ ವರ್ಗಾವಣೆಯಾ ಗಿದೆ. ಹಣ ವರ್ಗಾವಣೆಯಾದ ಬಗ್ಗೆ ಯಾವುದೇ ಮೇಲ್, ಮೆಸೇಜ್ ಬಂದಿಲ್ಲ. ಬ್ಯಾಂಕ್ ಸಿಬ್ಬಂದಿಯಿಂದಲೇ ನಕಲಿ ದಾಖಲೆ ಸೃಷ್ಟಿಸಿ ವಂಚನೆ ಎಸಗಿದ್ದಾರೆ ಎಂದು ಆರೋಪಿಸಿ ನಿಗಮದ ಪ್ರಧಾನ ವ್ಯವಸ್ಥಾಪಕ ರಾಜಶೇಖರ್ ಅವರು ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಬ್ಯಾಂಕ್‌ನ 6 ಸಿಬ್ಬಂದಿ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬಳಿಕ ಸಚಿವ ಬಿ. ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಂತರ ಇಡಿ ಅವರನ್ನು ವಶಕ್ಕೆ ಪಡೆದು ಕೊಂಡು ಬಂಧನಕ್ಕೆ ಒಳಪಡಿಸಿತ್ತು.

ಮೈಸೂರು ಮಿತ್ರ

ಜು.5ರಿಂದ ಮೈಸೂರಲ್ಲಿ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮ

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್‌ರಿಂದ ಸಂಭ್ರಮಕ್ಕೆ ಚಾಲನೆ

● ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್, ದೀಪಾ ಭಾಸ್ತಿ ಸೇರಿ 104 ಸಾಹಿತಿಗಳು, 21 ಕಲಾವಿದರೂ ಭಾಗಿ ● ಪ್ರತಿದಿನ ಬೆಳಗ್ಗೆಯಿಂದ ಸಂಜೆವರೆಗೂ ವಿವಿಧ ಗೋಷ್ಠಿಗಳು

ಮೈಸೂರು,ಜು.1(ಜಿಎ)–ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮ ಕಾರ್ಯಕ್ರಮವವನ್ನು ಜು.5 ಮತ್ತು 6ರಂದು ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮೈಸೂರು ಸಾಹಿತ್ಯ ಸಂಭ್ರಮಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್, ದೀಪಾ ಭಸ್ತಿ ಹಾಗೂ ಪದ್ಮಶ್ರೀ ಪುರಸ್ಕೃತ, ಡಿಆರ್‌ಡಿಓ ನಿವೃತ್ತ ವಿಜ್ಞಾನಿ ಪ್ರಹ್ಲಾದ ರಾಮರಾವ್ ಭಾಗವಹಿಸಲಿದ್ದಾರೆ ಎಂದರು.

ಈ ಬಾರಿಯ ಮೈಸೂರು ಸಾಹಿತ್ಯ ಸಂಭ್ರಮಕ್ಕೆ ಎನ್‌ಡಿಟಿವಿ ಕಾರ್ಯನಿರ್ವಾಹಕ ಸಂಪಾದಕ ವಿಷ್ಣು ಸೋಮ್, ಭಾರತೀಯ ರಾಜತಾಂತ್ರಿಕ ಸೇವಕ ಮಣಿಶಂಕರ್ ಅಯ್ಯರ್, ಪತ್ರಕರ್ತೆ ಚೈತ್ರ ಸುಬ್ರಮಣ್ಯಂ, ವನ್ಯಜೀವಿ ಸಂರಕ್ಷಕ ರೊಮುಲಸ್ ವಿಟೇಕರ್, ಕಾದಂಬರಿಕಾರ ಜೀತ್ ತಾಯಿಲ್ ಹಾಗೂ ಮಹಾತ್ಮ ಗಾಂಧೀಜಿ ಅವರ ಮೊಮ್ಮಗ ಗೋಪಾಲಕೃಷ್ಣ ಗಾಂಧಿ ಸೇರಿದಂತೆ 104 ಮಂದಿ ಸಾಹಿತಿಗಳು ಭಾಗವಹಿಸಲಿದ್ದಾರೆ. 21 ಕಲಾವಿದರೂ ಪಾಲ್ಗೊಂಡು ಜನಪದ, ನೃತ್ಯ ಸೇರಿದಂತೆ ವಿವಿಧ ಪ್ರಾಕಾರಗಳನ್ನು ಪ್ರದರ್ಶಿಸಲಿದ್ದಾರೆ. ವಿಶೇಷವಾಗಿ ದೆಹಲಿಯ ಖ್ಯಾತ ಛಾಯಾಗ್ರಾಹಕ ತಜ್ಞರಾದ ಮಲ್ಲಿಕ್ ಆಗಮಿಸಲಿದ್ದಾರೆ. ಗೋಷ್ಠಿಗಳು ಬೆಳಗ್ಗೆ 10.30ರಿಂದ ಸಂಜೆ 6.30ರವರೆಗೆ ನಡೆಯಲಿವೆ ಎಂದು ತಿಳಿಸಿದರು.

ಜು.5, ಇಂಗ್ಲಿಷ್ ಗೋಷ್ಠಿಗಳು: ಉದ್ಘಾಟನಾ ಕಾರ್ಯಕ್ರಮದ ನಂತರ 10.30ರಿಂದ 12ರವರೆಗೆ 'ಲೈಟ್ ದಿ ವೇ: ಕನ್ನಡ, ಹುಮನ್ ಅಂಡ್ ದಿ ಬೂಕರ್ಸ್ ಇಂಟರ್‌ನ್ಯಾಷನಲ್ ಸ್ಟೇಜ್' ವಿಷಯ ಕುರಿತ ವಿಶೇಷ ಸಂವಾದದಲ್ಲಿ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್, ದೀಪಾ ಭಸ್ತಿ ಭಾಗವಹಿಸಲಿದ್ದಾರೆ. ಸಂವಾದವನ್ನು ಭರತ್ ದಿವಾಕರ್ ನಡೆಸಿಕೊಡಲಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾಟರಿಟೆಬಲ್ ಟ್ರಸ್ಟ್ ವತಿಯಿಂದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಈ ವೇಳೆ (ಎಡದಿಂದ) ಟ್ರಸ್ಟಿ ಕಿಟ್ಟಿ ಮಂದಣ್ಣ, ಕಾರ್ಯದರ್ಶಿ ತಂಗಮ್ ಪಣಕಲ್, ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಉಪಾಧ್ಯಕ್ಷ ಸ್ಯಾಮ್ ಚೆರಿಯನ್, ಟ್ರಸ್ಟಿ ಸಿ.ಆರ್.ಹನುಮಂತ್ ಅವರನ್ನು ಚಿತ್ರದಲ್ಲಿ ಕಾಣಬಹುದು.

12 ಗಂಟೆಯಿಂದ 12.45ರವರೆಗೆ 'ಎ ನೇಮ್ ಇನ್‌ಇರಿಟೇಡ್ ಎ ವಾಯ್ಸ್ ಎರನ್ಸ್‌ಡ್: ವಾಕಿಂಗ್ ದಿ ಡೆಲಿಗೇಟ್ ಪಾಥ್ ಬಿಟ್ವೀನ್ ಲೆಗಸಿ ಅಂಡ್ ಸೇಲ್ಫ್' ಕುರಿತು ಗೋಪಾಲಕೃಷ್ಣ ಗಾಂಧಿ ಹಾಗೂ ಚಿರಾಗ್ ಟಕ್ಕರ್ ಮಾತನಾಡಲಿದ್ದಾರೆ. 12.45ರಿಂದ 1.30ರವರೆಗೆ ಟ್ರಾನ್ಸ್‌ಎಡಿಂಗ್ ದಿ ಬ್ಯಾರಿಯರ್ಸ್ ಡೈಲ್ಯಾಕ್ಟ್ ಅಂಡ್ ರೀಚಿಂಗ್ ಔಟ್ ಟು ದಿ ವರ್ಲ್ಡ್' ಕುರಿತು ರಂಜಿತ್ ಹೊಸಕೋಟೆ, ಆರುಂಧತಿ ನಾಥ ಅವರು ಪಾಲ್ಗೊಳ್ಳಲಿದ್ದಾರೆ. ದೀಪ್ತಿ ನವರತ್ನ ನಡೆಸಿಕೊಡಲಿದ್ದಾರೆ. 1.30ರಿಂದ 2 ಗಂಟೆವರೆಗೆ 'ಬ್ಯೂಟಿ ಅಂಡ್ ಬ್ರೂಟಲ್ಟಿ: ವೇರ್ ಲಿಟರರಿ ಫಿಕ್ಷನ್ ಮೀಟ್ಸ್ ನಾಯ್ರ್' ಕುರಿತು ಅನಿತ ನಾಯರ್ ಮತ್ತು ಮಾರ್ಕ್ ಅಬೂಟ್ ಚರ್ಚಿಸಲಿದ್ದಾರೆ.

2 ಗಂಟೆಯಿಂದ 2.45ರವರೆಗೆ 'ಕನ್ಸ್‌ವೇಷನ್ ಆಫ್ ನೇಚರ್ : ದಿ ವೈಲ್ಡ್ ಫೇಡ್, ದಿ ಪಾಯ್ಸನ್ ಸ್ಟೇ' ಕುರಿತು ರೊಮುಲಸ್ ವಿಟೇಕರ್, ಇಶಾನ್ ಶಾನ್‌ವಾಸ್ ಸಂವಾದ ಮಾಡಲಿದ್ದಾರೆ. ಜಾನಕಿ ಲೆನಿನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. 2.45ರಿಂದ 3.45ರವರೆಗೆ 'ವರ್ಕಿಂಗ್ ಬಿಹೈಂಡ್ ದಿ ಕವರ್ ಸ್ಪಾಟಿಂಗ್ ಸೆಲೆಕ್ಟಿಂಗ್ ಅಂಡ್ ಸೇಲಿಂಗ್ ಬುಕ್ಸ್' ಕುರಿತು ಮೀಥಾ ಕಪೂರ್, ಅನಿತ ನಾಯರ್, ಚಿರಾಗ್ ಥಕರ್ ಅವರೊಟ್ಟಿಗೆ ಕನಿಷ್ಕ ಗುಪ್ತ ಸಂವಾದದಲ್ಲಿ ಇರಲಿದ್ದಾರೆ. 3.45ರಿಂದ 4.30ರವರೆಗೆ ' ಬ್ಯಾಟಲ್ಸ್ ಅಂಡ್ ಬ್ಲೇಡ್ ಪಾಥ್ ಆಫ್ ಯೋರ್ ಮಿಸ್ಟಿಕಲ್ ಮ್ಯಾಜಿಕಲ್ ಆ ಹಿಸ್ಟಾರಿಕಲ್ ಫಿಕ್ಷನ್ಸ್' ಕುರಿತು ಅನಿರುದ್ಧ್ ಕನಿಸಿಟಿ ಮತ್ತು ಅರುಣ್ ಕೃಷ್ಣನ್ ಚರ್ಚಿಸಲಿದ್ದಾರೆ. 4.30ರಿಂದ 5.15ರವರೆಗೆ ಭಗವಾನ್ ಸೌಮ್ಯ ಮತ್ತು ಮೈಥಲಿರಾವ್ ಅವರು 'ಗ್ಲಾಮರ್, ಗಾಸಿಪ್ ಅಂಡ್ ಗೋಸ್ಟ್ಲೀ ಟ್ರುತ್ಸ್ ಗೋಲ್ಡನ್ ಸ್ಟೋರೀಸ್ ಫ್ರಮ್ ಸಿಲ್ವರ್ ಸ್ಕ್ರೀನ್' ಬಗ್ಗೆ ಮಾತನಾಡಲಿದ್ದಾರೆ. 5.15ರಿಂದ 6.15ರವರೆಗೆ 'ಆಪರೇಷನ್ ಸಿಂಧೂರ್ ಅಂಡ್ ದಿ ಎಸ್ಕ್‌ಲೇಶನ್ ಮ್ಯಾಟ್ರಿಕ್ಸ್ ಹೌ ಕ್ಲೋಸ್ ವರ್ ಇಂಡಿಯಾ ಅಂಡ್ ಪಾಕಿಸ್ತಾನ ಟು ಫುಲ್ ಬ್ಲೌನ್ ವಾರ್' ವಿಷ್ಣು ಸೋಮ್ ಮತ್ತು ಶಿವ್ ಅರೂರ್ ಚರ್ಚಿಸಲಿದ್ದಾರೆ ಎಂದು ವಿವರಿಸಿದರು.

ಕನ್ನಡ ಗೋಷ್ಠಿಗಳು: ಜು.5ರಂದು ಮಧ್ಯಾಹ್ನ 1 ಗಂಟೆಯಿಂದ 1.30ರವರೆಗೆ ಅರಿವು ಶಾಲೆ ಶಿಕ್ಷಕರು ಮತ್ತು ಪೋಷಕರಿಂದ ವಿವಿಧ ಭಾಷೆಯ ಜನಪದ ಹಾಡು ಮತ್ತು ನೃತ್ಯ ಪ್ರದರ್ಶನ ನೀಡಲಿದ್ದಾರೆ. ನಂತರ 1.30ರಿಂದ 2.15ರವರೆಗೆ 'ಸುಗಮ ಸಂಗೀತ ಹಾಗೂ ಸಾಹಿತ್ಯ ಕಲರವ' ಕುರಿತು ಡಾ.ಹೆಚ್.ಆರ್.ಲೀಲಾವತಿ, ಬಿ.ಕೆ.ಮೀನಾಕ್ಷಿ, ಕುಸುಮಾ ಮೂರ್ತಿ ಶಾಂತಲಾ ಚಂದ್ರಮೌಳಿ ರೆಡ್ಡಿ ಸಂವಾದ ನಡೆಯಲಿದೆ. 2.15ರಿಂದ 3 ಗಂಟೆವರೆಗೆ ಕಲ್ಲಚ್ಚು ಮಹೇಶ್ ಆರ್.ನಾಯಕ್, ಕಿರಣ್ ಭಟ್, ಎಂ.ಡಿ.ಗುರು ಮತ್ತು ಸುಚಿತ್ರ ಹೆಗಡೆ ಅವರು ' ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಯುಗದಲ್ಲಿ ಕವಿತೆಗಳ ಪ್ರಸ್ತುತತೆ' ಬಗ್ಗೆ ಚರ್ಚಿಸಲಿದ್ದಾರೆ. 3 ಗಂಟೆಯಿಂದ 3.45ರವರೆಗೆ 'ಸುದ್ದಿಮನೆಯ ಒತ್ತಡಗಳು ಮತ್ತು ಕಾನೂನು ಪ್ರಜ್ಞೆ' ಕುರಿತು ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ್, ಅಂಜಲಿ ರಾಮಣ್ಣ, ಟಿ.ಆರ್.ಸತೀಶ್‌ಕುಮಾರ್ ಮತ್ತು ಪ್ರೀತಿ ನಾಗರಾಜ್ ಸಂವಾದ ಮಾಡಲಿದ್ದಾರೆ. 'ಹೊಸ ಚಿಗುರು–ಹಳೇಬೇರು: ತಾತ್ವಿಕ ಮತ್ತು ಸಾಂಸ್ಕೃತಿಕ ಬೇರುಗಳಿಂದಲೇ ನವ ಪೀಳಿಗೆಯನ್ನು ಸಕ್ರಿಯಗೊಳಿಸುವ ಅನುಸಂಧಾನ' ಬಗ್ಗೆ 3.45ರಿಂದ 4.30ರವರೆಗೆ ಗೋಷ್ಠಿ ನಡೆಯಲಿದ್ದು, ಲಕ್ಷೀಶ ತೋಳ್ಪಾಡಿ ಮತ್ತು ಸಿಂಧುರಾವ್ ಭಾಗವಹಿಸಲಿದ್ದಾರೆ. 4.30ರಿಂದ 4.45ರವರೆಗೆ ಡಾ.ಅಮ್ಮಸಂದ್ರ ಸುರೇಶ್, ಜಯಲಕ್ಷ್ಮೀ ಮತ್ತು ಶೋಭರಾಣಿ ಅವರು 'ಸದೃಢ, ಸುಸ್ಥಿರ ಸಮಾಜದಲ್ಲಿ ಸಮಾನತೆ ಮತ್ತು ಮಹಿಳಾ ಸಬಲೀಕರಣಗಳನ್ನು ಸಾಧಿಸುವಲ್ಲಿ ಮಾಧ್ಯಮಗಳ ಪಾತ್ರ' ವಿಷಯ ಬಗ್ಗೆ ಮಾತನಾಡಲಿದ್ದಾರೆ. ಮೊದಲ ದಿನದ ಅಂತ್ಯದಲ್ಲಿ 4.45ರಿಂದ 5.15ರವರೆಗೆ 'ತುಳು ಕೊಡವ ಅರೆ ಭಾಷೆ ಕವಿತೆಗಳ ಸಮ್ಮಿಲನ' ಬಗ್ಗೆ ಚರ್ಚೆ ನಡೆಯಲಿದ್ದು, ತುಳಸಿ ಮೋಹನ್, ಅಕ್ಷತಾ ರಾಜ್, ವಿವೇಕ್ ಅಯ್ಯಪ್ಪ ಮತ್ತು ಅಬ್ದುಲ್ ರಷೀದ್ ಭಾಗವಹಿಸಲಿದ್ದಾರೆ.

ಜು.6ರಂದು ಕನ್ನಡ ಗೋಷ್ಠಿಗಳು: ಗಾರ್ಡೇನಿಯಾ ವೇದಿಕೆಯಲ್ಲಿ 9.15ರಿಂದ 9.50ರವರೆಗೆ 'ಅಡವಿ ಜೀವಿಗಳ ಬೆಡಗು, ಛಾಯಾಚಿತ್ರಗಳ ಸೆರೆಯಲ್ಲಿ ಪತ್ರಿಕೋದ್ಯಮ, ಶಿಕ್ಷಣ, ಪರಿಸರ ಪ್ರೇಮ, ಚಿತ್ರಣ ಅಪೂರ್ವ ಬದುಕು' ಕುರಿತು ಲೋಕೇಶ್ ಮೊಸಳೆ ಮಾತನಾಡಲಿದ್ದಾರೆ. 10ಗಂಟೆಯಿಂದ 10.45ರವರೆಗೆ ಚಲನಚಿತ್ರ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಮತ್ತು ಪ್ರೊ.ಸಿ.ನಾಗಣ್ಣ 'ಸಾಹಿತ್ಯ–ಸಿನಿಮಾ–ಹಳ್ಳಿ ಹಂಬಲದ ತೆಕ್ಕೆಯಲ್ಲಿ' ವಿಷಯದ ಬಗ್ಗೆ ಸಂವಾದ ನಡೆಸಲಿದ್ದಾರೆ. 10.45ರಿಂದ 11.30ರವರೆಗೆ 'ಮದುಮಗಳ ಇಂಗ್ಲಿಷ್ ಪಯಣ' ಕುರಿತು ವನಮಾಲ ವಿಶ್ವನಾಥ್ ಮಾತನಾಡಲಿದ್ದಾರೆ. 11.30ರಿಂದ 12ರವರೆಗೆ ರೇವತಿ ಕಾಮತ್ ಅವರು 'ಪುಷ್ಪಗಳಿಂದ ಪ್ರಾರಂಭವಾಗಿ ಪ್ರತಿಷ್ಠಿತ ಉದ್ಯಮದತ್ತ ಮೇಲೇರಿದ ಸ್ಫೂರ್ತಿ ಕಥನ, ಬೆಳೆದು ಬೆಳಸಿ ಬದುಕುವ ಬಗೆ' ಮಾತನಾಡುವರು. 12 ಗಂಟೆಯಿಂದ 12.15ರವರೆಗೆ ಕವಿ ಬಳೆ ಅವರು ಅನುವಾದಗೊಳಿಸಿರುವ 'ಚಂದಿರನಿಲ್ಲದ ಇರುಳುಗಳು' ಕರ್ನಾಟ ಸಾಮ್ರಾಜ್ಯ ಕಾಲದ ರೋಚಕ ಕಥನದ ಕೃತಿ ಬಿಡುಗಡೆಗೊಳ್ಳಲಿದೆ ಎಂದರು.

12.15ರಿಂದ 1ರವರೆಗೆ 'ಕೃಷಿ ವಿಜ್ಞಾನದಿಂದ ಚಾರಿತ್ರಿಕ ಕಾದಂಬರಿಗಳೆಡೆಗೆ ಪಯಣ ಇತಿಹಾಸದ ಗರ್ಭದಿಂದ ಆರಿಸಿದ ಅಮೂಲ್ಯ ನಿಧಿರತ್ನಗಳು' ವಿಷಯ ಕುರಿತು ಡಾ.ಕೆ.ಎನ್.ಗಣೇಶಯ್ಯ ಮತ್ತು ಕೊಳ್ಳೇಗಾಲ ಶರ್ಮ ಚರ್ಚಿಸಲಿದ್ದಾರೆ. 1 ಗಂಟೆಯಿಂದ 2 ಗಂಟೆವರೆಗೆ ವಿದ್ಯ ರಶ್ಮಿಪೆಲ್ಲತ್ತಡ್ಕ, ಮಹಂತೇಶ ಪಾಟೀಲ, ಎಂ.ಜವರಾಜ್, ಭರತ್ ದಿವಾಕರ್, ಡಾ.ಮಧು ಬಿರಾದರ, ಚೈತ್ರ ಶಿವಯೋಗಿ ಮಠ ಅವರು 'ಮನದ ಭಾವಗಳಿಗೆ ಪದಗಳಿಂದ ರಂಗು ತುಂಬಿ ಚೆಲ್ಲುವ ಕವಿತೆಗಳು' ವಿಷಯ ಕುರಿತು ಮಾತನಾಡಲಿದ್ದಾರೆ.

2 ಗಂಟೆಯಿಂದ 2.45ರವರೆಗೆ 'ಕನ್ನಡ ಸಾಹಿತ್ಯಕ್ಕೆ ಸದ್ದಿಲ್ಲದ ಸಾಹಸಮಯ ಸಹಕಾರ ನೀಡುವ ಪ್ರಕಾಶಕರು ಮತ್ತು ಸವಾಲುಗಳು' ವಿಷಯದ ಕುರಿತು ಗಣೇಶ್ ಅಮೀನಗಡ, ಡಿ.ಎನ್.ಲೋಕಪ್ಪ, ನಟರಾಜ್ ಚೌದರು, ವೀರಕಪುತ್ರ ಶ್ರೀನಿವಾಸ್, ಪ್ರೊ.ಬಿ.ಎನ್.ಶ್ರೀರಾಮ ಚರ್ಚಿಸಲಿದ್ದಾರೆ.



ಪ್ರಮೋದಾದೇವಿ ಒಡೆಯರ್ ಬಾನು ಮುಸ್ತಾಕ್ ದೀಪಾ ಭಾಸ್ತಿ ಪ್ರಹ್ಲಾದ ರಾಮರಾವ್



ವಿಷ್ಣು ಸೋಮ್ ಮಣಿಶಂಕರ್ ಅಯ್ಯರ್ ಚಿತ್ರ ಸುಬ್ರಮಣಿಯನ್ ರೊಮುಲಸ್ ವಿಟೇಕರ್ ಜೀಟ್ ತಾಯಿಲ್

ಪ್ರೊ.ಕೃಷ್ಣೇಗೌಡ 2.45ರಿಂದ 3.30ರವರೆಗೆ 'ಭಾಷೆಯೆಂಬ ಸೋಜಿಗ' ಬಗ್ಗೆ ಮಾತನಾಡಲಿದ್ದಾರೆ. 3.30ರಿಂದ 4.15ರವರೆಗೆ 'ಸಂಗಮ ರಾಜಲಕ್ಷ್ಮಿ ಎನ್.ರಾವ್ ಅವರ ವಿಸ್ಮಯ ಕಥಾಲೋಕ' ಕುರಿತು ಚಂದನ್ ಗೌಡ, ಮನು ಚಕ್ರವರ್ತಿ, ರಾಜಲಕ್ಷ್ಮಿ ಎನ್.ರಾವ್, ವನಮಾಲ ವಿಶ್ವನಾಥ ಮತ್ತು ಅಬ್ದುಲ್ ರಶೀದ್ ಸಂವಾದ ನಡೆಸಲಿದ್ದಾರೆ. 4.15ರಿಂದ 5.15ರವರೆಗೆ ಜೋಗಿ, ನಾಗರಾಜ ವಸ್ತಾರೆ, ಹೆಚ್.ಬಿ.ಇಂದ್ರಕುಮಾರ್ ಅವರು 'ಕಥೆ ಹುಟ್ಟುವ ಹೊತ್ತು' ವಿಷಯದ ಬಗ್ಗೆ ಮಾತನಾಡುವರು. ಮೈಸೂರು ಸಾಹಿತ್ಯ ಸಂಭ್ರಮ ಕನ್ನಡ ಗೋಷ್ಠಿಗಳಲ್ಲಿ ಕಡೆಯದಾಗಿ 5.15ರಿಂದ 6.15ರವರೆಗೆ 'ಸಿನಿಮಾರಂಗದ ಕಷ್ಟನಷ್ಟಗಳ ಕಾರ್ಮೋಡ ನಡುವೆ ಬೆಳ್ಳಿತೆರೆಯಲ್ಲಿ ಮಿಂಚುವ ಸವಾಲುಗಳು' ವಿಷಯದ ಬಗ್ಗೆ ನಟಿ ಸುಧಾ ಬೆಳವಾಡಿ, ನಟರಾದ ಬಾಲರಾಜ್ವಾಡಿ, ಶಂಕರ್ ಅಶ್ವಥ್ ಮತ್ತು ಧರ್ಮೇಂದ್ರಕುಮಾರ್ ಚರ್ಚಿಸಲಿದ್ದಾರೆ ಎಂದು ವಿವರಿಸಿದರು.

ಜು.6ರಂದು ಇಂಗ್ಲಿಷ್ ಗೋಷ್ಠಿಗಳು: ಬೆಳಗ್ಗೆ 10ಗಂಟೆಯಿಂದ 10.45ರವರೆಗೆ 'ಡೆಕಡೆಸ್ ಆಫ್ ಡಿಪ್ಲೊಮಸಿ, ಡೆಮಾಕ್ರಸಿ ಅಂಡ್ ಪೊಲಿಟಿಕಲ್ ಡೆವೆಲೋಪ್ಮೆಂಟ್ಸ್' ಕುರಿತು ಮಣಿಶಂಕರ್ ಅಯ್ಯರ್ ಮತ್ತು ಅರೋನ್ ರಾಮನ್ ಮಾತನಾಡಲಿದ್ದಾರೆ. 10.45ರಿಂದ 12ರವರೆಗೆ ಇಸ್ಕಾನ್ ಸಂಸ್ಥಾಪಕ ಶ್ರೀಲಾ ಪ್ರಭುಪಾದ ಕುರಿತು 'ಸಿಂಗ್, ಡಾನ್ಸ್ ಅಂಡ್ ಲೀಡ್' ಕೃತಿ ಬಿಡುಗಡೆಯಾಗಲಿದ್ದು, ಈ ವೇಳೆ ಹಿಂದೋಳ್ ಸೇನುಗುಪ್ತಾ, ದೀಪ್ತಿ ನವರತ್ನ ಅವರು 'ಭಾರತದ ಮಾರುಕಟ್ಟೆ ಮತ್ತು ಆಧುನಿಕ ಭಾರತದ' ಕುರಿತು ಮಾತನಾಡಲಿದ್ದಾರೆ. 12 ಗಂಟೆಯಿಂದ 12.45ರವರೆಗೆ 'ಮೌಲ್ಡಿಂಗ್ ಮಿನಿಂಗ್ಸ್ ಇಂಟು ಮೆಲೋಡೀಸ್ ಅಂಡ್ ರಿಥ್ಮ್ಸ್ ಇಂಟು ರೈಟಿಂಗ್ಸ್' ಬಗ್ಗೆ ಜೀತ್ ತಾಯಿಲ್ ಮತ್ತು ರಂಜಿತ್ ಹೊಸಕೋಟೆ ಚರ್ಚಿಸಲಿದ್ದಾರೆ. ನಂತರ 'ಫಾರ್ ದಿ ಫಾರೆಸ್ಟ್ ವಿಥ್ ಬರ್ಕ್ ಅಂಡ್ ಬರ್ಥ್' ಕುರಿತು 12.15ರಿಂದ 1.30ರವರೆಗೆ ಸ್ಟೀಫನ್ ಆಲ್ಟರ್, ಸುಶೀಲ್ ಗ್ಯಾಂಬಾ ಬ್ ನಡುವೆ ಸಂವಾದ ನಡೆಯಲಿದ್ದು, ಪ್ರಿಯ ದಾವೀದರ ನಡೆಸಿಕೊಡಲಿದ್ದಾರೆ. 1.30ರಿಂದ 2 ಗಂಟೆವರೆಗೆ 'ಆಯುರ್ವೇದ ಅಂಡ್ ಹೌರ ಇನ್ನರ್ ವೆಲ್ನೆಸ್ ಎಂವೆಲೊಪ್ಡ್ ಇನ್ ಎಸ್ಸಷನಲ್ ಡಿಸೈನರ್ ಡೀಟೇಲ್ಸ್' ಬಗ್ಗೆ ಸುಜಾತ ಕೇಲ್ಕರ್ ಶೆಟ್ಟಿ ಮತ್ತು ಅನು ನಾಗಪ್ಪ ಚರ್ಚಿಸಲಿದ್ದಾರೆ.

2 ಗಂಟೆಯಿಂದ 2.30ರವರೆಗೆ 'ಬೊಫೋರ್ಸ್ ಬಚ್ಚನ್ ಅಂಡ್ ಬೀಟ್ಸ್ ಹೌ ಎ ಲೋನೆ ಜರ್ನಲಿಸ್ಟ್ ಬ್ರೌಗ್ಟ್ ಡೌನ್ ಎ ಗೋವೆರ್ಮೆಂಟ್' ಕುರಿತು ಚೈತ್ರ ಸುಬ್ರಮಣ್ಯಂ ಹಾಗೂ ವಸಂತಿ ಹರಿಪ್ರಕಾಶ್ ಮಾತನಾಡಲಿದ್ದಾರೆ. 2.30ರಿಂದ 3.15ವರೆಗೆ ಅನಿಶ್ ಲಾವನಿ, ದಿವ್ಯತಾ ರಾಜಾರಮ್, ಶಾಲಿನಿ ಪಿ.ಸಾಹುಕಾರ್ ಅವರು 'ಸೋಶಿಯಲ್ ರಿಲವೆನ್ಸ್ ಎ ರೈಟಿಂಗ್ ಇನ್ ಟೈಮ್ಸ್ ಆಫ್ ಟೆಡ್ ಟಾಕ್ಸ್, ರೀಲ್ಸ್, ಬ್ಲಾಗ್ ಅಂಡ್ ಜೆನೆರೇಟೆಡ್ ಥ್ರಿಲ್ಲರ್ ಕಾಂಟೆಟ್' ಕುರಿತು ಚರ್ಚಿಸಲಿದ್ದಾರೆ. ಭಾರತಿ ಘನಶ್ಯಾಂ ನಡೆಸಿಕೊಡಲಿದ್ದಾರೆ.

3.15ರಿಂದ 4 ಗಂಟೆವರೆಗೂ 'ದಿ ಜುವೆಲ್ ಸಿಟೀಸ್ ಆಫ್ ಡೆಕ್ಕನ್ ವಿಥ್ ಥೇನ್ರ್ ಸ್ಪಾರ್ಕ್ಲಿಂಗ್ ಲೆಗಾಸಿಸ್ ಆಫ್ ಆರ್ಟ್, ಮ್ಯೂಸಿಕ್ ಅಂಡ್ ಹಿಸ್ಟರಿ' ಬಗ್ಗೆ ಆರ್.ಜಿ.ಸಿಂಗ್, ಸುರೇಶ್ ಜಯರಾಮ್, ಮೌಪಿಯಾ ಬಸು ಮಾತನಾಡಲಿದ್ದಾರೆ. ಪ್ರೀತಿ ನಾಗರಾಜ್ ನಿರ್ವಹಣೆ ಮಾಡಲಿದ್ದಾರೆ. 4ರಿಂದ 4.30ರವರೆಗೆ ಅರುಂಧತಿ ಘೋಶ್ ಮತ್ತು ಅನಿಶಾ ಲಾವಣಿ ಅವರು 'ದಿ ವರ್ಕ್ ಬಿಹಿಂಡ್ ದಿ ವರ್ಕ್ ಬಿಲ್ಡಿಂಗ್ ಕಲ್ಚರ್ ವಿಥ್ ಕೇರ್' ಕುರಿತು ಚರ್ಚಿಸಲಿದ್ದಾರೆ. 4.30ರಿಂದ 5.15ರವರೆಗೆ 'ಎ ವಾಯ್ಸ್ ಲೈಕ್ ಅರ್ಥ್ ಎ ಸ್ಪಿರಿಟ್ ಲೈಕ್ ಫ್ಲೇಮ್' ಇಳಾ ಅರುಣ್, ಅಂಜುಳ ಬೇಡಿ ಅವರು ಮಾತನಾಡಲಿದ್ದಾರೆ. ಈ ವೇಳೆ ರೀನಾ ಪೆರೆಯಿರ ಗೋಷ್ಠಿ ನಡೆಸಿಕೊಡಲಿದ್ದಾರೆ. ಅಂತಿಮ ದಿನದ ಅಂತಿಮ ಗೋಷ್ಠಿಯಾದ 'ಅನ್‌ಸ್ಟಾಪಬಲ್ ಬ್ರೇಕಿಂಗ್ ಲಿಮಿಟ್ಸ್ ಬಿಲ್ಡಿಂಗ್ಸ್ ಡ್ರೀಮ್ಸ್' ಬಗ್ಗೆ 5.15ರಿಂದ 6 ಗಂಟೆವರೆಗೆ ಡಾ.ದೀಪಾ ಮಲ್ಲಿಕ್ ಮತ್ತು ಡಾ.ಉಷಾ ಹೆಗಡೆ ಚರ್ಚಿಸಲಿದ್ದಾರೆ ಎಂದು ವಿವರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟಿಗಳಾದ ಕಿಟ್ಟಿ ಮಂದಣ್ಣ, ಸಿ.ಆರ್.ಹನುಮಂತ್, ಕಾರ್ಯದರ್ಶಿ ತಂಗಮ್ ಪಣಕಲ್, ಉಪಾಧ್ಯಕ್ಷ ಸ್ಯಾಮ್ ಚೆರಿಯನ್ ಉಪಸ್ಥಿತರಿದ್ದರು.

ನಾಡಪ್ರಭು ಕೆಂಪೇಗೌಡರ ಜಯಂತಿ



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ನಾಡಪ್ರಭು ಕೆಂಪೇಗೌಡ ಅವರ 516ನೇ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎನ್.ಯೋಗಾನಂದ, ಜಿ.ನಿರಂಜನ್, ಆರ್.ಸೋಮಣ್ಣ, ಕೆ.ಗಿರೀಶ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಎಂ.ಪ್ರಮೀಳ, ಸಹಾಯಕ ಕಾರ್ಯದರ್ಶಿ ಶ್ರೀಮತಿ ಎಸ್.ಗಾಯಿತ್ರಿ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು



ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಬ್ಯಾಂಕಿನ ಅಧ್ಯಕ್ಷ ಡಾ.ಎಂ.ಬಿ.ಮಂಜೇಗೌಡ, ಉಪಾಧ್ಯಕ್ಷ ಡಾ.ಎಸ್.ಆನಂದ, ನಿರ್ದೇಶಕರಾದ ಹನುಮಂತ, ಎಂ.ಬಿ.ಯೋಗಾನಂದ, ಮುತ್ತುಕುಮಾರ್, ಚಂದ್ರಶೇಖರ, ಯತಿರಾಜು, ರಾಮನಾದನ್, ಮಂಜುನಾಥ, ಶಿವಶಂಕರ್, ಉತ್ತೇಜ್, ಶ್ರೀಮತಿ ಶ್ವೇತಾ, ಶ್ರೀಮತಿ ನಿರ್ಮಲ, ಚಂದ್ರಶೇಖರ್, ನಂದಕುಮಾರ್, ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗ ಈ ವೇಳೆ ಉಪಸ್ಥಿತರಿದ್ದರು.

ಕೀಟ ಸಂಗ್ರಹಕಾರರ ಹುದ್ದೆಗೆ ಗುತ್ತಿಗೆ ಆಧಾರದ ನೇಮಕಕ್ಕೆ ನೇರ ಸಂದರ್ಶನ

ಮೈಸೂರು: ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಚೇರಿ ಡಿವಿಬಿಡಿಸಿಒ, ಕಚೇರಿ, ಮೈಸೂರು ಕಾರ್ಯಕ್ರಮದಡಿಯಲ್ಲಿ 2025–26ನೇ ಸಾಲಿಗೆ ಕೀಟ ಸಂಗ್ರಹಕಾರರು ಒಂದು ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇರ ನೇಮಕಾತಿಗೆ ಜು.7ರಂದು ಬೆಳಗ್ಗೆ 10.30 ಗಂಟೆಗೆ ಡಿಹೆಚ್‌ಓ ಕಚೇರಿಯಲ್ಲಿ ನೇರ ಸಂದರ್ಶನವನ್ನು ನಡೆಸಲಾಗುತ್ತದೆ. ಆಸಕ್ತರು ದ್ವಿತೀಯ ಪಿಯುಸಿ, 12ನೇ ತರಗತಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾಗಿದ್ದು, 40 ವರ್ಷ ವಯೋಮಿತಿಯೊಳಗಿರಬೇಕು. ಮಾಸಿಕ ಗೌರವ ಧನ ರೂ. 16,575/–, ಪ್ರಯಾಣ ಭತ್ಯೆ, ದಿನ ಭತ್ಯೆಯನ್ನು ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ https://mysore.nic.in/en/ ಮೂಲಕ ಪಡೆದುಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟದಲ್ಲಿ ಮೂಲಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಜು.1(ಎಂಟಿವೈ)– ಆಷಾಢ ಮಾಸ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಆಷಾಢ ಶುಕ್ರವಾರದಂದು ಬೆಟ್ಟಕ್ಕೆ ಬಂದ ಅಪಾರ ಸಂಖ್ಯೆಯ ಭಕ್ತರಿಗೆ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿರಲಿಲ್ಲ. ಅಲ್ಲದೆ, ಬೆಟ್ಟಕ್ಕೆ ಬಂದ ಭಕ್ತರ ಸಂಖ್ಯೆಗೆ ಅನುಗುಣವಾಗಿ ಶೌಚಾಲಯದ ವ್ಯವಸ್ಥೆಯೂ ಇಲ್ಲದ ಕಾರಣ ಭಕ್ತರು ಪರದಾಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧೆಡೆಯಿಂದ ಆಗಮಿಸುವ ಭಕ್ತರಿಗೆ ಮೂಲ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಮೆಟ್ಟಿಲು ಹತ್ತಿ ಬರುವ ಭಕ್ತರಿಗೆ ನೇರ ದರ್ಶನ ಎಂದು ಹೇಳಲಾಗಿತ್ತು. ಆದರೆ, ಮೆಟ್ಟಿಲು ಹತ್ತಿ ಬಂದ ಭಕ್ತರನ್ನು ಬ್ಯಾರಿಕೇಡ್‌ನಲ್ಲಿ ತುಂಬಿದ್ದರಿಂದ ದರ್ಶನ ಪಡೆಯಲು 3–4 ಗಂಟೆ ಕಾಯಬೇಕಾಗಿತ್ತು. ಅನ್ನ ದಾಸೋಹದ ವ್ಯವಸ್ಥೆ ಸರಿಯಾಗಿ ನಡೆಸುತ್ತಿಲ್ಲ. ಈ ಹಿಂದಿನ ವರ್ಷಗಳಲ್ಲಿ ನಡೆಯುತ್ತಿದ್ದಂತೆ ಪ್ರಸಾದದ ವ್ಯವಸ್ಥೆ ಮಾಡಬೇಕು. ವಿಶೇಷ ದರ್ಶನಕ್ಕೆ ಎರಡು ಸಾವಿರ ರೂ. ದರ ನಿಗದಿ ಮಾಡಿರುವುದರಿಂದ ಉಳ್ಳವರಿಗೆ ಮಾತ್ರ ವಿಶೇಷ ದರ್ಶನ ಎಂಬಂತಾಗಿದೆ. ಶನಿವಾರ, ಭಾನುವಾರವೂ ಖಾಸಗಿ ವಾಹನಗಳ ಪ್ರವೇಶ ನಿಷೇಧಿಸಿ, ಅಲ್ಲಿನ ವ್ಯಾಪಾರಿಗಳಿಗೆ ತೊಂದರೆ ನೀಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಎರಡನೇ ಶುಕ್ರವಾರದಿಂದಲಾದರೂ ಬೆಟ್ಟಕ್ಕೆ ಬರುವ ಭಕ್ತರಿಗೆ ಉತ್ತಮ ವ್ಯವಸ್ಥೆ ಕಲ್ಪಿಸಬೇಕು. ಧರ್ಮ ದರ್ಶನಕ್ಕೆ ಹಾಗೂ ಮೆಟ್ಟಿಲು ಮೂಲಕ ಬರುವ ಭಕ್ತರಿಗೆ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಮಾಡಬೇಕು. ಬೇಗ ದರ್ಶನ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ಗೋಲ್ಡನ್ ಸುರೇಶ್, ಪ್ರಭುಶಂಕರ್, ಪ್ರಜೀಶ್, ಸಿಂಧುವಳ್ಳಿ ಶಿವಕುಮಾರ್, ಮಧುವನ ಚಂದ್ರು, ಬೋಗಾದಿ ಸಿದ್ದೇಗೌಡ, ಶಿವಲಿಂಗಯ್ಯ, ನೇಹಾ, ಭಾಗ್ಯಮ್ಮ, ಪದ್ಮ, ಕೃಷ್ಣೇಗೌಡ, ಗಿರೀಶ್, ನಾಗರಾಜು, ಹನುಮಂತಯ್ಯ, ತಾಯೂರು ಗಣೇಶ್, ಕುಮಾರ್‌ಗೌಡ ಇನ್ನಿತರರಿದ್ದರು.



ಆಷಾಢ ಮಾಸದಲ್ಲಿ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರಿಗೆ ಮೂಲಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ದೇಶ – ವಿದೇಶ

ಹಡಗಿನಿಂದ ಸಮುದ್ರಕ್ಕೆ ಬಿದ್ದ 5 ವರ್ಷದ ಮಗಳನ್ನು ಕಾಪಾಡಿದ ಅಪ್ಪ



ದಕ್ಷಿಣ ಫ್ಲೋರಿಡಾ: ಹಡಗಿನಿಂದ ಬಿದ್ದ ಮಗಳನ್ನು ರಕ್ಷಿಸಲು ಸಮುದ್ರಕ್ಕೆ ತಂದೆ ಹಾರಿದ್ದು, ಹೃದಯಸ್ಪರ್ಶಿ ವೀಡಿಯೋ ವೈರಲ್ ಆಗಿದೆ. ತನ್ನ 5 ವರ್ಷದ ಮಗಳು ಆಕಸ್ಮಿಕವಾಗಿ ಸಮುದ್ರಕ್ಕೆ ಬಿದ್ದಿದ್ದರಿಂದ ಆಕೆಯನ್ನು ರಕ್ಷಿಸಲು ಡಿಸ್ನಿ ಕ್ರೂಸ್ ಹಡಗಿನ 4ನೇ ಡೆಕ್‌ನಿಂದ ಜಿಗಿಯುವ ನಿರ್ಧಾರ ತೆಗೆದುಕೊಂಡ ತಂದೆಯನ್ನು 'ಹೀರೋ' ಎಂದು ಪ್ರಶಂಸಿಸಲಾಗುತ್ತಿದೆ. ಬಹಾಮಾಸ್ನಿಂದ ದಕ್ಷಿಣ ಫ್ಲೋರಿಡಾಕ್ಕೆ ಹಿಂತಿರುಗುತ್ತಿದ್ದಾಗ ಡಿಸ್ನಿ ಡ್ರೀಮ್ನಲ್ಲಿ ಈ ಹೃದಯ ವಿದ್ರಾವಕ ಘಟನೆ ಸಂಭವಿಸಿದೆ. ಮಗು ಹಡಗಿನಿಂದ ಬಿದ್ದಿತು. ಆಕೆಯ ತಂದೆ ತಕ್ಷಣ ನೀರಿನೊಳಗೆ ಬಿದ್ದರು ಎಂದು ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ. ನಂತರ ಕ್ಯಾಪ್ಟನ್ ತಕ್ಷಣವೇ ತುರ್ತು ನಿಲುಗಡೆ ಮಾಡಿ, ಬೃಹತ್ ಹಡಗನ್ನು ತಿರುಗಿಸಿ, ರಕ್ಷಣಾ ದೋಣಿ ನಿಯೋಜಿಸಿದರು. ತರಬೇತಿ ಪಡೆದ ಸಿಬ್ಬಂದಿ, ತಂದೆ ಮತ್ತು ಮಗುವಿನ ಕಡೆಗೆ ಓಡುತ್ತಿದ್ದಂತೆ ಸಿಬ್ಬಂದಿ ಜೀವ ರಕ್ಷಕಗಳನ್ನು ನೀರಿಗೆ ಎಸೆದು ಇಬ್ಬರನ್ನೂ ಸುರಕ್ಷಿತವಾಗಿ ಹಡಗಿನಲ್ಲಿ ಕರೆತರುವಾಗ ನೋಡುಗರ ಕಣ್ಣಲ್ಲಿ ನೀರು ಜಿನುಗಿತ್ತು.

ಲಿವ್ ಇನ್ ಪಾರ್ಟ್ನರ್ ಕೊಂದು ಏನೂ ಆಗಿಲ್ಲ ಎಂಬಂತೆ 2 ದಿನ ಶವದ ಜೊತೆ ಮಲಗಿದ ಕಿರಾತಕ!



ಭೋಪಾಲ್: ದೇಶದಲ್ಲಿ ಲಿವ್–ಇನ್ ಪಾರ್ಟನರ್ ಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪಾಪಿಯೊಬ್ಬ ಲಿವ್ ಇನ್ ಸಂಗಾತಿಯನ್ನು ಕೊಂದು ಕಂಬಳಿಯಲ್ಲಿ ಸುತ್ತಿ ಶವದೊಂದಿಗೆ ಎರಡು ದಿನ ಮಲಗಿದ್ದ ಘಟನೆ ಭೋಪಾಲ್‌ನ ಗಾಯತ್ರಿನಗರದಲ್ಲಿ ನಡೆದಿದೆ. 32 ವರ್ಷದ ಸಚಿನ್ ರಜಪೂತ್ ಎಂಬಾತ 28 ವರ್ಷದ ರಿತಿಕಾ ಸೇನ್‌ಳನ್ನು ಹತ್ಯೆ ಮಾಡಿದ್ದು, ಆಕೆಯ ದೇಹವನ್ನು ಕಂಬಳಿಯಲ್ಲಿ ಸುತ್ತಿ 2 ರಾತ್ರಿಗಳು ಅದರ ಪಕ್ಕದಲ್ಲಿ ಏನೂ ಆಗಿಲ್ಲ ಎನ್ನುವಂತೆ ಮಲಗಿದ್ದ. ಇಬ್ಬರ ನಡುವೆ ಜೂನ್ 27ರ ರಾತ್ರಿ ತೀವ್ರ ವಾಗ್ವಾದದ ನಂತರ ಕೊಲೆ ನಡೆದಿದೆ ಎನ್ನಲಾಗಿದೆ. ಕೆಲಸ ಇಲ್ಲದೆ ಅಸೂಯೆಯಿಂದ ಬಳಲುತ್ತಿದ್ದ ಸಚಿನ್, ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ರಿತಿಕಾಳ ಮೇಲೆ ತನ್ನ ಬಾಸ್ ಜೊತೆ ಸಂಬಂಧವಿದೆ ಎಂದು ಶಂಕಿಸಿ, ಜಗಳ ಮಾಡಿ ಕೋಪದಿಂದ ಆಕೆಯನ್ನು ಕತ್ತು ಹಿಸುಕಿ ಹತ್ಯೆ ಮಾಡಿದ್ದಾನೆ. ನಂತರ ಸಚಿನ್, ಎಚ್ಚರಿಕೆಯಿಂದ ಮೃತದೇಹವನ್ನು ಹಾಸಿಗೆ ಮೇಲೆ ಬಿಟ್ಟು ಅದೇ ಕೊಠಡಿಯಲ್ಲಿ ಇದ್ದಾನೆ. 2 ದಿನಗಳ ಕಾಲ ಮೃತದೇಹದ ಪಕ್ಕದಲ್ಲಿ ಮಲಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಆಡಿಯೋ ಸೋರಿಕೆ ಆರೋಪ: ಥಾಯ್ ಪ್ರಧಾನಿ ಶಿನಾವತ್ರಾ ಅಮಾನತು



ಥಾಯ್ಲೆಂಡ್: ಥಾಯ್ ಪ್ರಧಾನಮಂತ್ರಿ ಪೇಟೊಂಗ್ಟರ್ನ್ ಶಿನಾವತ್ರಾ ಅವರನ್ನು ಥಾಯ್ಲೆಂಡ್ ಸಾಂವಿಧಾನಿಕ ಕೋರ್ಟ್ ಮಂಗಳವಾರ ಪ್ರಧಾನಿ ಹುದ್ದೆಯಿಂದ ಅಮಾನತುಗೊಳಿಸಿ ಆದೇಶ ನೀಡಿದೆ. ಶಿನಾವತ್ರಾ ಅವರನ್ನು ಪ್ರಧಾನಿ ಹುದ್ದೆಯಿಂದ ವಜಾಗೊಳಿಸಬೇಕೆಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ಬಾಕಿ ಇದ್ದಿರುವುದಾಗಿ ವರದಿ ವಿವರಿಸಿದೆ. ಕೋರ್ಟ್ ಆದೇಶದ ಪ್ರಕಾರ, ಶಿನಾವತ್ರಾ ವಿರುದ್ಧ ನಮಗೆ 36 ಸೆನೆಟರ್‌ಗಳು ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿದೆ. ಅಲ್ಲದೇ ಕಾಂಬೋಡಿಯಾ ಮಾಜಿ ಪ್ರಧಾನಿ ಹುನ್‌ಸೇನ್ ಅವರಿಗೆ ಆಡಿಯೋ ಅನ್ನು ಸೋರಿಕೆ ಮಾಡಿರುವುದು ಸಾಂವಿಧಾನದ ಉಲ್ಲಂಘನೆಯಾಗಿದ್ದು, ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಅರ್ಜಿಯಲ್ಲಿ ಆರೋಪಿಸಲಾಗಿದೆ. ಶಿನಾವತ್ರಾ ವಿರುದ್ಧ ವಿಚಾರಣೆ ನಡೆಯುತ್ತಿರುವುದರಿಂದ ಡೆಪ್ಯುಟಿ ಪ್ರಧಾನಮಂತ್ರಿ ಸರ್ಕಾರದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುವಂತೆ ಕೋರ್ಟ್ ನಿರ್ದೇಶನ ನೀಡಿದೆ. ಶಿನಾವತ್ರಾ ಅವರನ್ನು ಪ್ರಧಾನಿ ಹುದ್ದೆಯಿಂದ ಅಮಾನತು ಮಾಡಿರುವ ಕೋರ್ಟ್ ಆದೇಶದ ಬಗ್ಗೆ ಥಾಯ್ ಸರ್ಕಾರ ತಕ್ಷಣವೇ ಯಾವುದೇ ಪ್ರತಿಕ್ರಿಯೆಯನ್ನು ನೀಡಿಲ್ಲ ಎಂದು ವರದಿ ತಿಳಿಸಿದೆ.

ಬೆಂಕಿಗೆ ತುತ್ತಾದ ವಾಣಿಜ್ಯ ಹಡಗು: ಭಾರತೀಯ ಸೇನೆ ನೆರವು



ನವದೆಹಲಿ: ಪಲ್ಲಾವು ದೇಶದ ಧ್ವಜ ಹೊಂದಿದ ಎಂಟಿ ಯಿ ಛೆಂಗ್–6 ವಾಣಿಜ್ಯ ಹಡಗಿನ ಎಂಜಿನ್‌ನಲ್ಲಿ ದೊಡ್ಡ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದ್ದು, ನೆರವಿಗಾಗಿ ಭಾರತೀಯ ನೌಕಾಪಡೆಯ ಹಡಗನ್ನು ನಿಯೋಜಿಸಲಾಗಿದೆ. ಗುಜರಾತ್‌ನ ಕಾಂಡ್ಲಾ ಬಂದರಿನ ಮುಖಾಂತರ ಒಮನ್‌ನ ಶಿನಾಸ್‌ನತ್ತ ತೆರಳುತ್ತಿದ್ದ ಹಡಗಿನಲ್ಲಿ ಭಾರತೀಯ ಮೂಲದ 14 ಮಂದಿ ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಬೆಂಕಿ ಹತ್ತಿದ ಕೂಡಲೇ ಹಡಗಿನಿಂದ ನೆರವು ಯಾಚಿಸಿ ಕರೆಬಂದ ತಕ್ಷಣವೇ ಗಲ್ಫ್ ಆಫ್ ಒಮನ್‌ನಲ್ಲಿ ನಿಯೋಜಿಸಿದ್ದ 'ಐಎನ್‌ಎಸ್ ತಬರ್' ಅನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಲಾಯಿತು.

ಹಡಗಿನಲ್ಲಿ ದೊಡ್ಡ ಪ್ರಮಾಣದಲ್ಲಿ ಅಗ್ನಿ ಅನಾಹುತ ಸಂಭವಿಸಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಸೇನಾ ನೌಕೆಯಲ್ಲಿದ್ದ ಅಗ್ನಿಶಾಮಕ ತಂಡ ಹಾಗೂ ಹೆಲಿಕಾಪ್ಟರ್ ನೆರವಿನಿಂದ ಸಿಬ್ಬಂದಿಯನ್ನು ರಕ್ಷಿಸಲಾಗಿದೆ. 13 ಮಂದಿ ನೌಕಾಪಡೆ ಯೋಧರು, 5 ಮಂದಿ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ನಿರತರಾಗಿದ್ದಾರೆ.

ಪರಮಾಣು ಬೆದರಿಕೆಗೆ ಬಗ್ಗಲ್ಲ... ಉಗ್ರರಿಗೆ ಶಿಕ್ಷೆ ಕೊಡದೇ ಬಿಡಲ್ಲ...



ವಾಷಿಂಗ್ಟನ್: ಭಾರತ ಪರಮಾಣು ಬೆದರಿಕೆಗೆ ಮಣಿಯುವುದಿಲ್ಲ. ಭಯೋತ್ಪಾದಕರಿಗೆ ಶಿಕ್ಷೆಯಿಂದ ಮುಕ್ತಿಯಿಲ್ಲ. ಅವರಿಗೆ ಬೆಂಬಲ ನೀಡುವ ಮತ್ತು ಹಣಕಾಸು ಒದಗಿಸುವ ಸರ್ಕಾರವನ್ನು ಬಿಡುವುದಿಲ್ಲ. ಭಾರತ ತನ್ನ ಜನರನ್ನು ರಕ್ಷಿಸಲು ಏನು ಮಾಡಬೇಕೋ ಅದನ್ನು ಮಾಡುತ್ತದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಮ್ಯಾನ್‌ಹ್ಯಾಟನ್‌ನಲ್ಲಿ ಖಾಸಗಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಜೈಶಂಕರ್, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಸಾವನ್ನಪ್ಪಿದ ಸುಮಾರು 2 ತಿಂಗಳ ನಂತರ ಈ ಹೇಳಿಕೆಗಳನ್ನು ನೀಡಿದ್ದಾರೆ. ಭಯೋತ್ಪಾದನೆಗೆ ಶೂನ್ಯ ಸಹಿಷ್ಣುತೆ ಇರಬೇಕು ಮತ್ತು ಭಯೋತ್ಪಾದಕರ ಕೃತ್ಯಗಳನ್ನು ಅನುಮತಿಸಬೇಕಾದ, ಬೆಂಬಲಿಸಬೇಕಾದ ಅಥವಾ ಹಣಕಾಸು ಒದಗಿಸುವ ಯಾವುದೇ ಸಂದರ್ಭಗಳು ಇರಬಾರದು ಎಂಬುದು ಜಗತ್ತಿಗೆ ಭಾರತದ ಸಂದೇಶವಾಗಿದೆ ಎಂದರು. ಕಳೆದ 4 ದಶಕಗಳಿಂದ ಈ ಅನುಭವ ತುಂಬಾ ತೀವ್ರವಾಗಿದೆ ಆದರೆ ವಾಸ್ತವವಾಗಿ ನಮ್ಮ ಸ್ವಾತಂತ್ರ್ಯದ ಸಮಯದಿಂದಲೇ ಪ್ರಾರಂಭವಾಗಿದೆ. ನಮಗೆ ಸ್ವಾತಂತ್ರ್ಯ ಬಂದ ಕೆಲವೇ ತಿಂಗಳುಗಳಲ್ಲಿ ಭಯೋತ್ಪಾದಕರನ್ನು ಕಾಶ್ಮೀರಕ್ಕೆ ಕಳುಹಿಸಲಾಗಿತ್ತು ಎಂದು ಹೇಳಿದರು.

ಮೈಸೂರು ಮಿತ್ರ ಬುಧವಾರ 2 ಜುಲೈ 2025

ಪತ್ರಿಕಾ ವಿತರಕರಿಗೆ ರೈನ್ ಕೋಟ್ ವಿತರಿಸಿದ ಕೆನರಾ ಬ್ಯಾಂಕ್



ವಿರಾಜಪೇಟೆ, ಜು.1–ಪತ್ರಿಕಾ ದಿನಾಚರಣೆ ನೆನಪಿಗಾಗಿ ಕೆನರಾ ಬ್ಯಾಂಕ್ ವಿರಾಜಪೇಟೆ ಶಾಖೆ ಪತ್ರಿಕಾ ವಿತರಕರಿಗೆ ರೈನ್ ಕೋಟ್ ವಿತರಿಸಿತು.

ಬ್ಯಾಂಕ್ ಸಭಾಂಗಣದಲ್ಲಿ ರೈನ್ ಕೋಟ್ ವಿತರಿಸಿ ಮಾತನಾಡಿದ ಶಾಖೆಯ ಮುಖ್ಯ ಪ್ರಬಂಧಕರಾದ ಭಾನುಮತಿ, ಪತ್ರಿಕೆಗಳಿಗೆ ವಿತರಕರೇ ಜೀವಾಳ. ಪ್ರಸ್ತುತ ಸಮಾಜವು ತಂತ್ರಜ್ಞಾನ ಅಳವಡಿಸಿಕೊಂಡು ಸಾಮಾಜಿಕ ಜಾಲತಾಣದ ಮೂಲಕ ಅನೇಕ ಸುದ್ದಿ ಮತ್ತು ವಿಷಯಗಳನ್ನು ಗ್ರಹಿಸಿಕೊಂಡು ಹೋಗುತ್ತಿದೆ. ಇದರಿಂದ ಪತ್ರಿಕೆಗಳನ್ನು ಪಡೆದು ಓದುಗರ ಸಂಖ್ಯೆ ಕ್ಷೀಣಿಸುತ್ತಿರುವ ಇಂತಹ ಸನ್ನಿವೇಶದಲ್ಲಿಯೂ ಪತ್ರಿಕೆಗಳನ್ನು ಮನೆ ಕಛೇರಿಗಳು ಸೇರಿದಂತೆ ಇತರ ಸ್ಥಳಗಳಿಗೆ ದಿನಬಿಡದೆ ವಿತರಣೆಯಾಗುತ್ತಿದೆ ಎಂದು ಶ್ಲಾಘಿಸಿದರು. ಕೆನರಾ ಬ್ಯಾಂಕ್ ವಿರಾಜಪೇಟೆ ಶಾಖೆಯ ಸಿಬ್ಬಂದಿಗಳು, ಪತ್ರಿಕಾ ವಿತರಕರಾದ ಅಬ್ದುಲ್ ರೇಹಮಾನ್, ದೀಪಕ್ ದಾಸ್, ಕಿಶೋರ್ ಕುಮಾರ್ ಶೆಟ್ಟಿ, ಅಬ್ದುಲ್ಲಾ, ವಿನು, ರಾಜೀವ್, ಮತ್ತು ಟಿ.ಎಂ ಶರೀಫ್ ಹಾಜರಿದ್ದರು.

ಆಮೆ ನಡಿಗೆಯಲ್ಲಿ ಆಶ್ರಮ ಶಾಲಾ ಕಾಮಗಾರಿ: ಅತಂತ್ರ ಸ್ಥಿತಿಯಲ್ಲಿ ವಿದ್ಯಾರ್ಥಿಗಳು

ಮಡಿಕೇರಿ, ಜು.1–ಪೊನ್ನಂಪೇಟೆ ತಾಲೂಕಿನ ನಾಲ್ಕೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಗರಹೊಳೆ ಗಿರಿಜನ ಆಶ್ರಮ ಶಾಲೆಯ ಕಟ್ಟಡದ ದುರಸ್ಥಿ ಕಾಮಗಾರಿ ಆಮೆ ನಡಿಗೆಯಲ್ಲಿ ಸಾಗಿದ್ದು ವಿದ್ಯಾರ್ಥಿಗಳ ಸ್ಥಿತಿ ಅತಂತ್ರವಾಗಿದೆ.

ಸುತ್ತಮುತ್ತಲಿನ ಹಾಡಿಗಳ 16 ಮಂದಿ ವಿದ್ಯಾರ್ಥಿಗಳು ಇಲ್ಲಿ 1ರಿಂದ7 ನೇ ತರಗತಿ ವರೆಗೆ ವ್ಯಾಸಂಗ ಮಾಡುತ್ತಿದ್ದು, ಗಿರಿಜನ ಆಶ್ರಮ ಶಾಲೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರು, ನಾಲ್ವರು ಅಡುಗೆ ಸಿಬ್ಬಂದಿಗಳು ಹಾಗೂ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಹಿಂದೆ ಈ ಶಾಲೆಯಲ್ಲಿ ಮಕ್ಕಳಿಗೆ ಒಂದೇ ಕೊಠಡಿಯಲ್ಲಿ ಪಾಠ ಪ್ರವಚನವಾಗುತ್ತಿದ್ದು, ಜೊತೆಗೆ ಅದೇ ಕೊಠಡಿಯಲ್ಲೇ ರಾತ್ರಿ ತಂಗಬೇಕಿತ್ತು. ಈ ಹಿನ್ನೆಲೆಯಲ್ಲಿ ಆಶ್ರಮ ಶಾಲೆಯ ಈ ಹಿಂದಿನ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದ ಕಾರಣ ಐಟಿಡಿಪಿ ಇಲಾಖೆಯಿಂದ ಸುಮಾರು 1 ಕೋಟಿ 74 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಶ್ರಮಶಾಲೆಯ ಕಟ್ಟಡ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಮೇ ಅಂತ್ಯದೊಳಗೆ ಶಾಲೆ ಆರಂಭಕ್ಕೂ ಮುನ್ನ ಕಾಮಗಾರಿ ಮುಗಿಯಬೇಕಿತ್ತಾದರೂ ಇನ್ನೂ ಕಾಮಗಾರಿ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸ್ಥಿತಿ ಅತಂತ್ರವಾಗಿದೆ.



ಮಂದಗತಿಯಲ್ಲಿ ನಡೆಯುತ್ತಿರುವ ಆಶ್ರಮ ಶಾಲಾ ಕಟ್ಟಡದ ದುರಸ್ಥಿ ಕಾಮಗಾರಿ.

ಈ ಹಿನ್ನೆಲೆಯಲ್ಲಿ ಪಕ್ಕದಲ್ಲೇ ಇರುವ ಬೇರೆ ಕಟ್ಟಡಕ್ಕೆ ತಾತ್ಕಾಲಿಕವಾಗಿ ಆಶ್ರಮ ಶಾಲೆಯನ್ನು ಸ್ಥಳಾಂತರಗೊಳಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳು ನಡೆಯುತ್ತಿವೆ. ಈ ಕಟ್ಟಡದಲ್ಲಿ ಶಾಲೆಯ ಮೂವರು ವಿದ್ಯಾರ್ಥಿಗಳು ತಂಗುತ್ತಿದ್ದು, ಉಳಿದ 13 ವಿದ್ಯಾರ್ಥಿಗಳು ತಮ್ಮ ಮನೆಗಳಿಗೆ ತೆರಳುತ್ತಿದ್ದಾರೆ. ಮೂವರು ವಿದ್ಯಾರ್ಥಿ ಗಳು ತಂಗುತ್ತಿರುವ ಕೊಠಡಿಯ ಗೋಡೆಗಳು ಬಿರುಕು ಬಿಟ್ಟಿದ್ದು, ಈಗಲೋ ಆಗಲೋ ಬೀಳುವ ಸ್ಥಿತಿಯಲ್ಲಿದೆ ಇಂತಹ ಕೊಠಡಿಯಲ್ಲೇ ಜೀವ ಕೈಯಲ್ಲಿಡಿದು ಮಲಗಬೇಕಾದ ಸ್ಥಿತಿಯಿದೆ. ಈಗಿರುವ ತಾತ್ಕಾಲಿಕ ಕಟ್ಟಡವೂ ಶಿಥಿಲಾವಸ್ಥೆಯಲ್ಲಿರುವುದರಿಂದ ಆಶ್ರಮ ಶಾಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಂದಗತಿಯಲ್ಲಿ ಸಾಗುತ್ತಿರುವ ಕಾಮಗಾರಿಯನ್ನು ಚುರುಕುಗೊಳಿಸುವಲ್ಲಿ ಐಟಿಡಿಪಿ ಅಧಿಕಾರಿಗಳು ಮುಂದಾಗಬೇಕಿದ್ದು, ಶೀಘ್ರದಲ್ಲೇ ನೂತನ ಕಟ್ಟಡ ವಿದ್ಯಾರ್ಥಿಗಳಿಗೆ ದೊರಕ ಬೇಕಿದೆ.

ನಾಳೆ ಪಿ.ಜಿ.ಆರ್.ಸಿಂಧ್ಯರಿಂದ ಸಮಾಲೋಚನ ಸಭೆ

ಮಡಿಕೇರಿ ಜು.1–ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯ ಜು. 3 ರ ಮಧ್ಯಾಹ್ನ 12 ಗಂಟೆಗೆ ನಗರದ ವ್ಯಾನ್ಸ್ ಕಾಂಪೌಂಡ್‌ನಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪೊನ್ನಮ್ಮ ಕುಶಾಲಪ್ಪ ಸ್ಕೌಟ್ ಗೈಡ್ ಭವನದಲ್ಲಿ ಪದಾಧಿಕಾರಿಗಳೊಂದಿಗೆ ಸಮಾಲೋಚನಾ ಸಭೆ ನಡೆಸಲಿದ್ದು, ಶಾಸಕ ಡಾ.ಮಂತರ್ ಗೌಡ ಪಾಲ್ಗೊಳ್ಳಲಿದ್ದಾರೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಘಟಕರು ತಿಳಿಸಿದ್ದಾರೆ.

ನಿಧನ

ಪ್ರದೀಪ್



ನಾಪೋಕ್ಲು ಜು.1– ಇಲ್ಲಿಗೆ ಸಮೀಪದ ಕಕ್ಕುಂದಕಾಡು – ಕಲ್ಲುಮೊಟ್ಟೆ ನಿವಾಸಿ ಹರಿದಾಸ್ ಅವರ ಪುತ್ರ ಪ್ರದೀಪ್ (32) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಮೃತರ ಅಂತ್ಯ ಕ್ರಿಯೆ ಶನಿವಾರ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ತಂದೆ, ತಾಯಿ ಹಾಗೂ ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ.

ರಾಹುಲ್



ನಾಪೋಕ್ಲು, ಜು.1– ಇಲ್ಲಿಗೆ ಸಮೀಪದ ಹಳೆ ತಾಲೂಕು ನಿವಾಸಿ ಉಮಾ ಲಕ್ಷ್ಮಿ ಅವರ ಮಗ ರಾಹುಲ್ (28) ಅನಾರೋಗ್ಯದಿಂದ ನಿಧನರಾದರು. ಮೃತರ ಅಂತ್ಯ ಸಂಸ್ಕಾರ ಇಂದು ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ತಾಯಿ ಹಾಗೂ ತಲಾ ಒಬ್ಬ ಸಹೋದರ ಸಹೋದರಿಯನ್ನು ಅಗಲಿದ್ದಾರೆ.

ಅಕ್ಕವ್ವ (ಕಾಂಜು)



ನಾಪೋಕ್ಲು, ಜು.1– ಇಲ್ಲಿಗೆ ಸಮೀಪದ ಮರಂದೋಡ ಗ್ರಾಮದ ನಿವಾಸಿ ನೀಡುವಂಡ ದಿವಂಗತ ಚಿನ್ನಪ್ಪ ಅವರ ಧರ್ಮಪತ್ನಿ ಅಕ್ಕವ್ವ (ಕಾಂಜು 99) ಇಂದು ನಿಧನರಾದರು. ಮೃತರ ಅಂತ್ಯಸಂಸ್ಕಾರ ನಾಳೆ ರುದ್ರಭೂಮಿಯಲ್ಲಿ ನೆರವೇರಲಿದೆ. ಮೃತರು ತಲಾ ಮೂರು ಗಂಡು, ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ಐನ್‌ಮನೆಗೆ ಶಾಸಕ ಪೊನ್ನಣ್ಣ ಭೇಟಿ

ಮಡಿಕೇರಿ, ಜು.1– ವಿರಾಜಪೇಟೆ ತಾಲೂಕು ಬಿಟ್ಟಂಗಾಲದಲ್ಲಿರುವ ಪುಚ್ಚಿಮಾಡ ಐನ್‌ಮನೆಗೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಭೇಟಿ ನೀಡಿ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾದರು. ಐನ್ ಮನೆಯಲ್ಲಿ ನಡೆಯುತ್ತಿರುವ ಧಾರ್ಮಿಕ ಉತ್ಸವದಲ್ಲಿ ಭಾಗವಹಿಸುವಂತೆ ಪುಚ್ಚಿಮಾಡ ಕುಟುಂಬಸ್ಥರು ಆಮಂತ್ರಣ ನೀಡಿದ್ದ ಹಿನ್ನೆಲೆಯಲ್ಲಿ ಐನ್‌ಮನೆಯಲ್ಲಿ ನಡೆಯುತ್ತಿರುವ ವಿಷ್ಣು ಮೂರ್ತಿ ದೈವ ಕೋಲದಲ್ಲಿ ಭಾಗವಹಿಸಿದ್ದರು.

ಅಪರಿಚಿತ ವಾಹನ ಡಿಕ್ಕಿ: ನಾಲ್ಕು ಜಾನುವಾರು ಸಾವು



ಅಪರಿಚಿತ ವಾಹನ ಡಿಕ್ಕಿಯಿಂದ ಸಾವನ್ನಪ್ಪಿರುವ ಜಾನುವಾರುಗಳು

ಮಡಿಕೇರಿ, ಜು.1–ಹೆದ್ದಾರಿಯಲ್ಲಿ ಮಲಗಿದ್ದ ಜಾನುವಾರುಗಳಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಕರುಗಳು ಸೇರಿದಂತೆ ಒಟ್ಟು ನಾಲ್ಕು ಜಾನುವಾರುಗಳು ಸಾವನ್ನಪ್ಪಿರುವ ಘಟನೆ ಸಂಪಾಜೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯ ಕೊಯ ನಾಡಿನಲ್ಲಿ ನಡೆದಿದೆ.

ಕೊಯನಾಡು ಶ್ರೀ ಗಣಪತಿ ದೇವಾಲಯದ ತಿರುವಿನಲ್ಲಿ ಈ ದುರ್ಘಟನೆ ಸಂಭವಿಸಿದ್ದು, ಮಧ್ಯರಾತ್ರಿ ಲಾರಿ ಡಿಕ್ಕಿಯಾಗಿರಬಹುದೆಂದು ಶಂಕಿಸಲಾಗಿದೆ. ಜಾನುವಾರುಗಳನ್ನು ಸಾಕುವ ಮಾಲೀಕರು ಅವುಗಳ ಸುರಕ್ಷತೆಯ ಬಗ್ಗೆಯೂ ಹೆಚ್ಚಿನ ಕಾಳಜಿ ತೋರಬೇಕು. ಹೆದ್ದಾರಿಯಲ್ಲಿ ಜಾನುವಾರುಗಳನ್ನು ಮೇಯಲು ಬಿಡಬಾರದು ಎಂದು ಪ್ರಾಣಿ ಪ್ರಿಯರು ಮನವಿ ಮಾಡಿದ್ದಾರೆ.

ಸಂಕಷ್ಟಗಳ ಸಂದರ್ಭಗಳಲ್ಲಿ ಪ್ರಜಾತಂತ್ರ ಉಳಿಸಿದ್ದೇ ಪತ್ರಿಕಾ ಕ್ಷೇತ್ರ



ಕೊಡಗು ಜಿಲ್ಲಾ ಪತ್ರಕರ್ತರ ಸಂಘ ಪತ್ರಿಕಾ ದಿನಾಚರಣೆ ಅಂಗವಾಗಿ ವಿವಿಧ ದತ್ತಿಪ್ರಶಸ್ತಿ ವಿಜೇತ ಪತ್ರಕರ್ತರನ್ನು ಗೌರವಿಸಿತು

ಮಡಿಕೇರಿ, ಜು.1– ಪ್ರಜಾತಂತ್ರ ವ್ಯವಸ್ಥೆಗೆ ವಿವಿಧ ಕಾಲ ಘಟ್ಟಗಳಲ್ಲಿ ಎದುರಾದ ಸಂಕಷ್ಟಗಳ ಸಂದರ್ಭಗಳಲ್ಲೆಲ್ಲ ಪತ್ರಿಕಾ ಕ್ಷೇತ್ರ ಅದಕ್ಕೆ ಎದುರಾಗಿ ಕಾರ್ಯ ನಿರ್ವಹಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂರಕ್ಷಣೆಗೆ ಶ್ರಮಿಸಿರುವುದಾಗಿ ಸಮಾಜ ಸೇವಕ ತೇಲಪಂಡ ಶಿವಕುಮಾರ್ ನಾಣಯ್ಯ ಅಭಿಪ್ರಾಯಿಸಿದರು.

ಕೊಡಗು ಪತ್ರಕರ್ತರ ಸಂಘದ ವತಿಯಿಂದ ನಗರದ ಪತ್ರಿಕಾ ಭವನದ ಸಭಾಂಗಣದಲ್ಲಿ ನಡೆದ ಪತ್ರಿಕಾ ದಿನಾಚರಣೆ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊಡಗು ಪತ್ರಕರ್ತರ ಸಂಘದ 'ಸ್ವಾಸ್ಥ್ಯ ಸುಂದರ, ಸಮಾಜ' ಎನ್ನುವ ಘೋಷವಾಕ್ಯದಂತೆ ಪತ್ರಿಕಾ ಕ್ಷೇತ್ರ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಮೂಲಕ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಸದಾ ಶ್ರಮಿಸುತ್ತಿದೆ. ಪ್ರಸ್ತುತ ದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವ ಬಹುತೇಕರು ಉದ್ಯೋಗಕ್ಕಾಗಿ, ಬದುಕಿಗಾಗಿ ಹೊರ ದೇಶಗಳತ್ತ ಮುಖ ಮಾಡುವುದನ್ನು ನೋಡಿದರೆ, ನಮ್ಮ ಶಿಕ್ಷಣದಲ್ಲಿ ಲೋಪವಿದೆಯೇ ಎಂದು ಅನುಮಾನ ವ್ಯಕ್ತಪಡಿಸಿ ಪ್ರಸ್ತುತ ಶಿಕ್ಷಣ, ಆರೋಗ್ಯ, ಕೈಗಾರಿಕೆ ಕ್ಷೇತ್ರ ಸೇರಿದಂತೆ ಅಧಿಕಾರ ಸ್ಥಾನಗಳೆಲ್ಲವು ವಂಶಪಾರಂಪರ್ಯದ ಅಧಿಕಾರಕ್ಕೆ ಒಳಪಟ್ಟಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಪ್ರಚಾರ ಇಲಾಖೆ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ ಮಾತನಾಡಿ, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಪತ್ರಿಕೆಗಳ ಪಾತ್ರ ಅತ್ಯಂತ ಮಹತ್ವ ಪೂರ್ಣವಾದದ್ದು. ಇಂತಹ ಪತ್ರಿಕಾ ಕ್ಷೇತ್ರ ಬದಲಾವಣೆಗಳಿಗೆ ತನ್ನನ್ನು ತೆರೆದುಕೊಳ್ಳುತ್ತಿರುವ ಈ ದಿನಮಾನಗಳಲ್ಲಿ, ಅದನ್ನು ಎಲ್ಲರೂ ಒಗ್ಗೂಡಿ ಎದುರಿಸಿ ಮುನ್ನಡೆಯುವ ಬಗ್ಗೆ ಚಿಂತಿಸುವ ಅಗತ್ಯವಿದೆ ಎಂದು ತಿಳಿಸಿದರು. ಹಿರಿಯ ಪತ್ರಕರ್ತ ಕೆ.ತಿಮ್ಮಪ್ಪ ಮಾತನಾಡಿ, ಪ್ರಸ್ತುತ ಪತ್ರಿಕಾ ಕ್ಷೇತ್ರ ಎನ್ನುವುದು ಹಲವು ಬದಲಾವಣೆಗಳಿಗೆ ತೆರೆದುಕೊಂಡಿದ್ದು, ಆನ್ ಲೈನ್ ಮತ್ತು ಇಲೆಕ್ಟ್ರಾನಿಕ್ ಕ್ಷೇತ್ರಗಳು ಹೆಚ್ಚು ಸಕ್ರಿಯವಾಗಿವೆ ಹೀಗಿದ್ದೂ ಪತ್ರಿಕೆಗಳನ್ನು ಕೈಯಲ್ಲಿ ಹಿಡಿದು ಓದುವ ಆ ಹಿತವೆ ಮಧುರವಾದುದೆಂದು ಹೇಳಿದರು. ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಿ.ವಿ.ರವಿಕುಮಾರ್, ಪತ್ರಕರ್ತರ ಸಂಘದ ಸ್ಥಾಪಕಾಧ್ಯಕ್ಷ ಎಸ್.ಎ. ಮುರಳೀಧರ್ ಮಾತನಾಡಿದರು. ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಎಚ್.ಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಮಾರಂಭದಲ್ಲಿ ಈ ಬಾರಿಯ ವಾರ್ಷಿಕ ಪ್ರಶಸ್ತಿಗಳನ್ನು 10 ಮಂದಿ ಪತ್ರಕರ್ತರಿಗೆ ಪ್ರದಾನ ಮಾಡಲಾಯಿತು. ಕುಡೆಕಲ್ ಸಂತೋಷ್, ಮೋಹನ್ ರಾಜ್, ಪ್ರಸಾದ್ ಸಂಪಿಗೆ ಕಟ್ಟೆ ವಿಘ್ನೇಶ್ ಭೂತನಕಾಡು, ಸುನಿಲ್ ಪೂಜಾರಿ, ಡಿ.ಪಿ.ಲೋಕೇಶ್, ವಿನೋದ್ ಮೂಡಗದ್ದೆ ಅವರಿಗೆವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ದೃಶ್ಯ ವಾಹಿನಿಯ ಪರವಾಗಿ ಸೈಯ್ಯದ್ ಇರ್ಫಾನ್, ಟಿ.ಜೆ. ಪ್ರವೀಣ್ ಕುಮಾರ್ ಅವರಿಗೆ ನೀಡಿ ಗೌರವಿಸಲಾಯಿತು. ಕೊಡಗು ಪತ್ರಕರ್ತರ ಸಂಘಕ್ಕೆ ದತ್ತಿ ನಿಧಿಯನ್ನು ನೀಡಿರುವ ಕಾಂತಿ ಸತೀಶ್, ನಾಗೇಂದ್ರ ಪ್ರಸಾದ್ ಮತ್ತು ಅಂಜನ್ ಪ್ರಸಾದ್, ಗುಡ್ಡೆಮನೆ ವಿಶು ಕುಮಾರ್, ಬಿ.ಜಿ. ಅನಂತಶಯನ, ಭಾಗೀರಥಿ ಮಹಂತೇಶ್ ಅವರನ್ನು ಸನ್ಮಾನಿಸಿ ಗೌರವ ಸಲ್ಲಿಸಲಾಯಿತು.

ನಿವೃತ್ತ ಶಿಕ್ಷಕರಿಗೆ ಚಿನ್ನದುಂಗುರ ಉಡುಗೊರೆ!



ಸೇವೆಯಿಂದ ನಿವೃತ್ತರಾದ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕ ಜಿ. ಮಹಾದೇವರವರಿಗೆ ಗ್ರಾಮಸ್ಥರು ಚಿನ್ನದುಂಗುರವನ್ನು ತೊಡಿಸುತ್ತಿರುವುದು.

ಯಳಂದೂರು, ಜು. 1 (ವಿ.ನಾಗರಾಜು)– ತಾಲೂಕಿನ ಯರಿಯೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿರುವ ಶಿಕ್ಷಕ ಜಿ. ಮಹದೇವುರವರನ್ನು ಗ್ರಾಮಸ್ಥರು ಆತ್ಮೀಯವಾಗಿ ಬೀಳ್ಕೊಟ್ಟರು.

ಶಾಲೆಗೆ ದೈಹಿಕ ಶಿಕ್ಷಕರಾಗಿ ಸೇವೆಗೆ ಸೇರಿದ ಇವರು ಇದೇ ಶಾಲೆಯಲ್ಲಿ 31 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ಇಂದು ವಯೋನಿವೃತ್ತಿ ಹೊಂದ ಇವರನ್ನು ಗ್ರಾಮಸ್ಥರೆಲ್ಲಾ ಸೇರಿಕೊಂಡು ಮಂಗಳ ವಾದ್ಯ, ಡೊಳ್ಳುಗಳೊಂದಿಗೆ ಮೆರವಣಿಗೆಯಲ್ಲಿ ಕರೆದುಕೊಂಡು ಬಂದು ಇವರಿಗೆ ಚಿನ್ನದ ಉಂಗುರವನ್ನು ತೊಡಿಸಿದ್ದಾರೆ. ಹಳೆ ವಿದ್ಯಾರ್ಥಿಗಳೆಲ್ಲಾ ಸೇರಿ ಮತ್ತೊಂದು ಚಿನ್ನದುಂಗುರವನ್ನು ಕೊಡುಗೆಯಾಗಿ ನೀಡಿದರು.

ಗ್ರಾಮದ ಮಕ್ಕಳ ಪೋಷಕರು ಸೇರಿದಂತೆ ನೂರಾರು ಮಂದಿ ಇವರಿಗೆ ಹಾರ, ತುರಾಯಿ, ಪೇಟಗಳನ್ನು ತೊಡಿಸಿ ಉಡುಗೊರೆಗಳನ್ನು ನೀಡಿ ಅಭಿನಂದಿಸಿದ್ದಾರೆ. ತಾಲೂಕಿನ ವಿವಿಧ ಶಾಲೆಗಳ ಶಿಕ್ಷಕರೂ ಹಿಂದೆ ಬೀಳದೆ ಈ ಸಡಗರದಲ್ಲಿ ಪಾಲ್ಗೊಂಡರು. ಸನ್ಮಾನಕ್ಕೆ ಉತ್ತರಿಸಿದ ಜಿ. ಮಹದೇವ ಮಾತನಾಡಿ, ನಾನು ಈ ಶಾಲೆಯಲ್ಲೇ ನನ್ನ ವೃತ್ತಿ ಜೀವನವನ್ನು ಆರಂಭಿಸಿದೆ. ಇಲ್ಲೇ ನಿವೃತ್ತಿಯಾಗುತ್ತಿದ್ದೇನೆ. ಒಂದೇ ಶಾಲೆಯಲ್ಲಿ 31 ವರ್ಷ ಸೇವೆ ಸಲ್ಲಿಸುವ ಸುಯೋಗ ನನಗೆ ಒದಗಿದ್ದು ವಿಶೇಷ. ಈ ಗ್ರಾಮದವರು ನನಗೆ ಆತ್ಮೀಯರಾಗಿದ್ದಾರೆ. ನನ್ನ ಕುಟುಂಬವಾಗಿದ್ದಾರೆ. ಅಪಾರ ಪ್ರೀತಿಯನ್ನು ನೀಡಿದ್ದಾರೆ. ನನಗೆ ಜಿಲ್ಲಾ ಉತ್ತಮ ಶಿಕ್ಷಕ, ರಾಜ್ಯ ಮಟ್ಟದ ಮೂರು ಪ್ರಶಸ್ತಿಗಳು, ರಾಷ್ಟ್ರ ಮಟ್ಟದ ಕನ್ನಡ ಸಿರಿ ಸಾಧಕ ಪ್ರಶಸ್ತಿ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳು ಲಭಿಸಿರುವುದು ಈ ಶಾಲೆಯಿಂದಲೇ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ ಎಂದರು.

ಮುಖ್ಯ ಶಿಕ್ಷಕಿ ಯಶೋಧ, ಶಿಕ್ಷಕರಾದ ಸುರೇಶ್, ನಿರ್ಮಲ, ರಾಣಿ, ಸುಮ ನಾಗೇಂದ್ರ, ಉಮೇಶ್, ಮಂಜುಳಾ, ಮಮತಾ, ಉಮ್ಮೆಅಸ್ಮಾ ಮುಖಂಡರಾದ ರಂಗಸ್ವಾಮಿ, ರಂಗದಾಸಯ್ಯ, ಜಯಣ್ಣ, ಮಹದೇವಯ್ಯ, ಲಿಂಗರಾಜು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಬರಗಿ ಗ್ರಾಮದಲ್ಲಿ ಶ್ರದ್ಧಾಭಕ್ತಿಯಿಂದ ನಡೆದ ಜಾತ್ರಾ ಮಹೋತ್ಸವ



ತಾಲೂಕಿನ ಬರಗಿ ಗ್ರಾಮದಲ್ಲಿ ಕಸಕಲಪುರ ಪಾರ್ವತಮ್ಮನವರ ಉತ್ಸವಮೂರ್ತಿಯನ್ನು ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಯಿತು.

ಗುಂಡ್ಲುಪೇಟೆ, ಜು–1 (ಸೋಮ್.ಜಿ)– ತಾಲೂಕಿನ ಬರಗಿ ಗ್ರಾಮದಲ್ಲಿ ಮಂಗಳವಾರ ಕಸಕಲಪುರ ಪಾರ್ವತಮ್ಮನವರ ಜಾತ್ರಾ ಮಹೋತ್ಸವ ಶ್ರದ್ಧಾಭಕ್ತಿಗಳಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಬಂಡೀಪುರ ಅರಣ್ಯದೊಳಗಿರುವ ಮೂಲ ದೇವಾಲಯಕ್ಕೆ ಮಂಗಳ ವಾದ್ಯ, ಸತ್ತಿಗೆ, ಸುರಿಪಾನಿ, ಬಿರುದು, ಬಾವಲಿಗಳೊಡನೆ ಹಲವು ಭಕ್ತರು ತೆರಳಿ ಪೂಜೆ ಸಲ್ಲಿಸಿ ದೇವರ ಪೆಟ್ಟಿಗೆ ಹಾಗೂ ಪ್ರಸಾದಗಳನ್ನು ಗ್ರಾಮದ ಬಸವೇಶ್ವರ ದೇವಾಲಯಕ್ಕೆ ತೆಗೆದುಕೊಂಡು ವಾಪಸ್ಸಾದರು. ನಂತರ ಮಂಗಳವಾರ ಗ್ರಾಮದಲ್ಲಿ ಪಾರ್ವತಮ್ಮನವರ ಉತ್ಸವ ಮೂರ್ತಿ ಹಾಗೂ ಗ್ರಾಮ ದೇವತೆಯನ್ನು, ಹೂವಿನ ಹೊದಿಕೆಯಿಂದ ಮುಚ್ಚಿದ ಪಲ್ಲಕ್ಕಿಯೊಳಗೆ ಕುದುರೆ ವಾಹನದ ಮೇಲೆ ಇಟ್ಟು ಮಂಗಳವಾದ್ಯಗಳು, ಸತ್ತಿಗೆ, ಸುರಿಪಾಣಿ ಬಿರುದು, ಬಾವಲಿಗಳೊಡನೆ ಊರಿನೊಳಗೆ ಮೆರವಣಿಗೆ ಮಾಡಲಾಯಿತು.

ಹರಕೆ ಹೊತ್ತವರು ಬಾಯಿಬೀಗ ಸೇರಿದಂತೆ ನಾನಾ ಸೇವೆಗಳನ್ನು ಸಲ್ಲಿಸಿದರು. ತಮ್ಮ ದನಗಳನ್ನು ರೋಗರುಜಿನಗಳಿಂದ ಪಾರುಮಾಡುವಂತೆ ಪ್ರಾರ್ಥಿಸಿ ಜಾನುವಾರುಗಳ ಕೊಂಬಿಗೆ ಪಂಜುಕಟ್ಟಿ ಮೆರವಣಿಗೆ ಮಾಡಿದರು. ಈ ಸಂದರ್ಭದಲ್ಲಿ ಸಹಸ್ರಾರು ಭಕ್ತರು ಪಾಲ್ಗೊಂಡರು. ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ನಗರದಲ್ಲಿ ದಸರಾ ಆಚರಿಸಲು ಕರವೇ ಮನವಿ



ದಸರಾವನ್ನು ಮುಂದುವರಿಸುವಂತೆ ಒತ್ತಾಯಿಸಿ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣ ಸಂಸದ ಸುನೀಲ್ ಬೋಸ್‌ರಿಗೆ ಮನವಿ ಸಲ್ಲಿಸಿತು.

ಚಾಮರಾಜನಗರ, ಜು. 1– ಚಾಮರಾಜನಗರದಲ್ಲಿ ದಸರಾ ಆಚರಣೆಯನ್ನು ಮುಂದುವರಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ ಬಣದ ತಾಲೂಕು ಘಟಕ ಸಂಸದ ಸುನೀಲ್ ಬೋಸ್ ಅವರಿಗೆ ಮನವಿ ಸಲ್ಲಿಸಿತು.

ಜಿಲ್ಲೆಯಲ್ಲಿ ಸತತವಾಗಿ 7 ವರ್ಷದಿಂದ ಸರ್ಕಾರ ಹಾಗೂ ಜಿಲ್ಲಾಡಳಿತ ವತಿಯಿಂದ. ದಸರಾ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಂಡು ಬಂದಿರುತ್ತಾರೆ. ಚಾಮರಾಜನಗರ ಮೈಸೂರಿನ ಅರಸರಾದ ಶ್ರೀ ಚಾಮರಾಜೇಂದ್ರ ಒಡೆಯರ್‌ರವರ ಜನ್ಮಸ್ಥಳವಾಗಿರುವುದರ ಜೊತೆಗೆ ಗಡಿ ಜಿಲ್ಲೆಯಾಗಿದ್ದು ಹಾಗೂ ಹಿಂದುಳಿದ ಜಿಲ್ಲೆಯೂ ಆಗಿದೆ ಈ ಜಿಲ್ಲೆಯಲ್ಲಿ ದಸರಾ ಆಚರಣೆ ಮಾಡುವುದರಿಂದ ಇಲ್ಲಿನ ಸ್ಥಳಿಯ ಎಲ್ಲಾ ವ್ಯಾಪಾರಸ್ಥರಿಗೂ ವ್ಯಾಪಾರವಾಗುತ್ತದೆ ಎಂದರು. ಪ್ರತಿವರ್ಷದಂತೆ ಈ ವರ್ಷವೂ ಅದ್ಧೂರಿಯಾಗಿ ದಸರಾ ಆಚರಣೆ ಮಾಡುವಂತೆ ಕರವೇ ತಾಲೂಕು ಅಧ್ಯಕ್ಷ ಕ್ವಾಲಿಟಿ ನವೀನ್ ಒತ್ತಾಯಿಸಿದ್ದಾರೆ. ತಾಲೂಕು ಉಪಾಧ್ಯಕ್ಷ ಅವಿನಾಶ್, ಟೌನ್ ಅಧ್ಯಕ್ಷ ಮಹೇಂದ್ರ, ಕಾರ್ಮಿಕ ಘಟಕದ ಅಧ್ಯಕ್ಷ ಹರೀಶ್ ನಾಯಕ, ಮಹೇಶ್ ಹಾಜರಿದ್ದರು.

ಜು. 7ರಂದು ಕೆಡಿಪಿ ಸಭೆ

ಚಾಮರಾಜನಗರ, ಜು.1– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯು ಜುಲೈ 7ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ನೂತನ ಕೆ.ಡಿ.ಪಿ. ಸಭಾಂಗಣದಲ್ಲಿ ನಿಗದಿಗೊಳಿಸಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾರೋತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಡಾ. ಫ.ಗು. ಹಳಕಟ್ಟಿ ಜನ್ಮದಿನ ಆಚರಣೆ


ಚಾಮರಾಜನಗರ, ಜು. 1–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಡಾ. ಫ.ಗು. ಹಳಕಟ್ಟಿಯವರ ಜನ್ಮ ದಿನ–ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ಜು. 2 ರ ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಶಂಕುಸ್ಥಾಪನೆ

ಚಾಮರಾಜನಗರ, ಜುಲೈ 1–ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಶಂಕುಸ್ಥಾಪನೆ ಹಾಗೂ ಫಲಾನುಭವಿಗಳಿಗೆ ಕೃಷಿ ಇಲಾಖೆಯಿಂದ ಸವಲತ್ತು ವಿತರಣಾ ಕಾರ್ಯಕ್ರಮವನ್ನು ಜುಲೈ 3ರ ಮಧ್ಯಾಹ್ನ 2.30 ಗಂಟೆಗೆ ಯಡಬೆಟ್ಟದಲ್ಲಿರುವ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಇದೇ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಬಾಲಕರು ಮತ್ತು ಬಾಲಕಿಯರ ವಸತಿ ನಿಲಯ ಹಾಗೂ ಗ್ರಂಥಾಲಯದ ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭವೂ ನಡೆಯುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಶಂಕುಸ್ಥಾಪನೆ ನೆರವೇರಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು.

ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು. ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಚಿಕ್ಕಸ್ವಾಮಿ, ಚಾಮರಾಜನಗರ ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ, ಶಿವಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹದೇವಮ್ಮ, ಅಮಚವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ತೇಜಸ್ವಿನಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕೃಷಿ ಇಲಾಖೆಯ ಕಾರ್ಯದರ್ಶಿ ಜೆ. ರವಿಶಂಕರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮೇಜರ್ ಪಿ. ಮಣಿವಣ್ಣನ್, ಕೃಷಿ ಇಲಾಖೆಯ ಆಯುಕ್ತ ವೈ. ಎಸ್. ಪಾಟೀಲ, ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್, ಕೃಷಿ ಇಲಾಖೆಯ ನಿರ್ದೇಶಕ ಡಾ. ಜಿ.ಟಿ ಪುತ್ರ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.



ಪರಿಹಾರದ ಚೆಕ್ ವಿತರಣೆ

ಪಟ್ಟಣದ ಮುಖ್ಯರಸ್ತೆಯಲ್ಲಿ ಹಲ್ಲೆಗೊಳಗಾಗಿ ಜೂ. 17ರಂದು ಸಾವಿಗೀಡಾದ ಶಿವು ಕುಟುಂಬಕ್ಕೆ ಸಮಾಜಕಲ್ಯಾಣ ಇಲಾಖೆಯಿಂದ ಮಂಜೂರಾದ 4 ಲಕ್ಷ ರೂಪಾಯಿಗಳ ಪರಿಹಾರದ ಚೆಕ್ಕನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ವಿತರಿಸಿದರು. ಪುರಸಭೆ ಅಧ್ಯಕ್ಷ ಮಧುಸೂಧನ್, ಮುಖಂಡರಾದ ಸುರೇಶ್, ದೊಡ್ಡಣ್ಣ, ಮಹದೇವನಾಯ್ಕ, ನಾಗೇಂದ್ರ ಇತರರು ಇದ್ದರು.

ಮದುವೆಗೆ ನಿರಾಕರಣೆ: ಯುವಕ ಆತ್ಮಹತ್ಯೆ

ಗುಂಡ್ಲುಪೇಟೆ, ಜು.1(ಸೋಮ್.ಜಿ)– ಪ್ರೀತಿಸುತ್ತಿದ್ದ ಯುವತಿ ಮದುವೆಯಾಗಲು ನಿರಾಕರಿಸಿದ್ದರಿಂದ ಮನನೊಂದ ಯುವಕನೊಬ್ಬ ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಬನ್ನಿತಾಳಪುರ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಮಹದೇವಶೆಟ್ಟಿ ಎಂಬುವರ ಪುತ್ರ ಸಂತೋಷ್ (24) ಮರಕ್ಕೆ ನೇಣುಹಾಕಿಕೊಂಡ ದುರ್ದೈವಿ.

ಮೃತ ಸಂತೋಷ್ ಚಾಮರಾಜನಗರ ತಾಲೂಕಿನ ಸಾಗಡೆ ಗ್ರಾಮದ ಯುವತಿಯೊಬ್ಬಳನ್ನು ಕಳೆದ ವರ್ಷದಿಂದ ಪ್ರೀತಿಸುತ್ತಿದ್ದನ್ನೆನ್ನಲಾಗಿದ್ದು, ಅವರ ಮನೆಗೆ ಹೋಗಿ ಕೇಳಿದಾಗ ಆಕೆ ಮದುವೆಯಾಗಲು ನಿರಾಕರಿಸಿದಳೆನ್ನಲಾಗಿದೆ. ಇದರಿಂದ ಬೇಸತ್ತ ಸಂತೋಷ್ ಚಾಮರಾಜನಗರಕ್ಕೆ ತೆರಳಿ ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಳ್ಳಲು ವಿಫಲ ಯತ್ನ ನಡೆಸಿ ಮನೆಗೆ ವಾಪಸ್ಸಾಗಿದ್ದಾನೆ. ನಂತರ ತಡರಾತ್ರಿ ಜಮೀನಿಗೆ ಹೋಗಿ ಮರಕ್ಕೆ ನೇಣುಹಾಕಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತನ ಸಹೋದರ ಸಂಪತ್ತು ನೀಡಿರುವ ದೂರು ದಾಖಲು ಮಾಡಿಕೊಂಡಿರುವ ತೆರಕಣಾಂಬಿ ಪೊಲೀಸರು ಶವದ ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ವಾರಸುದಾರರ ವಶಕ್ಕೊಪ್ಪಿಸಿದರು.

ಗೋಶಾಲೆಗಳಿಗೆ 51 ಲಕ್ಷ ದೇಣಿಗೆ ನೀಡಿದ ಮಹೇಂದ್ರ ಮುಣೋತ್



ಮೈಸೂರು: ನಟ, ನಿರ್ಮಾಪಕ ಮಹೇಂದ್ರ ಮುಣೋತ್ ಅವರು ಹಲವಾರು ವರ್ಷಗಳಿಂದ ಬಡಮಕ್ಕಳಿಗೆ ಬಟ್ಟೆ ಪುಸ್ತಕ ವಿತರಣೆ ಮಾಡುವುದಲ್ಲದೆ ಅನಾಥ ಗೋವುಗಳ ಸಂರಕ್ಷಣೆ ಮಾಡುತ್ತ ಬಂದಿದ್ದಾರೆ. ಅಲ್ಲದೆ ತಮ್ಮ ತಂದೆ ತಾಯಿಯ ಸ್ಮರಣಾರ್ಥ ಹಲವಾರು ಗೋಶಾಲೆಗಳಿಗೆ ದೇಣಿಗೆ ಕೂಡ ನೀಡುತ್ತಿದ್ದಾರೆ. ಈ ವರ್ಷವೂ ಸಹ 51 ಲಕ್ಷ ರೂ. ಹಣವನ್ನು ವಿವಿಧ ಗೋಶಾಲೆಗಳಿಗೆ ದೇಣಿಗೆಯಾಗಿ ನೀಡಿದ್ದಾರೆ.

ಅಮೃತಧಾರ ಗೋಶಾಲೆಯಲ್ಲಿ ನಡೆದ ಗೋಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹೇಂದ್ರ ಮುಣೋತ್ ಅವರು ತಮ್ಮ ತಂದೆ ಮೋತಿಲಾಲ್ ಮುನೋಟ್ ಅವರ ಸ್ಮರಣಾರ್ಥ ಗಿಡಗಳನ್ನು ನೆಟ್ಟು ಗೋಪೂಜೆ ನಡೆಸಿದರು ಮತ್ತು ಗೋವುಗಳ ಸೇವೆಗಾಗಿ ವಿವಿಧ ಗೋಶಾಲೆಗಳ ಮುಖ್ಯಸ್ಥರಿಗೆ 51 ಲಕ್ಷ ರೂ. ಹಣವನ್ನು ಚೆಕ್ ಮೂಲಕ ವಿತರಿಸಿದರು. ಈ ಸಂದರ್ಭದಲ್ಲಿ ಅವರ ಕುಟುಂಬಸ್ಥರಾದ ಮುನೋತ್ ಸುರಕ್ಷಾ ಮುನೋತ್, ಹಂಸರಾಜ್ ಭಾಗ್ಯವಂತಿ ಮುನೋತ್, ಆನಂದ್ ಸ್ನೇಹಾ ಮುನೋತ್ ಜತೆಗಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಮಹೇಂದ್ರ ಮುನೋತ್, ತಾಯಿ ಎಂದರೆ ಸತ್ಯ ಮತ್ತು ತಂದೆ ಎಂದರೆ ನಂಬಿಕೆ. ಅವರು ನಮ್ಮನ್ನು ಉತ್ತಮ ಮೌಲ್ಯಗಳಿಂದ ಪೋಷಿಸಿದ್ದಾರೆ. ಇಂದು ಅವರು ನಮ್ಮೊಂದಿಗೆ ಇಲ್ಲದಿದ್ದರೂ, ತಮ್ಮ ಮಕ್ಕಳ ಹೃದಯ ಮತ್ತು ಮೌಲ್ಯಗಳಲ್ಲಿ ಯಾವಾಗಲೂ ಜೀವಂತವಾಗಿರುತ್ತಾರೆ. ಪೋಷಕರ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದು ಮತ್ತು ಅವರ ಕನಸುಗಳನ್ನು ನನಸಾಗಿಸುವುದು ಮಕ್ಕಳಾದ ನಮ್ಮ ಕರ್ತವ್ಯವಾಗಿದೆ. ನನ್ನ ಹೆತ್ತವರು ರೈತರು ಮತ್ತು ನಾನು ಅವರಿಂದ ಗೋಸೇವೆಯ ಸ್ಫೂರ್ತಿ ಪಡೆದುಕೊಂಡೆ ಮತ್ತು ನನ್ನ ಕುಟುಂಬ ಅವರ ಕೆಲಸವನ್ನು ಮುಂದುವರಿಸುತ್ತಿದೆ ಎಂದು ಹೇಳಿದರು. ಹಸುವಿನ ಉಪಯುಕ್ತತೆಯನ್ನು ಪರಿಗಣಿಸಿ ಭಾರತ ಸರ್ಕಾರವು ಹಸುವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನ ನೀಡಬೇಕು ಎಂದವರು ಆಗ್ರಹಿಸಿದರು.

ಜ್ಞಾನ ಪ್ರತಿಷ್ಠಾನದ ಪ್ರತಿನಿಧಿಗಳು, ಕಾಮಧೇನು ಗೋಶಾಲ ಚಿಕ್ಕಮಗಳೂರು, ವಾಟ್ ಫೌಂಡೇಶನ್, ಆದರ್ಶ ಗೋಶಾಲ, ಶಿವಗೌ ಸೇವಾ ಭಜನಾ ಮಂಡಳಿ ಚಾರಿಟೆಬಲ್ ಟ್ರಸ್ಟ್, ಅಮೃತಧಾರ ಗೋಶಾಲ, ಕೃಷ್ಣ ಗೋಶಾಲ, ಸುರಭಿ ಗೋಶಾಲ, ಓಂಕಾರ ಗೋಶಾಲ, ಸರ್ವ, ಕೃಪಾ, ಕುಪಾ, ಭವಾನ ವೃಂದಾವನ, ಭವಾನ ವೃಂದಾವನ. ಬಾಣಾವರ, ಭಾರತೀಯ ಗೋವು ಪರಿವಾರ ಚಾರಿಟೆಬಲ್ ಟ್ರಸ್ಟ್ ಅರಸೀಕೆರೆ, ಶಾಂತಿನಾಥ ಜೈನ ಸಾರ್ವಜನಿಕ ಗೋಶಾಲ ಭೀಮ್ ಹಾಗೂ ರಾಜ್ಯದ ಹಲವಾರು ಗೋಶಾಲೆಗಳ ಮುಖ್ಯಸ್ಥರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬೈಕ್ ಟ್ಯಾಕ್ಸಿಗೆ ಬಿಗ್ ರಿಲೀಫ್: ಬೈಕ್ ಟ್ಯಾಕ್ಸಿ ಸೇವೆಗೆ ಖಾಸಗಿ ವಾಹನಗಳಿಗೆ ಅನುಮತಿ

ಕೇಂದ್ರದ ಹೊಸ ಮಾರ್ಗಸೂಚಿ; ರಾಪಿಡೊ ಸಂತಸ

ನವದೆಹಲಿ: ಕರ್ನಾಟಕದಲ್ಲಿ ಭಾರಿ ಸುದ್ದಿಗೆ ಗ್ರಾಸವಾಗಿ ಇತ್ತೀಚೆಗೆ ನಿಷೇಧಕ್ಕೊಳಗಾಗಿದ್ದ ಬೈಕ್ ಟ್ಯಾಕ್ಸಿ ಸೇವೆ ಕುರಿತು ಕೇಂದ್ರ ಸರ್ಕಾರ ಮಹತ್ವದ ಮಾರ್ಗಸೂಚಿ ಬಿಡುಗಡೆ ಮಾಡಿದೆ. ರಾಪಿಡೊ, ಉಬರ್ ಮತ್ತು ಓಲಾದಂತಹ ಬೈಕ್ ಟ್ಯಾಕ್ಸಿ ಪ್ಲಾಟ್‌ಫಾರ್ಮ್‌ಗಳಿಗೆ ಪರಿಹಾರವಾಗಿ, ಜುಲೈ 1 ರಂದು ಕೇಂದ್ರ ಸರ್ಕಾರ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರನ್ವಯ ಪ್ರಯಾಣಿಕರ ಸವಾರಿಗಳಿಗೆ ಸಾರಿಗೆಯೇತರ (ಖಾಸಗಿ) ಮೋಟಾರ್ ಸೈಕಲ್‌ಗಳ ಬಳಕೆಯನ್ನು ಅನುಮತಿ ನೀಡಲಾಗಿದೆ.

ಇಂದು ಹೊರಡಿಸಲಾದ ಕೇಂದ್ರದ ಮೋಟಾರು ವಾಹನ ಸಂಗ್ರಾಹಕ ಮಾರ್ಗಸೂಚಿಗಳು, 2025, ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು ಪ್ರಯಾಣಿಕರ ಸವಾರಿಗಳಿಗೆ ಸಾರಿಗೆಯೇತರ (ಖಾಸಗಿ) ಮೋಟಾರ್‌ಸೈಕಲ್‌ಗಳ ಬಳಕೆಯನ್ನು ಅನುಮತಿಸುತ್ತದೆ ಎನ್ನಲಾಗಿದೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಮೋಟಾರು ವಾಹನ ಸಂಗ್ರಾಹಕ ಮಾರ್ಗಸೂಚಿಗಳು 2025 ಅನ್ನು ಹೊರಡಿಸಿದ್ದು, ರಾಜ್ಯ ಸರ್ಕಾರಗಳು ಅಗ್ರಿಗೇಟರ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಪ್ರಯಾಣಿಕರನ್ನು ಸಾಗಿಸಲು ಸಾರಿಗೆಯೇತರ ಮೋಟಾರ್ ಸೈಕಲ್‌ಗಳನ್ನು (ಅಂದರೆ, ಖಾಸಗಿ ದ್ವಿಚಕ್ರ ವಾಹನಗಳು) ಬಳಸಲು ಅನುಮತಿ ನೀಡಬಹುದು ಎಂದು ಹೇಳಿದೆ.

ಮುಂದಿನ 7 ದಿನ ದೇಶಾದ್ಯಂತ ಭಾರಿ ಮಳೆ

ನವದೆಹಲಿ: ಜೂನ್ ತಿಂಗಳಲ್ಲಿ ಮಳೆ ದಾಖಲೆ ಬರೆದ ಬೆನ್ನಲ್ಲೇ ಇದೀಗ ಜುಲೈ ತಿಂಗಳ ಆರಂಭದಲ್ಲೇ ದೇಶಾದ್ಯಂತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಮುಂದಿನ 6–7 ದಿನಗಳವರೆಗೆ ಭಾರತದಾದ್ಯಂತ ಅತಿ ಹೆಚ್ಚು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಜುಲೈನಲ್ಲಿ ದೇಶದಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಮಧ್ಯ ಭಾರತ, ಉತ್ತರಾಖಂಡ ಮತ್ತು ಹರಿಯಾಣದ ಅಧಿಕಾರಿಗಳು ಮತ್ತು ಜನರು ಪ್ರವಾಹದ ಅಪಾಯದ ಕಾರಣ ಜಾಗರೂಕರಾಗಿರಲು ಎಚ್ಚರಿಕೆ ನೀಡಿದೆ.

ಶಿಕ್ಷಣ ಸಂಸ್ಥೆಗಳು ಮಕ್ಕಳ ನಾಯಕತ್ವ ಸಾಮರ್ಥ್ಯ ಉತ್ತೇಜಿಸುವ ವೇದಿಕೆ ನಿರ್ಮಿಸಬೇಕಿದೆ

ನೈಪುಣ್ಯ ಶಾಲೆಯಲ್ಲಿ 'ಪ್ರತಿಜ್ಞಾ ವಿಧಿ' ಕಾರ್ಯಕ್ರಮ



ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಕನಕದಾಸನಗರ ಕ್ಯಾಂಪಸ್‌ನಲ್ಲಿ ನಡೆದ ವಿದ್ಯಾರ್ಥಿ 'ಪ್ರತಿಜ್ಞಾ ವಿಧಿ' ಸಮಾರಂಭದಲ್ಲಿ ವಾಯುದಳದ ಫ್ಲೈಟ್ ಲೆಫ್ಟಿನೆಂಟ್ ಶ್ರೀಮತಿ ಶ್ರಾವಣಿ ಭಾರ್ಗವ್ ಭಾಗವಹಿಸಿದ್ದರು.

ಮೈಸೂರು, ಜು.1– ಪ್ರತಿ ಮಕ್ಕಳಲ್ಲೂ ನಾಯಕತ್ವದ ಸಾಮರ್ಥ್ಯ ಇದ್ದೇ ಇರುತ್ತದೆ. ಅದನ್ನು ಉತ್ತೇಜಿಸುವ ವೇದಿಕೆ ನಿರ್ಮಿಸುವುದು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದು ವಾಯುದಳದ ಫ್ಲೈಟ್ ಲೆಫ್ಟಿನೆಂಟ್ ಶ್ರೀಮತಿ ಶ್ರಾವಣಿ ಭಾರ್ಗವ್ ಹೇಳಿದರು.

ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಕನಕದಾಸನಗರ ಕ್ಯಾಂಪಸ್‌ನಲ್ಲಿ ನಡೆದ ವಿದ್ಯಾರ್ಥಿ 'ಪ್ರತಿಜ್ಞಾ ವಿಧಿ' ಸಮಾರಂಭದಲ್ಲಿ ಧ್ವಜವಂದನೆ ಸ್ವೀಕರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಕ್ರಿಯಾಶೀಲತೆಯಲ್ಲಿ ಬದ್ಧತೆ ಹೆಚ್ಚಿಸಲು ನಾಯಕತ್ವದ ಗುಣ ಪ್ರೋತ್ಸಾಹಿಸಬೇಕಾಗಿದೆ. ನಾಯಕತ್ವ ಗುಣ ಬೆಳೆಸಿಕೊಳ್ಳಲು ಪ್ರೇರೇಪಣೆ ನೀಡುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ. ಈ ನಿಟ್ಟಿನಲ್ಲಿ ಸಂಘಟನೆ, ಸಹಭಾಗಿತ್ವ ಹಾಗೂ ರಚನಾತ್ಮಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳೇ ಆಯೋಜಿಸುವಂತೆ ಸೂಕ್ತ ಮಾರ್ಗದರ್ಶನ ನೀಡಬೇಕಿದೆ ಎಂದರು.

ವಿಶ್ವದ ಮುಂಚೂಣಿ ರಾಷ್ಟ್ರಗಳಲ್ಲಿ ಭಾರತ ಅಗ್ರಸ್ಥಾನದತ್ತ ಮುನ್ನುಗ್ಗುತ್ತಿರುವ ಸಂದರ್ಭದಲ್ಲಿ ಭವಿಷ್ಯತ್ತಿನ ಜವಾಬ್ದಾರಿಯುತ ಪ್ರಜೆಗಳನ್ನು ರೂಪಿಸುವುದು ಶಿಕ್ಷಣ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ. ಹಿಂದೆಂದಿಗಿಂತಲೂ ಇಂದು ರಾಷ್ಟ್ರನಿಷ್ಠೆಯ ಸಮರ್ಪಣಾ ಗುಣ ಭವಿಷ್ಯತ್ತಿನ ಮಕ್ಕಳು ರೂಢಿಸಿಕೊಳ್ಳುವಂತಾಗಬೇಕು. ಇದಕ್ಕಾಗಿ ಶಿಸ್ತು, ಸಂಯಮ ಮೈಗೂಡಿಸಿಕೊಳ್ಳುವಂತೆ ಪ್ರೇರಣಾದಾಯಕ ಕಾರ್ಯಕ್ರಮಗಳು ಶಿಕ್ಷಣ ಚಟುವಟಿಕೆಯ ಭಾಗವಾಗಿಸಬೇಕು. ಮಕ್ಕಳಲ್ಲಿ ದೇಶಕಟ್ಟುವ ರಾಷ್ಟ್ರಪ್ರೇಮವನ್ನು ಪ್ರೇರೇಪಿಸಲು ಬೆಂಬಲವಾಗಿ ನಿಲ್ಲಬೇಕು ಎಂದು ತಿಳಿಸಿದರು.

ಹೀಗೆಯೇ ಆರ್.ಟಿ.ನಗರ ಕ್ಯಾಂಪಸ್‌ನಲ್ಲಿ ನಡೆದ ಪ್ರತಿಜ್ಞಾ ವಿಧಿ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ, ಕ್ರೀಡೆ ಮತ್ತು ವಿಜ್ಞಾನ ವಿಭಾಗದ ಪ್ರೊ.ಎಸ್. ಮದಿಅಲಗನ್ ಅವರು ಧ್ವಜವಂದನೆ ಸ್ವೀಕರಿಸುವ ಮೂಲಕ ಉದ್ಘಾಟಿಸಿದರು. ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದಕಗಳನ್ನು ತೊಡಿಸಿ, ಪ್ರತಿಜ್ಞಾ ನುಡಿ ಬೋಧಿಸಿ, ವಿವಿಧ ಹುದ್ದೆಗಳ ಜವಾಬ್ದಾರಿಯನ್ನು ವಹಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರಾದ ಮಹೇಂದ್ರ ಎಂ.ಎನ್., ಉಪ ಪ್ರಾಂಶುಪಾಲೆಯರಾದ ಶ್ರೀಮತಿ ಶೀನಾ ಗುರ್ನಾನಿ, ಶ್ರೀಮತಿ ಶಾಲಿನಿ ಮಾಜೋ, ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪದವಿ ಪ್ರದಾನ ಸಮಾರಂಭ ; 276 ಮಂದಿಗೆ ವಿವಿಧ ಪದವಿ, ಈ ಪೈಕಿ 12 ಮಂದಿಗೆ ಚಿನ್ನದ ಪದಕ

ಜೆನೆರಿಕ್ ಔಷಧ ಪೂರೈಕೆಯಲ್ಲಿ ಭಾರತಕ್ಕೆ ಅತಿದೊಡ್ಡ ಸ್ಥಾನ

ಭಾರತದ ಶೇ.40ರಷ್ಟು ಜೆನೆರಿಕ್ ಔಷಧಗಳು ಯುಎಸ್‌ನಲ್ಲಿ ಮಾರಾಟ ; ಹೈದರಾಬಾದ್‌ನ ಯುಎಸ್ ಫಾರ್ಮಾಕೋಪಿಯಾ ಇಂಡಿಯಾದ ಸೈಟ್ ಆಪರೇಷನ್‌ನ ಹಿರಿಯ ಉಪಾಧ್ಯಕ್ಷ ಡಾ.ಗಿರೀಶ್ ಕಪೂರ್ ಮಾಹಿತಿ



ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ 2024–25ನೇ ಸಾಲಿಗೆ ವಿವಿಧ ಪದವಿಗಳಿಗೆ ಭಾಜನರಾದ ವಿದ್ಯಾರ್ಥಿಗಳು ಹಾಗೂ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.1(ಪಿಎಂ)– ಭಾರತವು ಜೆನೆರಿಕ್ ಔಷಧಗಳ ಪೂರೈಕೆಯಲ್ಲಿ ಅತಿದೊಡ್ಡ ಸ್ಥಾನ ಹೊಂದಿದೆ. ಯುಎಸ್‌ನಲ್ಲಿ ಮಾರಾಟವಾಗುವ ಸುಮಾರು ಶೇ.40ರಷ್ಟು ಜೆನೆರಿಕ್ ಔಷಧಗಳು ಭಾರತದಿಂದ ರಫ್ತು ಆಗಿರುವುದಾಗಿದೆ ಎಂದು ಹೈದರಾಬಾದ್‌ನ ಯುಎಸ್‌ಪಿ (ಯುಎಸ್ ಫಾರ್ಮಾಕೋಪಿಯಾ) ಇಂಡಿಯಾದ ಸೈಟ್ ಆಪರೇಷನ್‌ನ ಹಿರಿಯ ಉಪಾಧ್ಯಕ್ಷ ಡಾ.ಗಿರೀಶ್ ಕಪೂರ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಅಧೀನದ ಜೆಎಸ್‌ಎಸ್ ಫಾರ್ಮಸಿ ಕಾಲೇಜು ವತಿಯಿಂದ 'ಸಮವರ್ತನ 3.0' ಶೀರ್ಷಿಕೆಯಡಿ ಮಂಗಳವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಜಾಗತಿಕ ಲಸಿಕೆ ಬೇಡಿಕೆಗೆ ಶೇ.60ರಷ್ಟು ಭಾರತೀಯ ಔಷಧಾಲಯದಿಂದ ಪೂರೈಕೆಯಾಗುತ್ತಿದೆ. ಜೊತೆಗೆ ಭಾರತವು ವಿಶ್ವದ ಔಷಧಾಲಯ ಎಂದೂ ಕರೆಯಲ್ಪಡುತ್ತದೆ. ಈ ಅಂಶಗಳು ಕೈಗೆಟಕುವ ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ನಮ್ಮ ದೇಶದ ಸಾಮರ್ಥ್ಯ ಹಾಗೂ ಸಮರ್ಪಣೆಯ ಪ್ರತಿಬಿಂಬವಾಗಿದೆ. ಭಾರತೀಯ ಔಷಧ ಮಾರುಕಟ್ಟೆಯು ಪ್ರಸ್ತುತ 52 ಶತಕೋಟಿ ಯುಎಸ್ ಡಾಲರ್‌ಗಳ ಮೌಲ್ಯ ಹೊಂದಿದೆ ಎಂದು ತಿಳಿಸಿದರು.

ಔಷಧ ವಿಜ್ಞಾನ ಒಂದು ಜವಾಬ್ದಾರಿಯುತ ಕ್ಷೇತ್ರ. ಹಾಗಾಗಿ ಫಾರ್ಮಸಿ ಪದವೀಧರರು, ವಿದ್ಯಾರ್ಥಿಗಳು ಈ ಕ್ಷೇತ್ರದ ಮಹತ್ವ ಅರಿಯಬೇಕು. ಪದವಿ ವ್ಯಾಸಂಗದ ಸಂದರ್ಭದಲ್ಲಿ ನೀವು ಎಷ್ಟೇ ಸಂಶೋಧನೆಗಳನ್ನು ಕೈಗೊಳ್ಳಬಹುದು. ಜೊತೆಗೆ ಆವಿಷ್ಕರಿಸಲೂಬಹುದು. ಔಷಧಗಳು ಮನುಷ್ಯನ ಒಳಿತಿಗೆ ಉಪಯೋಗವಾಗಬೇಕೆಂಬ ಅರಿವು ನಿಮ್ಮಲ್ಲಿರಬೇಕು. ಈ ಹಿನ್ನೆಲೆಯಲ್ಲಿ ಬಹಳ ಜಾಗರೂಕತೆಯಿಂದ ಅಭ್ಯಾಸ ಮಾಡಬೇಕು. ಆಗ ಮಾತ್ರ ಉತ್ತಮ ಫಲಿತಾಂಶ ಹೊರಹೊಮ್ಮಲು ಸಾಧ್ಯ ಎಂದು ನೂತನ ಪದವೀಧರರಿಗೆ ಸಲಹೆ ನೀಡಿದರು.

ಔಷಧ ವಿಜ್ಞಾನ ಫಲಿತಾಂಶ ಆಧಾರಿತ ವಲಯ. ಆದ್ದರಿಂದ ವ್ಯಾಸಂಗದ ಸಮಯದಲ್ಲೇ ಸೂಕ್ತ ತರಬೇತಿ ಹೊಂದಬೇಕು. ಜೊತೆಗೆ ಆಧುನಿಕ ತಂತ್ರಜ್ಞಾನದ ಕೌಶಲ ರೂಢಿಸಿಕೊಳ್ಳಬೇಕು. ಎಐ ತಂತ್ರಜ್ಞಾನದ ಬಳಕೆಯೊಂದಿಗೆ ಹೊಸ ವಿಧಾನಗಳನ್ನು ಅಭಿವೃದ್ಧಿಪಡಿಸಲು ನೀವು ಮಹತ್ತರ ಪಾತ್ರ ವಹಿಸಬೇಕು. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು ನಿಮ್ಮ ಭವಿಷ್ಯದ ದೃಷ್ಟಿಯಿಂದ ಬಹಳ ಒಳಿತು ಎಂದು ತಿಳಿ ಹೇಳಿದರು.

ಕ್ಲಿನಿಕಲ್ ಟ್ರಯಲ್‌ಗೆ ಒಳಗಾಗುವ ರೋಗಿಗಳ ಜೊತೆ ಸಮಯೋಚಿತವಾಗಿ ವರ್ತನೆ ಮಾಡುವುದು ಮುಖ್ಯ. ಅವರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕು. ಟ್ರಯಲ್‌ಗೆ ಒಳಗಾಗುವವರು ನಿಮ್ಮ ಅಭ್ಯಾಸ ಹಾಗೂ ಸಂಶೋಧನೆ–ಆವಿಷ್ಕಾರಕ್ಕೆ ಮೂಲಾಧಾರವಾಗಿರುತ್ತಾರೆ. ಅವರನ್ನು ಸರಿಯಾಗಿ ನೋಡಿಕೊಂಡರೆ ನಿಮ್ಮ ಸಂಶೋಧನೆಗೆ ಯಾವುದೇ ಅಡ್ಡಿ–ಆತಂಕ ಎದುರಾಗದು ಎಂದು ಕಿವಿಮಾತು ಹೇಳಿದರು.

ಔಷಧ ಕ್ಷೇತ್ರದ ಆವಿಷ್ಕಾರದಲ್ಲಿ ಒಂದೇ ದಿನಕ್ಕೆ ಫಲಿತಾಂಶ ಬರುವುದಿಲ್ಲ. ನೀವು ಕಂಡು ಹಿಡಿಯಬೇಕಾದ ಔಷಧವು ತಕ್ಕ ರೀತಿಯಲ್ಲಿ ಸಿದ್ಧಗೊಳ್ಳಲು ಹತ್ತು ವರ್ಷವೇ ಹಿಡಿಯಬಹುದು. ಇಪ್ಪತ್ತು ವರ್ಷವೇ ಆಗಬಹುದು. ಆದ್ದರಿಂದ ತಾಳ್ಮೆಯಿಂದ ಸಂಶೋಧನೆಯನ್ನು ಕೈಗೊಳ್ಳಬೇಕು. ಜೊತೆಗೆ ಇದಕ್ಕೆ ಮಾನಸಿಕವಾಗಿ ಸಿದ್ಧವಾಗಿರಬೇಕು. ಆಗ ಮಾತ್ರ ಉತ್ತಮ ಔಷಧವನ್ನು ನೀವು ಸಮಾಜಕ್ಕೆ ನೀಡಲು ಸಾಧ್ಯ ಎಂದರು.

2024–25ನೇ ಸಾಲಿಗೆ ಸಂಬಂಧಿಸಿದಂತೆ ಬಿ ಫಾರ್ಮ್‌ದಲ್ಲಿ 104, ಫಾರ್ಮ್ ಡಿಯಲ್ಲಿ 35, ಡಿ ಫಾರ್ಮ್‌ದಲ್ಲಿ 30 ಹಾಗೂ ಎಂ ಫಾರ್ಮ್‌ದಲ್ಲಿ 98 ಸೇರಿದಂತೆ ಒಟ್ಟು 276 ನೂತನ ಪದವೀಧರರು ಪದವಿ ಪ್ರಮಾಣಪತ್ರಗಳನ್ನು ಗಣ್ಯರಿಂದ ಸ್ವೀಕರಿಸಿದರು. ಈ ಪೈಕಿ 12 ಮಂದಿ ಶೈಕ್ಷಣಿಕ ಸಾಧನೆಗಾಗಿ ಚಿನ್ನದ ಪದಕಗಳಿಗೆ ಭಾಜನರಾದರು. ಡಿ.ಫಾರ್ಮ್‌ದಲ್ಲಿ ಎಂ.ಜೆ.ಸರೋಜ್, ಬಿ.ಫಾರ್ಮ್‌ದಲ್ಲಿ ಅನಿರುದ್ಧ್ ಕಾಮತ್, ಫಾರ್ಮ್ ಡಿದಲ್ಲಿ ಕಾಮಾಕ್ಷಿ ಶ್ರೇಯಾ, ಎಂ.ಫಾರ್ಮ್‌ದಲ್ಲಿ ಅಂಜು ಜೇಮ್ಸ್ (ಫಾರ್ಮಾಸ್ಯುಟಿಕ್ಸ್ ವಿಭಾಗ), ಔಷಧ ನಿಯಂತ್ರಣ ವ್ಯವಹಾರಗಳ ವಿಭಾಗದಲ್ಲಿ ಕಾಟಿಕಲಾ ತನ್ವಿ, ಔಷಧೀಯ ರಸಾಯನಶಾಸ್ತ್ರ ವಿಭಾಗದಲ್ಲಿ ಎಸ್.ಲಕ್ಷ್ಮೀ, ಫಾರ್ಮಾಸ್ಯುಟಿಕಲ್ ಕ್ವಾಲಿಟಿ ಅಶ್ಯೂರೆನ್ಸ್ ವಿಭಾಗದಲ್ಲಿ ಆರ್.ಮೇಘನಾ, ಆರ್.ದರ್ಶನ್, ಫಾರ್ಮಾಕಾಲಜಿ ವಿಭಾಗದಲ್ಲಿ ಜಿ.ಬಿಂದುಶ್ರೀ, ಕೈಗಾರಿಕಾ ಫಾರ್ಮಸಿ ವಿಭಾಗದಲ್ಲಿ ತುಮ್ಮೂರು ಜಯಶ್ರೀ ರೆಡ್ಡಿ, ಫಾರ್ಮಸಿ ಪ್ರಾಕ್ಟೀಸ್‌ನಲ್ಲಿ ಜಿ.ಶಿರಿಷಾ, ಬಯೋಟೆಕ್ನಾಲಜಿಯಲ್ಲಿ ಮೇಘಾ ಕುದ್ವಾಜೆ ಮತ್ತು ಫಾರ್ಮಾಕೊಗ್ನೋಸಿಯದಲ್ಲಿ ಹರ್ಷ ಪ್ರತಾಪ್ ಸಿಂಗ್ ಅವರು ತಮ್ಮ ಪದವಿಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಚಿನ್ನದ ಪದಕಗಳಿಗೆ ಭಾಜನರಾದರು.

ಇದೇ ವೇಳೆ ಕಾಲೇಜಿನ ಹಳೇ ವಿದ್ಯಾರ್ಥಿಗಳಾದ ವಿಜಯವಾಡದ ಸಿಗ್ಮಂಡ್ ಪ್ರೊಮೆಡಿಕಾದ ಸಿಇಓ ಕೆ.ವಿ.ಪಿ.ಅಮರ್ ಕುಮಾರ್, ಸುಪ್ರೀಂ ಫಾರ್ಮಸ್ಯೂಟಿಕಲ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ನಂಜನಗೂಡಿನ ನಿರ್ದೇಶಕ ಅಮಿತ್ ಸದಾನಂದ ರಾವ್ ಅವರನ್ನು ಸನ್ಮಾನಿಸಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ್, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸುಧೀಂದ್ರ ಭಟ್, ಡೀನ್ ಅಕಾಡೆಮಿ ಡೀನ್ ಡಾ.ವಿಶಾಲ್ ಕುಮಾರ್ ಗುಪ್ತಾ, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ. ಪ್ರಮೋದ್ ಕುಮಾರ್, ಉಪ ಪ್ರಾಂಶುಪಾಲ ಡಾ.ಜಿ.ವಿ.ಪೂಜಾರ್ ಮತ್ತಿತರರು ಹಾಜರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ವೈದ್ಯರ ದಿನ ಆಚರಣೆ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ನಡೆದ ವೈದ್ಯರ ದಿನಾಚರಣೆಯಲ್ಲಿ ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಎಂ.ಮಾದಪ್ಪ, ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್ ಸೇರಿದಂತೆ ಎಲ್ಲಾ ವೈದ್ಯರೂ ಭಾಗವಹಿಸಿದ್ದರು.

ಮೈಸೂರು, ಜು.1– ಮೈಸೂರಿನ ಸರಸ್ವತಿಪುರಂನಲ್ಲಿರುವ ಸಿಗ್ಮಾ ಆಸ್ಪತ್ರೆಯಲ್ಲಿ ವೈದ್ಯರ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್ ಮಾತನಾಡಿ, ವೈದ್ಯೋನಾರಾಯಣ ಹರಿ ಎಂದು ವೈದ್ಯರಲ್ಲಿ ದೇವರನ್ನು ಕಾಣಲಾಗುತ್ತಿದೆ. ನಮ್ಮ ಆಸ್ಪತ್ರೆ ವೈದ್ಯರು ಅತ್ಯಂತ ಶ್ರದ್ಧೆ, ಪರಿಶ್ರಮದ ಜೊತೆಗೆ ಅನುಕಂಪದಿಂದ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದಕ್ಕೆ ಹೆಮ್ಮೆ ಎನಿಸಿದೆ ಎಂದರು.

ನೆಫ್ರೊಲಜಿಸ್ಟ್ ಡಾ.ಅನಿಕೇತ್ ಪ್ರಭಾಕರ್ ಮಾತನಾಡಿ, ನಾವು ವರ್ಷವಿಡೀ ರೋಗಿಗಳ ಸೇವೆ ರೂಪದಲ್ಲಿ ವೈದ್ಯರ ದಿನ ಆಚರಿಸಿಕೊಂಡು ಬರುತ್ತೇವೆ. ಆದರೂ ವರ್ಷದಲ್ಲಿ ಒಂದು ದಿನ ಎಲ್ಲರೂ ಒಟ್ಟಿಗೆ ಸೇರಿ ವೈದ್ಯರ ದಿನ ಆಚರಿಸಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವುದು ಸಂತೋಷ ತಂದಿದೆ ಎಂದರೆ, ಪೆಥಾಲಜಿಸ್ಟ್ ಡಾ.ಶ್ರೀದೇವಿ ಅವರು, ಎಲ್ಲರೂ ಒಂದು ತಂಡವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ವೈದ್ಯರ ನಡುವೆ ಉತ್ತಮ ಬಾಂಧವ್ಯ, ಸಮನ್ವಯತೆ ಸೃಷ್ಟಿಯಾಗಿದೆ ಎಂದು ಹೇಳಿದರು.

ರೋಗಿಯ ಸಹಾಯಕರೊಬ್ಬರು ಮಾತನಾಡಿ, ನಾವು ಕಳೆದ ಎರಡು ತಿಂಗಳಿಂದ ಸಿಗ್ಮಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದೇವೆ ಎಂದು ಡಾ.ಮಾದಪ್ಪ ಹಾಗೂ ವೈದ್ಯರ ತಂಡಕ್ಕೆ ಧನ್ಯವಾದ ತಿಳಿಸಿದರು. ಇದೇ ವೇಳೆ ನಗರದ ದೇವರಾಜ ಅರಸು ರಸ್ತೆಯ ಕೋಟಕ್ ಬ್ಯಾಂಕ್‌ನ ಮ್ಯಾನೇಜರ್ ಮಹೇಂದ್ರ ಅವರು, ಆಸ್ಪತ್ರೆಯ ಡಾ.ಅನಿಕೇತ್ ಪ್ರಭಾಕರ್, ಡಾ.ಡಿ.ಎನ್.ಸೋಮಣ್ಣ, ಡಾ.ಶ್ರೀದೇವಿ ಹಗೂ ಡಾ.ಲೀಲಾವತಿ ಅವರನ್ನು ಅಭಿನಂದಿಸಿ, ಎಲ್ಲರಿಗೂ ಶುಭಾಶಯ ಕೋರಿದರು.

ಆಸ್ಪತ್ರೆಯ ನಿರ್ದೇಶಕರೂ ಆದ ಕಿಡ್ನಿ ಕಸಿ ತಜ್ಞ ಡಾ.ಕೆ.ಎಂ.ಮಾದಪ್ಪನವರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಫಿಜಿಷಿಯನ್ ಡಾ.ರಾಕೇಶ್ ರಾಜೇ ಅರಸ್, ಮಕ್ಕಳ ತಜ್ಞರಾದ ಡಾ.ಎಂ.ಎಸ್.ಕನ್ಯಾ, ಮೂಳೆತಜ್ಞ ಡಾ.ದೇವಾಂಶುಗುಪ್ತಾ, ಡಾ.ಮಮತಾ, ಡಾ.ರಾಘವೇಂದ್ರ ಸೇರಿದಂತೆ ಎಲ್ಲಾ ವೈದ್ಯರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

'ಮಾಲ್ ಆಫ್ ಮೈಸೂರು' ನಾಳೆಯಿಂದ 4 ದಿನ ಎಂಡ್ ಆಫ್ ಸೀಸನ್ ಸೇಲ್

ಮೈಸೂರು, ಜು.1– ಮೈಸೂರಿನ 'ಮಾಲ್ ಆಫ್ ಮೈಸೂರು' ಜು.3 ರಿಂದ 6ರವರೆಗೆ ಎಂಡ್ ಆಫ್ ಸೀಸನ್ ಸೇಲ್ ಘೋಷಿಸಿದೆ.

ಈ ಮೂರು ದಿನಗಳಲ್ಲಿ ಮಧ್ಯಾಹ್ನ 12ರಿಂದ ರಾತ್ರಿ 8ರವರೆಗೆ ಟಾಪ್ ಬ್ರಾಂಡ್ ಉತ್ಪನ್ನಗಳ ಮೇಲೆ ಶೇ.50ರಷ್ಟು ರಿಯಾಯಿತಿ ದೊರಕಲಿದೆ. ಖರೀದಿ ಜೊತೆಗೆ ಬಹುಮಾನಗಳನ್ನೂ ಪಡೆಯುವ ಅವಕಾಶವನ್ನು ಗ್ರಾಹಕರಿಗೆ ಕಲ್ಪಿಸಲಾಗಿದೆ. 5 ಸಾವಿರ ಮೌಲ್ಯದ ವಸ್ತುಗಳ ಖರೀದಿಸಿದರೆ ಬ್ಲೂಟೂತ್ ಸ್ಪೀಕರ್, 15 ಸಾವಿರದಷ್ಟು ಖರೀದಿಸಿದರೆ ಪ್ರೀಮಿಯಂ ಫ್ಲಾಸ್ಕ್ ಹಾಗೂ 30 ಸಾವಿರ ರೂ. ವಸ್ತು ಖರೀದಿಸಿದರೆ ಹೈ ಕ್ವಾಲಿಟಿ ಸೌಂಡ್ಬಾರ್ ದೊರೆಯಲಿದೆ. ಯಾವುದೇ ಲಕ್ಕಿ ಡ್ರಾ ಇರುವುದಿಲ್ಲ. ಯಾವುದೇ ಷರತ್ತುಗಳಿಲ್ಲದೆ ಶಾಪಿಂಗ್‌ಗೆ ನಿಗದಿತ ಬಹುಮಾನವನ್ನು ಖಚಿತವಾಗಿ ಪಡೆಯಬಹುದು. ಫ್ಯಾಷನ್, ಬ್ಯೂಟಿ, ಎಲೆಕ್ಟ್ರಾನಿಕ್ಸ್, ಹೋಮ್ ಡೆಕೋರ್ ಸಂಬಂಧಿತ ಖರೀದಿಗೂ ಈ ಸೀಸನ್ ಸೇಲ್ ಅನ್ವಯವಾಗಲಿದ್ದು, ಹೆಚ್ಚಿನ ಮಾಹಿತಿಗೆ 7019140840 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಾಮುಂಡೇಶ್ವರಿ ದರ್ಶನ



ನಟ ಶಿವರಾಜ್‌ಕುಮಾರ್ ಹಾಗೂ ಗೀತಾ ದಂಪತಿ ಮಂಗಳವಾರ ರಾತ್ರಿ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ದೇವಿಯ ದರ್ಶನ ಪಡೆದರು.


ಇತ್ತೀಚೆಗೆ ಹೃದಯಾಘಾತ ಪ್ರಕರಣಗಳ ಹೆಚ್ಚಳ

ಜು.5ಕ್ಕೆ ಮೈಸೂರು ಜಯದೇವ ಆಸ್ಪತ್ರೆಯಲ್ಲಿ ತಜ್ಞರ ಸಭೆ; ಅಧ್ಯಯನ ರೂಪುರೇಷೆ ನಿರ್ಧಾರ

ಮೈಸೂರು, ಜು.1(ಎಸ್‌ಬಿಡಿ)– ಚಿಕ್ಕ ವಯಸ್ಸಿನವರೂ ಹೃದಯಾಘಾತಕ್ಕೆ ತುತ್ತಾಗಲು ಕಾರಣಗಳನ್ನು ಪತ್ತೆಹಚ್ಚುವ ನಿಟ್ಟಿನಲ್ಲಿ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಸೇರಿದಂತೆ ಹೃದ್ರೋಗಕ್ಕೆ ಚಿಕಿತ್ಸೆ ನೀಡುವ ಎಲ್ಲಾ ಆಸ್ಪತ್ರೆಗಳೂ ಜಂಟಿ ಅಧ್ಯಯನಕ್ಕೆ ಮುಂದಾಗಿವೆ.

ಈ ಬಗ್ಗೆ ಜಯದೇವ ಹೃದ್ರೋಗ ಸಂಸ್ಥೆ ಮೈಸೂರು ಘಟಕದ ಮುಖ್ಯಸ್ಥರಾದ ಡಾ.ಕೆ.ಎಸ್.ಸದಾನಂದ ಅವರು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಚಿಕ್ಕ ವಯಸ್ಸಿನವರೂ ಹೃದಯಾಘಾತವಾಗುತ್ತಿರುವುದಕ್ಕೆ ಕಾರಣಗಳನ್ನು ಪತ್ತೆ ಹಚ್ಚುವ ಪ್ರಯತ್ನ ಮಾಡಲಾಗಿದೆ. ಜಂಟಿ ಅಧ್ಯಯನದಲ್ಲಿ ಕಾರಣಗಳ ಪತ್ತೆ ಜೊತೆಗೆ ಪರಿಹಾರೋಪಾಯಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವ ಉದ್ದೇಶವಿದೆ. ಈ ನಿಟ್ಟಿನಲ್ಲಿ ಹೃದ್ರೋಗ ಚಿಕಿತ್ಸೆ ನೀಡುವ ಮೈಸೂರಿನ 8ಕ್ಕೂ ಹೆಚ್ಚು ಆಸ್ಪತ್ರೆಗಳ ಪ್ರತಿನಿಧಿಗಳು ಮುಂದಿನ ಶನಿವಾರ ಜಯದೇವ ಆಸ್ಪತ್ರೆಯಲ್ಲಿ ಸಭೆ ನಡೆಸಿ, ಅಧ್ಯಯನದ ರೂಪರೇಷೆ ಬಗ್ಗೆ ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ ಸರಣಿ ಸಾವು ಸಂಭವಿಸುತ್ತಿದ್ದು, ಒಂದೂವರೆ ತಿಂಗಳಲ್ಲಿ 24 ಮಂದಿ ನಿಧನರಾಗಿ ದ್ದಾರೆ. ಇವರಲ್ಲಿ ಬಹುತೇಕರು ಚಿಕ್ಕ ವಯಸ್ಸಿನವರು ಎಂಬುದು ಆತಂಕಕಾರಿ ಸಂಗತಿ. ಈ ಸರಣಿ ಸಾವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಅಧ್ಯಯನಕ್ಕೆ ಮುಂದಾಗಿದೆ. ಸರಣಿ ಸಾವಿಗೆ ನಿಖರ ಕಾರಣವನ್ನು ಪತ್ತೆ ಹಚ್ಚಿ, ಅದಕ್ಕೆ ಪರಿಹಾರ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ರವೀಂದ್ರನಾಥ್ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿ, 10 ದಿನಗಳ ಒಳಗಾಗಿ ಅಧ್ಯಯನ ವರದಿ ನೀಡುವಂತೆ ಸೂಚಿಸಿದೆ.



ಡಾ.ಸದಾನಂದ

ಈ ನಡುವೆ ಮೈಸೂರಿನ ಆಸ್ಪತ್ರೆಗಳೂ ಈ ಸಂಬಂಧ ಜಂಟಿ ಅಧ್ಯಯನಕ್ಕೆ ಮಹತ್ವದ ನಿರ್ಧಾರ ಕೈಗೊಂಡಿವೆ. ಮತ್ತೊಂದೆಡೆ ಜಯದೇವ ಸಂಸ್ಥೆಯ ಮಾಜಿ ನಿರ್ದೇಶಕರೂ ಆದ ಸಂಸದ ಡಾ.ಸಿ.ಎನ್. ಮಂಜುನಾಥ್ ಅವರೂ ಈ ಸಂಬಂಧ ಪ್ರಧಾನಿ ಮೋದಿ ಅವರಿಗೆ ವರದಿ ಸಲ್ಲಿಸಿ, ಕರ್ನಾಟಕದಲ್ಲಿ ಹೃದಯಾಘಾತ ಹೆಚ್ಚುತ್ತಿರುವ ಬಗ್ಗೆ ಕೇಂದ್ರ ಹಾಗೂ ರಾಜ್ಯ ಆರೋಗ್ಯ ಇಲಾಖೆ ಸಹಯೋಗದಲ್ಲಿ ಪರಿಣಾಮಕಾರಿ ಅಧ್ಯಯನ ನಡೆಸಲು ಮನವಿ ಮಾಡಲಿದ್ದಾರೆಂದು ಹೇಳಲಾಗುತ್ತಿದೆ.

ವೈದ್ಯರಿಗೂ ಒಗಟಾಗಿದೆ...

ಧೂಮಪಾನ, ಮಧುಮೇಹ, ರಕ್ತದೊತ್ತಡ, ಕೊಲೆಸ್ಟ್ರಾಲ್‌ನಿಂದಾಗಿ ಹೃದಯಾಘಾತವಾಗಬಹುದು. ವೈದ್ಯಕೀಯ ತಪಾಸಣೆಗೊಳಪಡುವ ಯುವಕರಲ್ಲಿ ಇದೆಲ್ಲವೂ ಹೆಚ್ಚಾಗಿ ಕಂಡುಬರುತ್ತಿದೆ. ಆದರೆ ಯಾವುದೇ ಅಭ್ಯಾಸಗಳಿಲ್ಲದೆ ಆರೋಗ್ಯದಿಂದಿರುವ 18–20 ವರ್ಷದವರೂ ಹೃದಯಾಘಾತಕ್ಕೆ ತುತ್ತಾಗುತ್ತಿರುವುದು ವೈದ್ಯರಿಗೂ ಒಗಟಾಗಿ ಪರಿಣಮಿಸಿದೆ. ಅಧ್ಯಯನದ ಮೂಲಕವೇ ನಿಖರ ಕಾರಣಗಳನ್ನು ಪತ್ತೆಹಚ್ಚಬೇಕಿದೆ. ವಾಯುಮಾಲಿನ್ಯ, ಮೈಕ್ರೋ ಪ್ಲಾಸ್ಟಿಕ್ ಬಳಕೆ, ಅಡುಗೆ ಎಣ್ಣೆ ಕಲಬೆರಕೆ, ಕಲುಷಿತ ನೀರು, ರಾಸಾಯನಿಕ ಗೊಬ್ಬರ ಬಳಕೆಯೂ ಕಾರಣವಿರಬಹುದು. ಕೋವಿಡ್ ನಂತರ ಹೃದಯಾಘಾತ ಪ್ರಕರಣಗಳು ಹೆಚ್ಚಿವೆ ಎಂಬ ವಾದವೂ ಇದೆ. ಇದೆಲ್ಲದರ ಬಗ್ಗೆ ಸರ್ಕಾರ ಸಮಗ್ರ ಅಧ್ಯಯನ ನಡೆಸಿ, ಪರಿಹಾರ ಕ್ರಮಗಳನ್ನು ಪರಿಣಾಮಕಾರಿಯಾಗಿ ತೆಗೆದುಕೊಳ್ಳಬೇಕಿದೆ ಎಂದು ತಿಳಿಸಿದ್ದಾರೆ.

ಹಾಸನದಿಂದ ನೂರಾರು ಮಂದಿ: ಹಾಸನದಲ್ಲಿ ಸರಣಿ ಹೃದಯಾಘಾತ ಪ್ರಕರಣಗಳಿಂದಾಗಿ ಯುವ ಜನತೆ ಪ್ಯಾನಿಕ್(ಆತಂಕ) ಆಗಿದ್ದಾರೆ. ಪುನೀತ್ ರಾಜ್‌ಕುಮಾರ್ ಹೃದಯಾಘಾತದಿಂದ ಸಾವನ್ನಪ್ಪಿದ ಸಂದರ್ಭದಲ್ಲಾಗಿದ್ದ ಪರಿಸ್ಥಿತಿ ಮತ್ತೆ ಸೃಷ್ಟಿಯಾಗಿದೆ. ಮೈಸೂರಿನ ಜಯದೇವ ಆಸ್ಪತ್ರೆಗೆ ಕಳೆದ 8–10 ದಿನಗಳಿಂದ ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ತಪಾಸಣೆಗೆ ಬರುತ್ತಿದ್ದಾರೆ. ಹಾಸನ ಜಿಲ್ಲೆಯಿಂದಲೇ ನಿತ್ಯ 250ಕ್ಕೂ ಹೆಚ್ಚು ಮಂದಿ ತಪಾಸಣೆ ಮಾಡಿಸಿಕೊಳ್ಳುತ್ತಿದ್ದಾರೆ. ಪರೀಕ್ಷೆ ಮಾಡಿದ ನಂತರ ಅವರಿಗೆ ಧೈರ್ಯ ಹೇಳಿ ಕಳುಹಿಸುತ್ತಿದ್ದೇವೆ ಎಂದು ಡಾ.ಕೆ.ಎಸ್.ಸದಾನಂದ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ತಿಂಗಳಲ್ಲಿ ನೂರು ಮಂದಿ ಸಾವು: ನಾಲ್ಕೈದು ವರ್ಷಗಳಿಂದ ಚಿಕ್ಕವಯಸ್ಸಿನವರಲ್ಲಿ ಹೃದಯಾಘಾತ ಪ್ರಮಾಣ ಜಾಸ್ತಿಯಾಗಿದೆ. ಪ್ರತಿದಿನ ಮೈಸೂರಿನ ಜಯದೇವ ಆಸ್ಪತ್ರೆಗೆ ಮೂರ್ನಾಲ್ಕು ಮಂದಿ 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಒಳರೋಗಿಯಾಗಿ ದಾಖಲಾಗುತ್ತಿದ್ದಾರೆ. ಇತ್ತೀಚೆಗೆ ತಿಂಗಳಲ್ಲಿ 700–800 ರೋಗಿಗಳು ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗುತ್ತಿದ್ದು, ಇವರಲ್ಲಿ ಶೇ.10 ರಷ್ಟು ಜನ ಅಂದರೆ 70–80 ಜನ ಸಾವನ್ನಪ್ಪುತ್ತಿದ್ದಾರೆ. ಇನ್ನು 20–30 ಜನ ಆಸ್ಪತ್ರೆ ತಲುಪುವ ಮುನ್ನವೇ ಸಾವನ್ನಪ್ಪುತ್ತಿದ್ದಾರೆ. ತೀವ್ರವಾಗಿ ಹೃದಯಾಘಾತವಾದವರು ಹಾಗೂ ಚಿಂತಾಜನಕ ಸ್ಥಿತಿಯಲ್ಲಿ ಬೇರೆಡೆಯಿಂದ ಬರುವುದರಿಂದ ನಮ್ಮ ಆಸ್ಪತ್ರೆಯಲ್ಲಿ ಸಾವಿನ ಪ್ರಮಾಣ ಜಾಸ್ತಿ ಇದೆ ಎಂದಿದ್ದಾರೆ.



ವೈಯುಕ್ತಿಕ ನಿಗಾ ಮುಖ್ಯ: ಪ್ರತಿಯೊಬ್ಬರೂ ಪ್ರತಿನಿತ್ಯ ಕನಿಷ್ಠ ಅರ್ಧ ಗಂಟೆಯಾದರೂ ವ್ಯಾಯಾಮ ಮಾಡಬೇಕು. ಉತ್ತಮ ಆಹಾರ ಸೇವನೆ ಮಾಡಬೇಕು. ಜಂಕ್ ಫುಡ್, ಅಧಿಕ ಸಕ್ಕರೆಯುಳ್ಳ ಹಾಗೂ ಎಣ್ಣೆಯಲ್ಲಿ ಕರಿದಿರುವ ಪದಾರ್ಥಗಳನ್ನು ಹೆಚ್ಚು ಸೇವಿಸಬಾರದು. ಪ್ರತಿದಿನ ಏಳೆಂಟು ಗಂಟೆ ನಿದ್ರೆ ಮಾಡಬೇಕು. ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳಬೇಕು. ವರ್ಷಕ್ಕೆ ಒಮ್ಮೆಯಾದರೂ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕು. ಎದೆ ನೋವು ಕಾಣಿಸಿಕೊಂಡರೆ ಆದಷ್ಟು ಬೇಗ ಬಂದರೆ ರಕ್ತ ಪರೀಕ್ಷೆ, ಇಸಿಜಿ ಮಾಡಿ ಹೃದಯಾಘಾತವಾಗಿದೆಯೇ ಎನ್ನುವುದನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಸಹಾಯವಾಗುತ್ತದೆ ಎಂದು ಸಲಹೆ ನೀಡಿದ್ದಾರೆ.

ಸಂಪುಟ ಪುನರ್‌ರಚನೆ ವೇಳೆ ಉಪ್ಪಾರ ಜನಾಂಗದ

ಶಾಸಕ ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಿ

ಕಾಂಗ್ರೆಸ್ ವರಿಷ್ಠರಿಗೆ ಉಪ್ಪಾರ ಮಹಾಸಭಾ ಅಧ್ಯಕ್ಷ ಮಹದೇವಶೆಟ್ಟಿ ಒತ್ತಾಯ

ತಿ.ನರಸೀಪುರ, ಜು.1– ಸಂಪುಟ ಪುನರ್ರಚನೆ ವೇಳೆ ಉಪ್ಪಾರ ಜನಾಂಗದ ಏಕೈಕ ಶಾಸಕರಾಗಿರುವ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಉಪ್ಪಾರ ಮಹಾಸಭಾ ಅಧ್ಯಕ್ಷ ಕಾವೇರಿಪುರ ಮಹದೇವಶೆಟ್ಟಿ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತ 4 ಬಾರಿ ಶಾಸಕರಾಗಿರುವ ಉಪ್ಪಾರ ಸಮಾಜದ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸಂಪುಟದಲ್ಲಿ ಈ ಹಿಂದೆ 6 ರಿಂದ 7 ತಿಂಗಳು ಮಾತ್ರ ಸಚಿವ ಸ್ಥಾನ ನೀಡಲಾಗಿತ್ತು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಅವರು ಸಚಿವ ಸ್ಥಾನ ಕಳೆದುಕೊಳ್ಳುವಂತಾಯಿತು. ರಾಜ್ಯದ 30 ಕ್ಷೇತ್ರಗಳಲ್ಲಿ ಉಪ್ಪಾರ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ ಅವರಿಗೆ ಸಂಪುಟ ಪುನರ್ರಚನೆ ವೇಳೆ ಸಚಿವ ಸ್ಥಾನ ನೀಡುವ ಮೂಲಕ ಅತಿ ಹಿಂದುಳಿದ ಸಮಾಜಕ್ಕೆ ರಾಜಕೀಯ ಸ್ಥಾನ ಮಾನ ನೀಡಿ ಸಮಾಜದ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಪ್ಪಸ್ವಾಮಿ ಮಾತನಾಡಿ, 2008ರಿಂದ ಸತತವಾಗಿ ಚಾಮರಾಜನಗರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗುತ್ತಿರುವ ಪುಟ್ಟರಂಗಶೆಟ್ಟರು ಕಳೆದ ಚುನಾವಣೆಯಲ್ಲಿ ಪ್ರಬಲ ಸಮಾಜಕ್ಕೆ ಸೇರಿದ ಸೋಮಣ್ಣ ಅವರನ್ನು ಮಣಿಸಿ ಅಭೂತ ಪೂರ್ವ ಜಯಗಳಿಸಿದ್ದರು. ಉಪ್ಪಾರ ಸಮಾಜ ಹಿಂದುಳಿದ ಸಮಾಜವಾಗಿದ್ದು, ಸಚಿವರಾಗಿ ಅನುಭವ ಹೊಂದಿರುವ ಪುಟ್ಟರಂಗಶೆಟ್ಟರ ಹೆಸರು ಮೊದಲನೇ ಪಟ್ಟಿಯಲ್ಲೇ ಪ್ರಕಟವಾಗಲಿದೆ ಎಂದು ಹೇಳಲಾಗುತ್ತಿದ್ದಾರೂ ಅದು ಹುಸಿಯಾಯಿತು. ಹೀಗಾಗಿ ರಾಜ್ಯದ ಏಕೈಕ ಉಪ್ಪಾರ ಸಮಾಜದ ಶಾಸಕರಾಗಿರುವ ಪುಟ್ಟರಂಗಶೆಟ್ಟರಿಗೆ ಮುಂಬರುವ ಸಚಿವ ಸಂಪುಟ ಪುನರ್ರಚನೆ ವೇಳೆ ಸಚಿವ ಸ್ಥಾನ ನೀಡಿದರೆ, ಸಮಾಜಕ್ಕೆ ರಾಜಕೀಯ ಶಕ್ತಿ ಕೊಟ್ಟಂತಾಗುತ್ತದೆ. ರಾಜ್ಯದಲ್ಲಿ ಅತಿ ಹಿಂದುಳಿದ ಸಮಾಜವಾದ ನಾವು 30 ರಿಂದ 40 ಲಕ್ಷ ಸಂಖ್ಯೆಯಲ್ಲಿದ್ದರೂ ಒಬ್ಬರೇ ಒಬ್ಬರು ಸಚಿವರು ಸಮಾಜವನ್ನು ಪ್ರತಿನಿಧಿಸದಿರುವುದು ಬೇಸರ ತರಿಸಿದೆ. ಯಾವುದೇ ಪಕ್ಷ ನಮ್ಮನ್ನು ಗುರುತಿಸಿ ಟಿಕೆಟ್ ನೀಡಿಲ್ಲ. ಕಾಂಗ್ರೆಸ್ ಪಕ್ಷ ನಮ್ಮ ಜನಾಂಗಕ್ಕೆ ಟಿಕೆಟ್ ನೀಡಿದೆ.ಈ ಬಾರಿಯಾದರೂ ಪುಟ್ಟರಂಗಶೆಟ್ಟರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ದೊರಕಿಸಿಕೊಡುವಂತೆ ಕಾಂಗ್ರೆಸ್ ವರಿಷ್ಠರಾದ ಸೋನಿಯಾಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಎಪಿಎಂಸಿ ಮಾಜಿ ಸದಸ್ಯ ಮಾವಿನಹಳ್ಳಿ ಪುಟ್ಟಸ್ವಾಮಿ, ಸಂಘದ ಕಾರ್ಯದರ್ಶಿ ಚಿನ್ನಸ್ವಾಮಿ, ಖಜಾಂಚಿ ಕೆ.ಕೃಷ್ಣಪ್ಪ, ರಾಜೇಶ್ ಮೂರ್ತಿ, ಹೊಸಹಳ್ಳಿ ಮೋಳೆ ಶಂಕರ, ಎಂ.ಬಿ. ಪುಟ್ಟಸ್ವಾಮಿ, ಕೆಂಪಯ್ಯನಹುಂಡಿ ಮಹೇಶ್, ಮಹದೇವ, ಟಗರುಪುರ ಮೋಳೆ ಸೋಮಣ್ಣ, ಗ್ರಾಪಂ ಸದಸ್ಯರಾದ ಉಮೇಶ್, ರಾಮು, ಬಸವರಾಜು ಹಾಜರಿದ್ದರು.



ಸುದ್ದಿಗೋಷ್ಠಿಯಲ್ಲಿ ಉಪ್ಪಾರ ಮಹಾಸಭಾ ಅಧ್ಯಕ್ಷ ಮಹದೇವಶೆಟ್ಟಿ ಮಾತನಾಡಿದರು.

ಈ ಹಿಂದೆ ಸಚಿವ ಸ್ಥಾನ ಹಂಚಿಕೆ ವೇಳೆ ಲಾಬಿ ಮಾಡಲು ದೆಹಲಿಗೆ ಹೋಗಿದ್ದ ಪುಟ್ಟರಂಗಶೆಟ್ಟರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರ ಪಟ್ಟಿಯಲ್ಲಿ ನಿನ್ನ ಹೆಸರಿದೆ. ನೀನು ಬೆಂಗಳೂರಿಗೆ ಹೋಗು ಎಂದು ದೆಹಲಿಯಿಂದ ಬೆಂಗಳೂರಿಗೆ ಕಳುಹಿಸಿದ್ದರು. ಪುಟ್ಟರಂಗಶೆಟ್ಟರು ಬೆಂಗಳೂರಿಗೆ ಬರುವಷ್ಟರಲ್ಲಿ ಪಟ್ಟಿಯಲ್ಲಿದ್ದ ಅವರ ಹೆಸರನ್ನು ತೆಗೆದುಹಾಕಲಾಗಿತ್ತು. ಈ ಬೆಳವಣಿಗೆಯಿಂದ ಬೇಸತ್ತಿದ್ದ ಉಪ್ಪಾರರು ಪ್ರತಿಭಟನೆಗೆ ಮುಂದಾಗಿದ್ದ ವೇಳೆ ಸ್ವತಃ ಸಿದ್ದರಾಮಯ್ಯ ಅವರೇ ಪುಟ್ಟರಂಗಶೆಟ್ಟರಿಗೆ ಮುಂದೆ ಅವಕಾಶ ಕಲ್ಪಿಸಿಕೊಡುವ ಭರವಸೆ ನೀಡಿದ್ದರು. ಹಾಗಾಗಿ ಈಗ ಮತ್ತೆ ಸಚಿವ ಸಂಪುಟ ಪುನರ್ರಚನೆ ಮಾತು ಕೇಳಿ ಬರುತ್ತಿದ್ದು, ಈಗಲಾದರೂ ಅತಿ ಹಿಂದುಳಿದ ಜನಾಂಗದ ಶಾಸಕರಾದ ಶೆಟ್ಟರಿಗೆ ಸಂಪುಟದಲ್ಲಿ ಸ್ಥಾನ ನೀಡಬೇಕು. – ಮಹದೇವಶೆಟ್ಟಿ, ಉಪ್ಪಾರ ಮಹಾಸಭಾ ಅಧ್ಯಕ್ಷ.

ಪಡಿತರ ಅಕ್ಕಿ ಕಳ್ಳ ಸಾಗಾಣೆ

12 ಟನ್ ಅಕ್ಕಿ, 2 ವಾಹನ, ಚಾಲಕರು ಪೊಲೀಸರ ವಶಕ್ಕೆ



ಪಡಿತರ ಅಕ್ಕಿ ಕಳ್ಳ ಸಾಗಾಣೆ ಮಾಡುತ್ತಿದ್ದ 2 ಲಾರಿಗಳನ್ನು ಪೊಲೀಸರು ವಶಕ್ಕೆ ಪಡೆದಿರುವುದು.

ನಂಜನಗೂಡು, ಜು.1– ನಗರದ ಚಾಮರಾಜನಗರ ಬೈಪಾಸ್ ರಸ್ತೆಯ ನಾಯಕರ ಸಮುದಾಯ ಭವನದ ಬಳಿ ಸೋಮವಾರ ತಡರಾತ್ರಿ ಪಡಿತರ ಅಕ್ಕಿ ಕಳ್ಳ ಸಾಗಾಣೆ ಮಾಡುತ್ತಿದ್ದ 2 ಲಾರಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನೂರಾರು ಚೀಲ ಅಕ್ಕಿ ಮೂಟೆಗಳನ್ನು ತುಂಬಿದ್ದ ಅಶೋಕ ಲೈಲ್ಯಾಂಡ್ ಹಾಗೂ ಟಾಟಾ ಮಿನಿ ಗೂಡ್ಸ್ ವಾಹನಗಳು ಮತ್ತು ಇಬ್ಬರು ಚಾಲಕರನ್ನು ಆಹಾರ ಶಿರಸ್ತೇದಾರ್ ಮಂಜುಳಾ ನೀಡಿದ ದೂರಿಗೆ ಮೇರೆಗೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

2 ವಾಹನಗಳಲ್ಲಿ ತುಂಬಿದ್ದ ಲಕ್ಷಾಂತರ ರೂ. ಮೌಲ್ಯದ 12 ಟನ್ ಅಕ್ಕಿ ಹಾಗೂ ಸಾಗಿಸಲು ಬಳಸುತ್ತಿದ್ದ ಎರಡು ಲಾರಿಗಳನ್ನು ವಶಕ್ಕೆ ಪಡೆಯಲಾಗಿದ್ದು, ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ತಿಂಗಳು ಇದೇ ಸ್ಥಳದಲ್ಲಿ 2 ಲಾರಿಗಳಲ್ಲಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಆದರೂ ಪಡಿತರ ಅಕ್ಕಿ ಕಳ್ಳ ಸಾಗಾಣೆ ನಿಂತಿಲ್ಲ. ಈ ಬಗ್ಗೆ ಪೊಲೀಸರು ಕಠಿಣ ಕ್ರಮವಹಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಜನಸೇವೆ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ

ನೋಟ್‌ಬುಕ್, ಬ್ಯಾಗ್ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್

ಕೆ.ಆರ್.ನಗರ, ಜು.1– ಜನಸೇವೆ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದ್ದು, ಹಿರಿಯರ ಮಾರ್ಗದರ್ಶನ ಪಡೆದು ಅದನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಅರ್ಕನಾಥ ರಸ್ತೆಯಲ್ಲಿ ನಡೆದ ಪಿ.ಎಸ್.ಎಂಟರ್ ಪ್ರೈಸಸ್ ಮತ್ತು ಸಿಂಹಾದ್ರಿ ಯುವ ಸೇನೆಯ 10ನೇ ವಾರ್ಷಿಕೋತ್ಸವ, 9ನೇ ವಾರ್ಡ್ ಶಾಲಾ–ಕಾಲೇಜು ಮಕ್ಕಳಿಗೆ ನೋಟ್‌ಬುಕ್ ಮತ್ತು ಶಾಲಾ ಬ್ಯಾಗ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜ ಸೇವಕ ಮಹೇಶ್ ಕುಮಾರ್ ಅವರ ನೋಟ್‌ಬುಕ್ ಹಾಗೂ ಶಾಲಾ ಬ್ಯಾಗ್ ವಿತರಣೆ ಕಾರ್ಯ ಸಮಾಜಮುಖಿ ಕಾರ್ಯವಾಗಿದ್ದು, ಅವರ ಕಾರ್ಯಗಳಿಗೆ ನಾನು ಸದಾ ಸ್ಪಂದಿಸುತ್ತೇನೆ. ವಾರ್ಡ್ ಜನತೆ ಇದರ ಸದುಪಯೋಗ ಪಡೆದು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದರು.

ಯಥೇಚ್ಛವಾಗಿ ಹಣ, ಆಸ್ತಿ ಮತ್ತು ಅಂತಸ್ತು ಹೊಂದಿರುವವರು ಆರ್ಥಿಕವಾಗಿ ದುರ್ಬಲರಾಗಿರುವ ಜನತೆಗೆ ದಾನ ಮಾಡಲು ಕೈ ಬರುವುದಿಲ್ಲ. ಆದರೆ ಮಹೇಶ್ ಸದಾ ಜನರ ಕಷ್ಟ, ಕಾರ್ಪಣ್ಯಗಳಿಗೆ ಸ್ಪಂದಿಸುವುದರ ಜೊತೆಗೆ ಜನಸೇವೆಗೆ ಮುಡಿಪಾಗಿದ್ದು, ಇತರರಿಗೆ ಮಾದರಿಯಾಗಿರುವುದು ಹೆಮ್ಮೆಯ ವಿಚಾರ ಎಂದರು.

ಈ ವೇಳೆ ವಾರ್ಡ್‌ನ ನೂರಾರು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಬ್ಯಾಗ್‌ಗಳನ್ನು ವಿತರಿಸಲಾಯಿತು. ಹುಣಸೂರಿನ ಶ್ರೀನಿವಾಸ್ ಮತ್ತು ತಂಡದವರಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಪುರಸಭಾಧ್ಯಕ್ಷ ಡಿ.ಶಿವಕುಮಾರ್, ಸಿಂಹಾದ್ರಿ ಯುವ ಸೇನೆ ಗೌರವಾಧ್ಯಕ್ಷ ಕೆ.ಆರ್.ಗಿರೀಶ್, ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷ ಕಿಶನ್‌ಸಿಂಗ್, ಕಾರ್ಯದರ್ಶಿ ಸ್ವಾಮಿ, ಖಜಾಂಚಿ ಮಹೇಶ್‌ಕುಮಾರ್, ಪುರಸಭೆ ಮಾಜಿ ಸದಸ್ಯರಾದ ಕೆಎಲ್.ರಾಜೇಶ್, ಕೆವಿನಯ್, ವಾರ್ಡ್‌ನ ಮುಖಂಡರಾದ ಹೆಚ್‌ಸಿ. ಚಂದ್ರಶೇಖರ್, ಡಿ.ಕೆ.ರಘುವೀರ್ ಸಿಂಗ್, ಡಿ.ಕೆಬಾಲಾಜಿ ಸಿಂಗ್, ನೀಲೇಗೌಡ, ಮೋಹನ್ ಕುಮಾರ್, ಸುರೇಂದ್ರ ಬಾಬು, ಹೆಚ್.ಡಿ. ಯೋಗೇಶ್, ಡಾ.ಕೃಷ್ಣ, ಹೆಚ್.ಕೆ. ರಮೇಶ್, ಮಂಜುನಾಥ್, ಹೇಮಂತ್ ಹಾಜರಿದ್ದರು.



ಕಾರ್ಯಕ್ರಮವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

ಜೀವವಿಮಾ ಪ್ರತಿನಿಧಿಗಳ ವಾರ್ಷಿಕ ಮಹಾಸಭೆ

ನಂಜನಗೂಡು, ಜು.1– ಜೀವವಿಮಾ ಪ್ರತಿನಿಧಿಗಳು ತಮ್ಮ ಸವಲತ್ತುಗಳನ್ನು ಪಡೆಯಲು ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂದೊದಗಿದೆ ಎಂದು ಜೀವವಿಮಾ ಪ್ರತಿನಿಧಿಗಳ ಮೈಸೂರು ವಿಭಾಗೀಯ ಮಂಡಳಿ ಅಧ್ಯಕ್ಷ ಕೆಂಪೇಗೌಡ ಹೇಳಿದರು.

ನಗರದ ಕೌಸಲ್ಯ ಕಲ್ಯಾಣ ಮಂಟಪದಲ್ಲಿ ಮಂಗಳವಾರ ನಡೆದ ಜೀವವಿಮಾ ಪ್ರತಿನಿಧಿಗಳ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿನಿಧಿಗಳ ಗ್ರಾಚ್ಯುಟಿ, ಗ್ರೂಪ್ ಇನ್ಸೂರೆನ್ಸ್, ಪ್ರತಿನಿಧಿಗಳ ಕುಟುಂಬ ವರ್ಗದ ಮೆಡಿಕಲ್ ಇನ್ಸೂರೆನ್ಸ್, ಭೀಮ ಸುಗಮ್ ನಿಲುಗಡೆ ಮಾಡಲಾಗಿದೆ. ಹಿಂದೆ ಪಾಲಿಸಿ ಅವಧಿ ಮುಗಿಯುವವರೆಗೂ ಕಮಿಷನ್ ನೀಡಲಾಗುತ್ತಿತ್ತು. ಈಗ 7 ವರ್ಷಕ್ಕೆ ಕಮಿಷನ್ ನಿಲ್ಲಿಸುವ ತೀರ್ಮಾನವನ್ನು ಆಡಳಿತ ಮಂಡಳಿ ಕೈಗೊಂಡಿದ್ದು, ಪ್ರತಿನಿಧಿಗಳ ಒಕ್ಕೂಟ ನಡೆಸಿದ ಹೋರಾಟದ ಫಲವಾಗಿ ರದ್ದುಗೊಂಡಿದೆ. ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಸಂಘಟನೆಗೆ ಮಾನ್ಯತೆ ಸಿಕ್ಕಿದೆ. ನಿಗಮದಿಂದ ಪ್ರತಿನಿಧಿಗಳಿಗೆ ಅನ್ಯಾಯವಾದಾಗಲೆಲ್ಲಾ ಸಂಘಟನೆ ಹೋರಾಟ ಮಾಡಿ ನ್ಯಾಯ ದೊರಕಿಸಿದೆ. ನಾವು ಪ್ರತಿನಿಧಿಗಳು ಹೋರಾಟದ ಜೊತೆಗೆ ಆರ್ಥಿಕವಾಗಿ ಸದೃಢರಾಗಬೇಕು. ಪ್ರತಿನಿಧಿಗಳು ಚಳಿ ಗಾಳಿಯನ್ನೆದೆ ನಿಗಮಕ್ಕೆ ವ್ಯವಹಾರ ತಂದು ಜೀವವಿಮಾ ನಿಗಮವನ್ನು ಸದೃಢಗೊಳಿಸಿದ್ದೇವೆ. ಆದರೂ ಪ್ರತಿನಿಧಿಗಳ ಬೆಲೆ ಏರಿಕೆಯ ಈ ದಿನಗಳಲ್ಲಿ ಜೀವನ ಸಾಗಿಸಲು ಕಷ್ಟಪಡಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ನಗರ ಜೀವವಿಮಾ ಘಟಕದ ಹಿರಿಯ ಶಾಖಾಧಿಕಾರಿ ಬರಾಮಸ್ವಾಮಿ, ಉಪ ಶಾಖಾಧಿಕಾರಿ ಕೃಷ್ಣ ಭಟ್, ಅಭಿವೃದ್ಧಿ ಅಧಿಕಾರಿಗಳ ಒಕ್ಕೂಟದ ಅಧ್ಯಕ್ಷ ಜಿ.ಎನ್.ಮಹೇಶ್, ಅಭಿವೃದ್ಧಿ ಅಧಿಕಾರಿಗಳ ಒಕ್ಕೂಟದ ಅಧ್ಯಕ್ಷ ಚಿನ್ನಪ್ಪ ಸಾತ್ವಿಕ್, ಬಿ.ಆರ್.ಮಹೇಶ್, ಗೌರವಾಧ್ಯಕ್ಷ ಹೆಚ್.ಆರ್.ಶಿವಕುಮಾರ್, ಗುಂಡ್ಲುಪೇಟೆ ಪ್ರತಿನಿಧಿಗಳ ಒಕ್ಕೂಟದ ಅಧ್ಯಕ್ಷ ಜಿ. ಮಾಧು, ಶಶಿಕಲಾ, ರಂಗಸ್ವಾಮಿ, ಕೆ.ಇಂದಿರಾ, ಗುರುಸಿದ್ದಾಚಾರಿ, ಬಿ.ಆರ್.ಚಿಕ್ಕಣ್ಣ, ಶ್ರೀಧರ್‌ರಾವ್, ವೆಂಕಟೇಶ್, ರಂಗಸ್ವಾಮಿ, ಮಹದೇವಯ್ಯ ಉಪಸ್ಥಿತರಿದ್ದರು.



ಮಹಾಸಭೆಯನ್ನು ಮೈಸೂರು ವಿಭಾಗೀಯ ಮಂಡಳಿ ಅಧ್ಯಕ್ಷ ಕೆಂಪೇಗೌಡ ಉದ್ಘಾಟಿಸಿದರು.

ನೂತನ ನಿರ್ದೇಶಕರಿಗೆ ಅಭಿನಂದನೆ



ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಮಾಜಿ ಜಿಪಂ ಸದಸ್ಯರು, ಸಹಕಾರಿ ಧುರೀಣ ಬಿ.ಎನ್.ಸದಾನಂದ ಅವರನ್ನು ವೀರಶೈವ ಮಹಾಸಭಾ ಉಪಾಧ್ಯಕ್ಷ ಹಾಗೂ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಅಭಿನಂದಿಸಿದರು. ಬಿಜೆಪಿ ಉಪಾಧ್ಯಕ್ಷ ಬೆನಕನಹಳ್ಳಿ ವಿಜಯಕುಮಾರ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಚೌವಳ್ಳಿ ಸಿದ್ದರಾಜು, ಅಡುಗೆ ಪ್ರಭು, ರಮೇಶ್, ಕುಮಾರ್ ಇತರರಿದ್ದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ



ವಿಶ್ವ ಪರಿಸರ ದಿನಾಚರಣೆ, ಕಾನೂನು ಅರಿವು ಶಿಬಿರವನ್ನು ಹಿರಿಯ ಶ್ರೇಣಿ ನ್ಯಾಯಾಧೀಶ ಎಸ್.ಚಂದನ್ ಉದ್ಘಾಟಿಸಿದರು.

ಕೆ.ಆರ್.ನಗರ, ಜು.1– ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ ಎಂದು ಹಿರಿಯ ಶ್ರೇಣಿ ನ್ಯಾಯಾಧೀಶ ಎಸ್.ಚಂದನ್ ಹೇಳಿದರು.

ಪಟ್ಟಣದ ಬನ್ನಿಮಂಟಪದಲ್ಲಿರುವ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಅರಣ್ಯ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ ಮತ್ತು ತಾಲೂಕು ವಕೀಲರ ಸಂಘದಿಂದ ನಡೆದ ವಿಶ್ವ ಪರಿಸರ ದಿನಾಚರಣೆ ಮತ್ತು ಕಾನೂನು ಅರಿವು ಶಿಬಿರದಲ್ಲಿ ಮಾತನಾಡಿದ ಅವರು, ಸಕಲ ಜೀವರಾಶಿಗಳು ಬದುಕಲು ಉತ್ತಮ ಪರಿಸರದ ಅವಶ್ಯಕತೆ ಇರುವುದರಿಂದ ಅದನ್ನು ಅರಿತು ನಾವು ಹಸಿರು ಕಾಪಾಡುವ ಕೆಲಸ ಮಾಡಬೇಕು ಎಂದರು.

ತಾಯಿ ತನ್ನ ಮಗುವನ್ನು 9 ತಿಂಗಳು ಗರ್ಭದಲ್ಲಿ ಹೊತ್ತು ಜನ್ಮ ನೀಡುತ್ತಾಳೆ. ಆದರೆ ಭೂ ತಾಯಿ ಮನುಷ್ಯ ಬದುಕಿರುವವರೆಗೂ ಆತನನ್ನು ಪೊರೆದು ಕಾಪಾಡುತ್ತಾಳೆ. ಆದ್ದರಿಂದ ಭೂಮಿ ಸಂರಕ್ಷಣೆ ಮಾಡಿ ಪರಿಸರದ ಉಳಿವಿಗಾಗಿ ಜೀವನ ಪೂರ್ತಿ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಭವಿಷ್ಯದ ಹಿತದೃಷ್ಟಿಯಿಂದ ಪ್ಲಾಸ್ಟಿಕ್ ಬಳಕೆ ತ್ಯಜಿಸಿ ಪರಿಸರ ಪೂರಕ ವಾತಾವರಣ ನಿರ್ಮಾಣ ಮಾಡಬೇಕು. ಅವಕಾಶ ಸಿಕ್ಕಾಗಲೆಲ್ಲಾ ಪ್ರತಿಯೊಬ್ಬರೂ ಗಿಡಗಳನ್ನು ನೆಡುವ ಹವ್ಯಾಸ ಬೆಳೆಸಿಕೊಂಡು ಈ ವಿಚಾರದ ಬಗ್ಗೆ ಇತರರಿಗೂ ಅರಿವು ಮೂಡಿಸಬೇಕು ಎಂದರು.

ವಕೀಲೆ ಪ್ರಭಾವತಿ ಅರವಿಂದ್ ಮಾತನಾಡಿ, 1974ರಿಂದ ವಿಶ್ವದ 143 ದೇಶಗಳಲ್ಲಿ ಪರಿಸರ ದಿನಾಚರಣೆ ಆಚರಿಸಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದು, ನಾವು ಸಹ ಈ ಅಭಿಯಾನದಲ್ಲಿ ಕೈ ಜೋಡಿಸಿ ಉತ್ತಮ ಪರಿಸರ ನಿರ್ಮಾಣ ಮಾಡುವ ಪಣ ತೊಡಬೇಕು ಎಂದರು.

ವಲಯ ಅರಣ್ಯಾಧಿಕಾರಿ ಟಿ.ವಿ.ಹರಿಪ್ರಸಾದ್, ಬಿಇಓ ಆರ್.ಕೃಷ್ಣಪ್ಪ, ಮುಖ್ಯ ಶಿಕ್ಷಕಿ ಅನುಸೂಯ, ಪುರಸಭೆ ಕಂದಾಯಾಧಿಕಾರಿ ರಮೇಶ್, ಪರಿಸರ ಇಂಜಿನಿಯರ್ ಮಧುಸೂದನ್, ಇಸಿಓ ಜನಾರ್ಧನ್ ಸೇರಿದಂತೆ ಶಾಲಾ ಶಿಕ್ಷಕರು ಇತರರಿದ್ದರು.

ಶ್ರೀವಾರಾಹಿ, ಶ್ರೀಮಾರಮ್ಮನವರ ಜಾತ್ರಾ ಮಹೋತ್ಸವ ಆರಂಭ

ವಿಶೇಷ ಪೂಜೆ, ಇಂದು ಕೊಂಡೋತ್ಸವ

ಹೆಚ್.ಡಿ.ಕೋಟೆ, ಜು.1– 9 ವರ್ಷಗಳ ನಂತರ ನಡೆಯುತ್ತಿರುವ ಶ್ರೀವಾರಾಹಿ ಮತ್ತು ಶ್ರೀಮಾರಮ್ಮನವರ ಜಾತ್ರಾ ಮಹೋತ್ಸವ ಹಾಗೂ ಕೊಂಡೋತ್ಸವ ಪಟ್ಟಣದಲ್ಲಿ 3 ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ.

ಸೋಮವಾರ ತಾಯಿ ಮಾರಮ್ಮನಿಗೆ ಬಗೆ ಬಗೆಯ ಹೂವಿನ ಅಲಂಕಾರದೊಂದಿಗೆ ಗಣಪತಿ ಹೋಮ, ಇತ್ಯಾದಿ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಇದೇ ವೇಳೆ ಪಟ್ಟಣದ ಎಲ್ಲಾ ಜನಾಂಗದವರು ಆಗಮಿಸಿ ತಾಯಿ ಮಾರಮ್ಮನಿಗೆ ತಂಪಿನ ಪೂಜೆ ನೆರವೇರಿಸಲಾಯಿತು.

ಮಂಗಳವಾರ ಬೆಳಗ್ಗೆಯಿಂದಲೇ 101 ಗಾಡಿಗಳಲ್ಲಿ ತಂದಿರುವ ಕಗ್ಗಲಿ ಸೌದೆಗಳನ್ನು ಜೋಡಿಸಿ, ಸಾಂಪ್ರದಾಯಿಕವಾಗಿ ವಿಶೇಷ ಪೂಜೆ ಸಲ್ಲಿಸಿ ಕೊಂಡೋತ್ಸವಕ್ಕೆ ಸಿದ್ಧತೆ ಕೈಗೊಳ್ಳಲಾಯಿತು. ನಂತರ ಮಂಗಳವಾರ ರಾತ್ರಿ ಕಗ್ಗಲಿ ಮರಗಳಿಗೆ ಅರ್ಚಕರು ಹಾಗೂ ಮುಖಂಡರು ಅಗ್ನಿ ಸ್ಪರ್ಶ ಮಾಡಿದರು. ಬುಧವಾರ ಬೆಳಗ್ಗೆ 10ರಿಂದ 11.30ರವರೆಗೆ ಕೊಂಡೋತ್ಸವ ನಡೆಯಲಿದ್ದು, ಭಕ್ತರು ಕೊಂಡ ಹಾಯ್ದು ಪೂಜೆ ಸಲ್ಲಿಸಲಿದ್ದಾರೆ.



ಶ್ರೀವಾರಾಹಿ ಮತ್ತು ಮಾರಮ್ಮ ತಾಯಿಗೆ ವಿಶೇಷ ಅಲಂಕಾರ

ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಹ್ವಾನ

ಹುಣಸೂರು, ಜು.1– ಪತ್ರಕರ್ತ ದಿ.ಹೆಚ್.ಆರ್.ಶ್ರೀನಿವಾಸ್ ಅವರ ಸ್ಮರಣಾರ್ಥ ಪತ್ರಕರ್ತ ಹೆಚ್.ಎಸ್.ಸಚ್ಚಿತ್ ಅವರು ಸ್ಥಾಪಿಸಿರುವ ಜಿಲ್ಲಾ ಮಟ್ಟದ "ಜಿಲ್ಲಾ ಅತ್ಯುತ್ತಮ ಗ್ರಾಮೀಣಾಭಿವೃದ್ಧಿ ವರದಿ ಪ್ರಶಸ್ತಿಗೆ" ಮೈಸೂರು ಜಿಲ್ಲಾ ಗ್ರಾಮೀಣ ಪತ್ರಕರ್ತರಿಂದ ಗ್ರಾಮೀಣಾಭಿವೃದ್ಧಿ ಲೇಖನಗಳನ್ನು ಆಹ್ವಾನಿಸಲಾಗಿದೆ.

ಮೈಸೂರು ಜಿಲ್ಲಾ ಗ್ರಾಮಾಂತರ ಪತ್ರಕರ್ತರು ಜುಲೈ 2024 ರಿಂದ 2025ರ ಜೂ.30ರೊಳಗೆ ತಮ್ಮ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಗ್ರಾಮೀಣಾಭಿವೃದ್ಧಿ ಲೇಖನಗಳನ್ನು ಮೂಲ ಪತ್ರಿಕೆ ಹಾಗೂ 3 ಜೆರಾಕ್ಸ್ ಪ್ರತಿಗಳೊಂದಿಗೆ ಜು.15ರ ಸಂಜೆ 4.ರೊಳಗೆ ಹುಣಸೂರು ತಾಲೂಕು ಪತ್ರಕರ್ತರ ಸಂಘದ ಕಚೇರಿಗೆ ತಲುಪಿಸಬೇಕು.

ಜು.20 ರಂದು ನಡೆಯುವ ಪತ್ರಿಕಾ ದಿನಾಚರಣೆಯಲ್ಲಿ ಪ್ರಶಸ್ತಿಗೆ ಆಯ್ಕೆಯಾದ ಪತ್ರಕರ್ತರಿಗೆ ಪ್ರಶಸ್ತಿ ನೀಡಿ ಗೌರವಿಸ ಲಾಗುವುದೆಂದು ಸಂಘದ ಅಧ್ಯಕ್ಷ ಕೃಷ್ಣಕುಮಾರ್ ಹಾಗೂ ಪ್ರಧಾನ ಕಾರ್ಯದರ್ಶಿ ಮಹದೇವ್ ತಿಳಿಸಿದ್ದಾರೆ.

HWJA

ಜು.6ಕ್ಕೆ ವಿದ್ಯುತ್ ದೀಪಾಲಂಕಾರ, ಧ್ವನಿವರ್ಧಕ ಮಾಲೀಕರ ಸಂಘದ ಮಹಾಸಭೆ

ಸರಗೂರು, ಜು.1– ಮೈಸೂರು ನಗರ, ಜಿಲ್ಲಾ ವಿದ್ಯುತ್ ದೀಪಾಲಂಕಾರ ಹಾಗೂ ಧ್ವನಿವರ್ಧಕ ಮಾಲೀಕರ ಸಂಘದ ಮಹಾಸಭೆ ಜು.6 ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಿ. ದೇವರಾಜು ತಿಳಿಸಿದರು.

ಮೈಸೂರಿನ ಮಂಡಿ ಮೊಹಲ್ಲಾದ ಸಂಘದ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ನಗರ, ಜಿಲ್ಲಾ ವಿದ್ಯುತ್ ದೀಪಾಲಂಕಾರ ಹಾಗೂ ಧ್ವನಿವರ್ಧಕ ಮಾಲೀಕರ ಸಂಘದ 12–18ನೇ ಮಹಾಸಭೆ ಮೈಸೂರಿನ ಪಡುವಾರಳ್ಳಿ ಶ್ರೀಮಹದೇಶ್ವರಸ್ವಾಮಿ ಕಲ್ಯಾಣ ಮಂಟಪದಲ್ಲಿ ಜು.6 ರಂದು 10.30ಕ್ಕೆ ನಡೆಯಲಿದ್ದು, ಶಾಸಕ ಕೆ.ಹರೀಶ್‌ಗೌಡ ಸಭೆ ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ಬಿ.ದೇವರಾಜು ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಗ್ರಾಮ ಅಭ್ಯುದಯ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ಅಗಲಿದ ವೃತ್ತಿ ಬಾಂಧವರಿಗೆ ಹಾಗೂ ಗಣ್ಯರಿಗೆ ಶ್ರದ್ಧಾಂಜಲಿ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಹಿರಿಯ ವೃತ್ತಿ ಬಾಂಧವರನ್ನು ಸನ್ಮಾನಿಸಲಾಗುವುದು. ಸಂಘದ ಸರ್ವ ಸದಸ್ಯರ ಸದಸ್ಯತ್ವ ನವೀಕರಣ ಮಾಡಲಾಗುವುದು. ಅಲ್ಲದೇ ಹೊಸ ಉತ್ಪನ್ನಗಳ ಧ್ವನಿವರ್ಧಕ ಹಾಗೂ ವಿದ್ಯುತ್ ದೀಪಾಲಂಕರದ ವಸ್ತುಗಳ ಮಾರಾಟ ಹಾಗೂ ಪ್ರದರ್ಶನ ಏರ್ಪಡಿಸಲಾಗಿದೆ ಸರ್ವ ಸದಸ್ಯರು ಮಹಾಸಭೆಗೆ ಹಾಜರಾಗಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಪೂರ್ವಭಾವಿ ಸಭೆಯಲ್ಲಿ ಗೌರವಾಧ್ಯಕ್ಷ ಪರಶಿವಮೂರ್ತಿ, ಉಪಾಧ್ಯಕ್ಷ ಕೆ. ಭೈರಪ್ಪ, ಪ್ರಸಾದ್, ಜಾವೀದ್, ಪ್ರಧಾನ ಕಾರ್ಯದರ್ಶಿ ವೈ. ಎಸ್. ನಾಗೇಶ್ ಪ್ರಸಾದ್, ಸಹಕಾರ್ಯದರ್ಶಿ ರೋಹೀತ್, ಸಂಘಟನಾ ಕಾರ್ಯದರ್ಶಿ ಎಂ.ರಾಜು, ನಿರ್ದೇಶಕರಾದ ಜನಾರ್ಧನ್, ಕುಮಾರ್, ನಾಗೇಶ್, ಈಜ್ ಅಹಮ್ಮದ್, ಚರಣ್ ರಾಜ್, ಶಂಭು, ವಾಸುಕಿ ನಾಗೇಶ್ ಉಪಸ್ಥಿತರಿದ್ದರು.



ಪೂರ್ವಭಾವಿ ಸಭೆಯಲ್ಲಿ ಸಂಘದ ಅಧ್ಯಕ್ಷ ಬಿ.ದೇವರಾಜು ಮಾತನಾಡಿದರು.

ತಿ.ನರಸೀಪುರದಲ್ಲಿ ಭಾರತೀಯ ಕಿಸಾನ್ ಸಂಘದ ಕಾರ್ಯಾಗಾರ

ತಿ.ನರಸೀಪುರ, ಜು.1–ಪಟ್ಟಣದ ಟಿಎಪಿಸಿಎಂಎಸ್ ರೈತ ಭವನದಲ್ಲಿ ಭಾರತೀಯ ಕಿಸಾನ್ ಸಂಘ ತಾಲೂಕು ಸಮಿತಿಯಿಂದ ಗ್ರಾಮ ಸಮಿತಿಗಳ ಅಧ್ಯಕ್ಷ, ಕಾರ್ಯದರ್ಶಿಗಳಿಗೆ ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ನಾಗಲಗೆರೆ ಶಿವಕುಮಾರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ವಿವಿಧ ಗ್ರಾಮಗಳಿಂದ ಆಗಮಿಸಿದ್ದ ರೈತರು ಸಭಾಂಗಣದ ಮುಂದೆ ಗೋಪೂಜೆ ಮಾಡುವ ಮೂಲಕ ಉದ್ಘಾಟಿಸಿದರು.

ಶಿವಕುಮಾರ್ ಮಾತನಾಡಿ, ರೈತರು ಒಗ್ಗೂಡಿ ತಮ್ಮ ಸಮಸ್ಯೆಗಳನ್ನು ಪ್ರತಿ ತಿಂಗಳು ನಡೆಯುವ ಭಾರತೀಯ ಕಿಸಾನ್ ಸಂಘದ ತಾಲೂಕು ಸಭೆಗಳಲ್ಲಿ ಚರ್ಚಿಸುವ ಮೂಲಕ ಬಗೆಹರಿಸಿಕೊಳ್ಳಬಹುದಾಗಿದೆ. ರೈತರು ಆತಂಕ ಪಡದೆ ಧೈರ್ಯವಾಗಿ ಕಾನೂನಾತ್ಮಕ ಹೋರಾಟಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಪ್ರಾಂತ ಮಹಿಳಾ ಪ್ರಮುಖರಾದ ಪುಟ್ಟಮ್ಮ ಮಾತನಾಡಿ, ಭಾರತೀಯ ಕಿಸಾನ್ ಸಂಘವು ಯಾವುದೇ ಒಬ್ಬ ವ್ಯಕ್ತಿಗೆ ಸೀಮಿತವಾದ ಸಂಘಟನೆಯಲ್ಲ. ಸಂಘದ ರೈತರಿಂದ ರೈತರಿಗಾಗಿ ರೈತರಿಗೋಸ್ಕರ ಇರುವ ಸಂಘಟನೆ ಇದಾಗಿದ್ದು ರೈತನೇ ಈ ಸಂಘಟನೆಯ ನಾಯಕನಾಗಿರುತ್ತಾನೆ ಎಂದರು.

ಭಾರತೀಯ ಕಿಸಾನ್ ಸಂಘವು ಯಾವುದೋ ಒಂದು ಗ್ರಾಮ, ತಾಲೂಕಿಗೆ ಸೀಮಿತವಾಗಿಲ್ಲ. ಹಳ್ಳಿಯಿಂದ ದಿಲ್ಲಿವರೆಗೂ ತನ್ನ ಕಾರ್ಯ ಕ್ಷೇತ್ರ ವ್ಯಾಪಿಸಿಕೊಂಡು ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದೆ. ಇಲ್ಲಿ ಯಾರೋ ಒಬ್ಬರು ನಾಯಕರಲ್ಲ. ಎಲ್ಲರೂ ಇಲ್ಲಿ ನಾಯಕರಾಗಿದ್ದಾರೆ. ನಮ್ಮ ಸಂಘವು ರಾಷ್ಟ್ರೀಯ ಸಂಘಟನೆಯಾಗಿದ್ದು, ದೇಶದ ಪ್ರತಿಯೊಂದು ರಾಜ್ಯ, ಜಿಲ್ಲೆ, ತಾಲೂಕುಗಳಲ್ಲಿ 6 ಲಕ್ಷ ಗ್ರಾಮ ಸಮಿತಿಗಳನ್ನು ಒಳಗೊಂಡ ಸಮಿತಿಯಾಗಿದೆ. ಸಂಘಟನೆಯ ತತ್ವ ಹಾಗು ಸಿದ್ಧಾಂತಗಳನ್ನು ಇಲ್ಲಿ ನಿಮಗೆ ತಿಳಿಸಿಕೊಡಲಾಗುತ್ತದೆ. ನೀವು ಗ್ರಾಮ ಸಮಿತಿಗಳಲ್ಲಿ ಹೋಗಿ ಸಂಘದ ಮೂಲ ಉದ್ದೇಶ, ಸಂಘದ ಪ್ರಯೋಜನ, ಸ್ಥಾಪನೆ ಬಗ್ಗೆ ತಿಳಿಸಿಕೊಡುವ ಕೆಲಸ ಮಾಡಬೇಕು ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವಿ ಗಂಡತ್ತೂರು ಮಾತನಾಡಿ, ಮಹಾತ್ಮ ಗಾಂಧಿ ಕಂಡ ಕನಸ್ಸಿನಂತೆ ಗ್ರಾಮದಲ್ಲಿಯೇ ರೈತರು ಸಕಲ ಯೋಜನೆ ಅಡಿ ಕಂದಾಯ, ಕೃಷಿ, ತೋಟಗಾರಿಕೆ ಸೇರಿದಂತೆ ಮೊದಲಾದ ಇಲಾಖೆಗಳಲ್ಲಿ ಸಕಾಲದಲ್ಲಿ ಮನವಿ ಸಲ್ಲಿಸಬಹುದಾಗಿದೆ. ರೈತರು ಬೇಡುವವರಲ್ಲ. ದೇಶಕ್ಕೆ ಅನ್ನ ನೀಡುವ ರೈತ ಇಂದು ಸರ್ಕಾರಿ ಕಚೇರಿಗಳಿಗೆ ಅಲೆಯುವಂತಾಗಿದೆ. ಇದು ತಪ್ಪಬೇಕಾದರೆ ರೈತರು ಪ್ರತಿ ತಿಂಗಳು ತಮ್ಮ ಗ್ರಾಮಗಳ ಸಮಸ್ಯೆಗಳನ್ನು ಪಟ್ಟಿ ಮಾಡಿ ಸಕಾಲದಲ್ಲಿ ಕಿಸಾನ್ ಸಂಘದ ತಾಲೂಕು ಸಮಿತಿಗಳಲ್ಲಿ ನಿಯಮಿತವಾಗಿ ಹಾಜರಾಗಿ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದರು.

ಈ ವೇಳೆ ಜಿಲ್ಲಾಧ್ಯಕ್ಷ ಆಯರಹಳ್ಳಿ ಪ್ರಭುಸ್ವಾಮಿ, ಚನ್ನಪ್ಪ ಮಾ.ಸ.ಪ್ರವೀಣ, ಮಹದೇವಮ್ಮ, ಪಿರಿಯಾಪಟ್ಟಣ ಚಂದ್ರೇಗೌಡ, ಮರಡೀಪುರ ನಾಗರಾಜು, ಮಲ್ಲಿಕಾರ್ಜುನ, ಪುರಸಭೆ ಸದಸ್ಯೆ ರೂಪಶ್ರೀ ಪರಮೇಶ್, ಮಹದೇವ, ಪ್ರಭು, ಮಾದೇಶ, ಪರಮೇಶ್, ಬೆನಕನ ಹಳ್ಳಿ ಪ್ರಭಾಕರ, ಮರಿಸ್ವಾಮಿ, ಮಾಲಂಗಿ ಪ್ರಭುಸ್ವಾಮಿ, ಆನಂದ, ಮಹೇಶ್, ನಾಗಲಗೆರೆ ರಂಗಸ್ವಾಮಿ, ಸಿದ್ದ ರಾಜು, ಮೇಗಡಹಳ್ಳಿ ಮುಕುಂದ, ಚೌಡನಾಯಕ, ಮಡವಾಡಿ ಮಹೇಶ್, ಪ್ರಕಾಶ್, ತುಂಬಲ ಪ್ರಭು ಮತ್ತಿತರರಿದ್ದರು.



ಕಾರ್ಯಾಗಾರವನ್ನು ಗೋ ಪೂಜೆ ಮಾಡುವ ಮೂಲಕ ಉದ್ಘಾಟಿಸಲಾಯಿತು.

ಸೇವಾ ಭೂಷಣ ಪ್ರಶಸ್ತಿ ಸನ್ಮಾನ



ಮೈಸೂರಿನ ಕಲಾ ಮಂದಿರದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಚಾರ ವೇದಿಕೆಯಿಂದ ಕ್ಯಾತನಹಳ್ಳಿ ಗ್ರಾಮದ ಡಾ.ಗುರುಸ್ವಾಮಿ ಅವರಿಗೆ ಸೇವಾ ಭೂಷಣ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಈ ವೇಳೆ ಡಾ.ಕಾವೇರಿ ಪ್ರಕಾಶ್, ಜನಪದ ಪರಿಷತ್ ಅಧ್ಯಕ್ಷ ಹೆಚ್.ಪ್ರಕಾಶ್, ಚಾಂಯಾಂಕಿತಾ, ಸರಸ್ವತಿ ಸೇರಿದಂತೆ ಇತರರಿದ್ದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಅನಾಟಮಿ ವಿಭಾಗದಲ್ಲಿ ಅಂಗರಚನಾಶಾಸ್ತ್ರ ಅಭ್ಯಾಸಕ್ಕೆ ಅತ್ಯಾಧುನಿಕ ವ್ಯವಸ್ಥೆ

ವರ್ಚುವಲ್ ಡಿಸೆಕ್ಷನ್ ಅನಾಟಮೇಜ್ ಟೇಬಲ್ ಅನಾವರಣ

ಮೈಸೂರು,ಜು.1(ಪಿಎಂ)– ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಅನಾಟಮಿ (ಅಂಗರಚನಾಶಾಸ್ತ್ರ) ವಿಭಾಗದಲ್ಲಿ ಅತ್ಯಾಧುನಿಕ ವರ್ಚುವಲ್ ಡಿಸೆಕ್ಷನ್ ವ್ಯವಸ್ಥೆ ಒಳಗೊಂಡಿರುವ 'ವರ್ಚುವಲ್ ಡಿಸೆಕ್ಷನ್ ಅನಾಟಮೇಜ್ ಟೇಬಲ್ ಆವೃತ್ತಿ 11'ರ ಉದ್ಘಾಟನೆಯನ್ನು ಮಂಗಳವಾರ ನೆರವೇರಿಸಲಾಯಿತು.

ಈ ಟೇಬಲ್ ವೈದ್ಯಕೀಯ ಶಿಕ್ಷಣದಲ್ಲಿ ಅಂಗರಚನಾಶಾಸ್ತ್ರದ ಪರಿಣಾಮಕಾರಿ ಕಲಿಕೆಗೆ ಪೂರಕವಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡಿರುವ ಇದನ್ನು ಯುಎಸ್ ಮೂಲದ ಕಂಪನಿಯಿಂದ ಖರೀದಿಸಲಾಗಿದೆ. ದೇಹ ರಚನೆ ಹಾಗೂ ದೇಹದ ಅಂಗಗಳ ಬಗ್ಗೆ ಅಧ್ಯಯನ ನಡೆಸುವಲ್ಲಿ ಅನಾಟಮಿ ವಿಭಾಗಕ್ಕೆ ಈ ವ್ಯವಸ್ಥೆ ಮಹತ್ವದ ಪಾತ್ರ ವಹಿಸಲಿದೆ.

ಈ ಅನಾಟಮೇಜ್ ಟೇಬಲ್ ಅತ್ಯಂತ ಮುಂದುವರೆದ 3ಡಿ ಅಂಗರಚನಾಶಾಸ್ತ್ರ ವ್ಯವಸ್ಥೆ ಹೊಂದಿದೆ. ಇಂತಹ ಅತ್ಯುನ್ನತ ವ್ಯವಸ್ಥೆಯನ್ನು ಹೊಂದಿರುವ ಮೈಸೂರಿನ ಮೊದಲ ವಿಭಾಗವಾಗಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಅನಾಟಮಿ (ಅಂಗರಚನಾಶಾಸ್ತ್ರ) ವಿಭಾಗ ಹೊರಹೊಮ್ಮಿದೆ. ಸದರಿ ಅತ್ಯಾಧುನಿಕ ವ್ಯವಸ್ಥೆಯು ಮಾನವನ ಶರೀರದ ಕುರಿತಂತೆ ಹೈ ರೆಸಲ್ಯೂಷನ್ ದೃಶ್ಯೀಕರಣದ ಮೂಲಕ ವೈದ್ಯಕೀಯ ವೃತ್ತಿಪರರು ಹಾಗೂ ವಿದ್ಯಾರ್ಥಿಗಳಿಗೆ ನಿಖರತೆಯೊಂದಿಗೆ ಸಂಕೀರ್ಣ ರಂಗರಚನಾ ವ್ಯವಸ್ಥೆಯನ್ನು ಅನ್ವೇಷಿಸಿ ಅಧ್ಯಯನ ನಡೆಸಲು ಅನುವು ಮಾಡಲಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಅನಾಟಮಿ ವಿಭಾಗದ ಮುಖ್ಯಸ್ಥೆ ಡಾ.ಸಿ.ಎಸ್.ವಿದ್ಯಾ, ಮಾನವನ ನೈಜ ದೇಹ ಬಳಸಿಕೊಂಡು 'ಅನಾಟಮೇಜ್ ಟೇಬಲ್ ಆವೃತ್ತಿ 11' ಅನ್ನು ವಿನ್ಯಾಸಗೊಳಿಸಲಾಗಿದೆ. ಎಂಬಿಬಿಎಸ್ ಅನಾಟಮಿ ವಿದ್ಯಾರ್ಥಿಗಳ ಜೊತೆಗೆ ಸರ್ಜಿಕಲ್ ಪಿಜಿ ವಿದ್ಯಾರ್ಥಿಗಳು ಇದರ ಮೂಲಕ ಅಭ್ಯಾಸ ಮಾಡಲಿದ್ದಾರೆ. ಇದರ ಅನುಕೂಲವೆಂದರೆ ಸಣ್ಣ ನರಗಳು ನೈಜವಾದ ಮೃತದೇಹದಲ್ಲಿ ಕಾಣಿಸುವುದಿಲ್ಲ. ಅಂತವನ್ನು ಇಲ್ಲಿ ಗುರುತಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಹೆರಿಗೆ ಯಾವ ರೀತಿ ಆಗಲಿದೆ ಎಂಬುದನ್ನು ಈ ಟೇಬಲ್ ಮೂಲಕ ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿದೆ. ಇದು ಕೇವಲ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ನರ್ಸಿಂಗ್, ಫಿಜಿಯೋಥರಪಿ ಹಾಗೂ ದಂತ ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗೂ ಸಹಕಾರಿ. ಇದೊಂದು ಪರಿಣಾಮಕಾರಿ ಅಭ್ಯಾಸಕ್ಕೆ ಪೂರಕ ವ್ಯವಸ್ಥೆಯಾಗಿದೆ. ನಮ್ಮ ವಿಭಾಗದಲ್ಲಿ ಅಂಗರಚನಾಶಾಸ್ತ್ರ ಅಭ್ಯಾಸಕ್ಕಾಗಿ ಮೃತದೇಹಗಳು ಇವೆ. ಅವುಗಳ ಮೂಲಕ ಕಲಿಯುವ ಜೊತೆಗೆ ಇದೊಂದು ಪರಿಣಾಮಕಾರಿ ಕಲಿಕೆಗೆ ಸೂಕ್ತ ವ್ಯವಸ್ಥೆಯಾಗಿದೆ ಎಂದು ಹೇಳಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಅನಾಟಮೇಜ್ ಟೇಬಲ್ 11 (ವರ್ಚುವಲ್ ಡಿಸೆಕ್ಷನ್ ಟೇಬಲ್) ಅನ್ನು ಉದ್ಘಾಟಿಸಲಾಯಿತು. ಹೈದರಾಬಾದ್‌ನ ಯುಎಸ್‌ಪಿ ಇಂಡಿಯಾದ ಸೈಟ್ ಆಪರೇಷನ್‌ನ ಹಿರಿಯ ಉಪಾಧ್ಯಕ್ಷ ಡಾ.ಗಿರೀಶ್ ಕಪೂರ್ ಅತಿಥಿಯಾಗಿ ಪಾಲ್ಗೊಂಡಿದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ್, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸುಧೀಂದ್ರ ಭಟ್, ಡೀನ್ ಅಕಾಡೆಮಿ ಡೀನ್ ಡಾ.ವಿಶಾಲ್ ಕುಮಾರ್ ಗುಪ್ತಾ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ, ಉಪ ಪ್ರಾಂಶುಪಾಲ ಡಾ.ಎಂ.ಎನ್.ಸುಮಾ, ಅನಾಟಮಿ ವಿಭಾಗದ ಮುಖ್ಯಸ್ಥೆ ಡಾ.ಸಿ.ಎಸ್.ವಿದ್ಯಾ, ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಹಾಜರಿದ್ದರು.



ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಅನಾಟಮಿ ವಿಭಾಗದಲ್ಲಿ ವರ್ಚುವಲ್ ಡಿಸೆಕ್ಷನ್ ವ್ಯವಸ್ಥೆಯ ಅನಾಟಮೇಜ್ ಟೇಬಲ್ ಆವೃತ್ತಿ 11ರ ಉದ್ಘಾಟನೆಯನ್ನು ಮಂಗಳವಾರ ನೆರವೇರಿಸಲಾಯಿತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ಮತ್ತಿತರ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ವೈದ್ಯರ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಬ್ಯಾಗ್, ಪುಸ್ತಕ, ಲೇಖನ ಸಾಮಗ್ರಿ ವಿತರಣೆ



ಮೈಸೂರು,ಜು.1(ಎಂಟಿವೈ)– ವೈದ್ಯರ ದಿನದ ಅಂಗವಾಗಿ ಹೆಚ್.ಡಿ.ಕೋಟೆ ತಾಲೂಕಿನ ಮಂಟಿ ಹಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬ್ಯಾಗ್, ಪುಸ್ತಕ ಸೇರಿದಂತೆ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಮೈಸೂರಿನ ಅನಿ ಫೌಂಡೇಷನ್ ಹಾಗೂ ಸಾಯಿ ಚೈತನ್ಯ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ವೈದ್ಯರ ದಿನದ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅನಿ ಫೌಂಡೇಷನ್‌ನ ಮುಖ್ಯಸ್ಥರಾದ ದಂತ ವೈದ್ಯರಾದ ಡಾ. ಅನುಶ್ರೀ ಮತ್ತು ಡಾ. ನಿಸರ್ಗ ಶಾಲೆಯ 48 ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ಲೇಖನ ಸಾಮಗ್ರಿ ವಿತರಿಸಿ, ಉನ್ನತ ಗುರಿಯೊಂದಿಗೆ ಶಿಕ್ಷಣ ಪಡೆದು ಸಾಧನೆ ಮಾಡಬೇಕು. ಪ್ರತಿದಿನ ಶಿಸ್ತಿನಿಂದ ಅಧ್ಯಯನ ಮಾಡಿದರೆ ಸಾಧನೆ ಮಾಡಲು ಸಾಧ್ಯ. ಯಾವುದೇ ಹಿಂಜರಿಕೆಯಿಲ್ಲದೆ ಓದಬೇಕು. ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಗ್ರಾಮೀಣ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಧನೆ ಮಾಡುತ್ತಿದ್ದಾರೆ. ಆ ಸಾಧನೆ ಹಾದಿಗೆ ನೀವು ಸೇರಬೇಕು ಎಂದು ಸಲಹೆ ನೀಡಿದರು. ಶಿಕ್ಷಣದೊಂದಿಗೆ ಆರೋಗ್ಯ ಕಾಪಾಡಿಕೊಳ್ಳುವ ಹಾಗೂ ಸ್ವಚ್ಛತೆ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು. ಇದರೊಂದಿಗೆ ಮನೆ ಮತ್ತು ಶಾಲೆಯ ಪರಿಸರ ಸಂರಕ್ಷಣೆಗೂ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಶಾಲೆ ಶಿಕ್ಷಕ ವರ್ಗ, ಸಾಯಿ ಚೈತನ್ಯ ಟ್ರಸ್ಟ್ ಸದಸ್ಯರು ಉಪಸ್ಥಿತರಿದ್ದರು.

ಏಷ್ಯನ್ 14, ಅಂಡರ್ ಗ್ರೇಡ್ ಎ(ದಕ್ಷಿಣ ಏಷ್ಯಾ) ಟೆನ್ನಿಸ್ ಟೂರ್ನಮೆಂಟ್

ಮೈಸೂರಿನ ಪದ್ಮಪ್ರಿಯಾಗೆ ಸಿಂಗಲ್ಸ್‌ನಲ್ಲಿ 3ನೇ ಸ್ಥಾನ, ಡಬಲ್ಸ್‌ನಲ್ಲಿ ಎರಡನೇ ಸ್ಥಾನ

ಮೈಸೂರು, ಜು.1(ಎಂಟಿವೈ)– ಹೈದರಾಬಾದ್‌ನ ಜುಬ್ಲಿ ಹಿಲ್ಸ್ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ನಡೆದ ಏಷ್ಯನ್ 14 ಮತ್ತು ಅಂಡರ್ ಗ್ರೇಡ್ ಎ (ದಕ್ಷಿಣ ಏಷ್ಯಾ) ಟೆನ್ನಿಸ್ ಟೂರ್ನಮೆಂಟ್‌ನಲ್ಲಿ ಮೈಸೂರಿನ ಟೆನ್ನಿಸ್ ಪಟು ಪದ್ಮಪ್ರಿಯಾ ರಮೇಶ್ ಕುಮಾರ್ ಸಿಂಗಲ್ಸ್‌ನಲ್ಲಿ 3ನೇ ಸ್ಥಾನ ಹಾಗೂ ಡಬಲ್ಸ್ ಎರಡನೇ ಸ್ಥಾನ ಗಳಿಸಿ ಗಮನ ಸೆಳೆದಿದ್ದಾರೆ.

ಏಷ್ಯನ್ ಗ್ರೇಡ್–ಎ ಪಂದ್ಯಾವಳಿಯಲ್ಲಿ ಉನ್ನತ ರೇಟಿಂಗ್ ಹೊಂದಿರುವ ಟೆನಿಸ್ ಪಟುಗಳು ಮಾತ್ರ ಪಾಲ್ಗೊಂಡಿದ್ದು, ಎಲ್ಲಾ ಪಂದ್ಯಗಳು ತೀವ್ರ ಹಣಾಹಣಿಯಿಂದ ಕೂಡಿದ್ದವು. ಕ್ವಾರ್ಟರ್–ಫೈನಲ್ ತಲುಪಿದ ಅಗ್ರ 8 ಆಟಗಾರರಿಗೆ ವಿದ್ಯಾರ್ಥಿ ವೇತನವಾಗಿ 350 ಯುಎಸ್ ಡಾಲರ್ ಪಡೆದರು.

ಈ ಪಂದ್ಯಾವಳಿಯಲ್ಲಿ ಪದ್ಮಪ್ರಿಯಾ ರಮೇಶ್ ಸಿಂಗಲ್ಸ್‌ನಲ್ಲಿ 3ನೇ ಸ್ಥಾನ ಪಡೆದ ನಂತರ, 14 ವರ್ಷದೊಳಗಿನ ಟೆನ್ನಿಸ್ ಪಟುಗಳಲ್ಲಿ 850 ಅಂಕ ಪಡೆದು ಏಷ್ಯಾದಲ್ಲಿ 14ನೇ ಸ್ಥಾನ ಅಲಂಕರಿಸಿದ್ದಾರೆ. ಭಾರತದಲ್ಲಿ 4ನೇ ಸ್ಥಾನ, ಕರ್ನಾಟಕದಲ್ಲಿ, 1ನೇ ಸ್ಥಾನದಲ್ಲಿದ್ದಾರೆ.

ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ರಮೇಶ್‌ಕುಮಾರ್ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ 8ನೇ ತರಗತಿ ವಿದ್ಯಾರ್ಥಿಯಾಗಿದ್ದಾರೆ. ಟೆನಿಸ್ ತರಬೇತುದಾರರಾದ ರಘುವೀರ್ ಪೊನ್ನುಸ್ವಾಮಿ ಮತ್ತು ಪವನ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಸಾಗರ್ ಅವರಿಂದ ಫಿಟ್‌ನೆಸ್ ತರಬೇತಿ ಪಡೆಯುತ್ತಿದ್ದಾರೆ. ಪದ್ಮಪ್ರಿಯಾಳ ಸಾಧನೆಗೆ ಎಕ್ಸೆಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಕೆ.ಜಿ. ಮ್ಯಾಥ್ಯೂಸ್ ಅಭಿನಂದಿಸಿದ್ದಾರೆ.


ಹೈದರಾಬಾದ್‌ನ ಜುಬ್ಲಿ ಹಿಲ್ಸ್ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ನಡೆದ ಏಷ್ಯನ್ 14 ಮತ್ತು ಅಂಡರ್ ಗ್ರೇಡ್ ಎ (ದಕ್ಷಿಣ ಏಷ್ಯಾ) ಟೆನ್ನಿಸ್ ಟೂರ್ನಮೆಂಟ್‌ನಲ್ಲಿ ಮೈಸೂರಿನ ಟೆನ್ನಿಸ್ ಪಟು ಪದ್ಮಪ್ರಿಯಾ ರಮೇಶ್ ಕುಮಾರ್ ಅವರಿಗೆ ರಾಜಮುಂಡ್ರಿ ಕ್ಷೇತ್ರದ ಲೋಕಸಭಾ ಸದಸ್ಯೆ ಪುರಂದೇಶ್ವರಿ ಪ್ರಶಸ್ತಿ ವಿತರಿಸಿದರು.

ಬೆಂಗಳೂರು ಕಾಲ್ತುಳಿತ ಪ್ರಕರಣದ ಹಿನ್ನೆಲೆ

ಸಾರ್ವಜನಿಕ ಸಭೆಗಳ ಜನಜಂಗುಳಿ ನಿಯಂತ್ರಣಕ್ಕೆ ಹೊಸ ಮಾರ್ಗಸೂಚಿ ಪ್ರಕಟ

ಬೆಂಗಳೂರು, ಜು.1– ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ದುರಂತ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಇಲಾಖೆಯು ಸಾರ್ವಜನಿಕ ಸಮಾರಂಭಗಳಲ್ಲಿ ಜನಸಂದಣಿ ನಿಯಂತ್ರಣಕ್ಕಾಗಿ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಹೆಚ್ಚು ಜನ ಸೇರುವ ಕಾರ್ಯಕ್ರಮಗಳಲ್ಲಿ ಜನಜಂಗುಳಿ ನಿಯಂತ್ರಣಕ್ಕೆ ಈ ಮಾರ್ಗಸೂಚಿ ಜಾರಿಗೆ ತರಲಾಗಿದ್ದು, ಯಾವುದೇ ಬಹಳಷ್ಟು ಸಂಖ್ಯೆಯಲ್ಲಿ ಜನ ಸೇರುವ ಸಭೆ ಸಮಾರಂಭಗಳಿಗೆ ಈ ಮಾರ್ಗಸೂಚಿಗಳು ಅನ್ವಯವಾಗಲಿದೆ.

ಹಬ್ಬಗಳು, ಪ್ರತಿಭಟನೆಗಳು, ಮೆರವಣಿಗೆಗಳು ಮತ್ತು ಕ್ರೀಡಾ ಕೂಟಗಳಂತಹ ಬೃಹತ್ ಜನ ಸಮುದಾಯ ಸೇರುವ ಯಾವುದೇ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ಭದ್ರತೆ, ಕಾನೂನು–ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಈ ಮಾರ್ಗಸೂಚಿ ಜಾರಿಗೆ ತರಲಾಗಿದೆ.

ಸಾರ್ವಜನಿಕ ಕಾರ್ಯಕ್ರಮಕ್ಕೂ ಮುನ್ನ ಸ್ಥಳದ ಸಂಪೂರ್ಣ ಪರಿಶೀಲನೆ ಮತ್ತು ಕಾರ್ಯಕ್ರಮ ಆಯೋಜಕರ ಸಹಯೋಗದೊಂದಿಗೆ ವಿವರವಾದ ಯೋಜನೆ ರಚಿಸುವುದು ಈಗ ಕಡ್ಡಾಯ. ಕಾರ್ಯಕ್ರಮ ನಡೆಯುವ ಸ್ಥಳದ ಸಾಮರ್ಥ್ಯ, ತುರ್ತು ನಿರ್ಗಮನ ಮಾರ್ಗಗಳ ಲಭ್ಯತೆ ಮತ್ತು ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳನ್ನು ಪರಿಶೀಲಿಸಲೇಬೇಕು. ಜನಸಂದಣಿ ನಿರ್ವಹಣೆಗೆ ಪೊಲೀಸರ ಹೊಣೆಗಾರಿಕೆಗಳು, ಟ್ರಾಫಿಕ್ ನಿಯಂತ್ರಣ, ವೈದ್ಯಕೀಯ ನೆರವು ಮತ್ತು ಟಿಕೆಟ್ ವ್ಯವಸ್ಥೆಗಳನ್ನು ಮಾಡಲೇಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

- ಸಾರ್ವಜನಿಕರ ಪ್ರವೇಶ ದ್ವಾರಗಳಲ್ಲಿ ತರಬೇತಿ ಪಡೆದ ಸಿಬ್ಬಂದಿಯನ್ನು ನಿಯೋಜಿಸಬೇಕು.
- ಜನಸಂದಣಿಯನ್ನು ಸುಗಮಗೊಳಿಸಲು ಕಿಖ ಕೋಡ್ ಅಥವಾ ಬಯೋಮೆಟ್ರಿಕ್ ತಂತ್ರಜ್ಞಾನದ ಬಳಕೆ ಮತ್ತು ವಿಭಿನ್ನ ವರ್ಗಗಳಿಗೆ (ಉದಾಹರಣೆ: ಪುರುಷರು, ಮಹಿಳೆಯರು, ವೃದ್ಧರು, ವಿಶೇಷಚೇತನರು) ಪ್ರತ್ಯೇಕ ಪ್ರವೇಶ ದ್ವಾರಗಳನ್ನು ಒದಗಿಸಬೇಕು.
- ತುರ್ತು ನಿರ್ಗಮನ ಮಾರ್ಗಗಳನ್ನು ಸ್ಪಷ್ಟವಾಗಿ ಗುರುತಿಸಬೇಕು ಮತ್ತು ಯಾವುದೇ ಸಂದರ್ಭದಲ್ಲಿಯೂ ಲೌಡ್‌ಸ್ಪೀಕರ್‌ಗಳ ಮೂಲಕ ಸಾರ್ವಜನಿಕರಿಗೆ ಸೂಚನೆಗಳನ್ನು ನೀಡುವ ವ್ಯವಸ್ಥೆ ಇರಬೇಕು.
- ಅಲ್ಲದೆ, ತುರ್ತು ವಾಹನಗಳಾದ ಅಂಬುಲೆನ್ಸ್‌ಗಳಿಗೆ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ವೈದ್ಯಕೀಯ ನೆರವಿನ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಬೇಕು.



ತುರ್ತು ಪರಿಸ್ಥಿತಿ ನಿರ್ವಹಣೆ: ಪ್ರತಿಭಟನೆ ಅಥವಾ ಹವಾಮಾನ ದುರಂತಗಳಂತಹ ಅನಿರೀಕ್ಷಿತ ಪರಿಸ್ಥಿತಿಗಳಿಗೆ ತಯಾರಿ ನಡೆಸಲು ಸಿಮ್ಯುಲೇಷನ್ ಡ್ರಿಲ್‌ಗಳನ್ನು ನಡೆಸುವ ಮೂಲಕ ರಕ್ಷಣಾ ತಂಡಗಳ ಜವಾಬ್ದಾರಿಗಳನ್ನು ಮೊದಲೇ ಗುರುತಿಸಬೇಕು. ಯಾವುದೇ ಘಟನೆಯ ಸಮಯದಲ್ಲಿ, ಪೊಲೀಸರು ಅನಗತ್ಯ ತಕರಾರುಗಳನ್ನು ತಪ್ಪಿಸಿ, ಸ್ಥಳೀಯರ ಸುರಕ್ಷತೆಗೆ ಆದ್ಯತೆ ನೀಡಬೇಕು. ಜನಸಂದಣಿ ನಿಯಂತ್ರಿಸಲು ಅಥವಾ ಚದುರಿಸಲು ಬಲವನ್ನು ಬಳಸುವ ಅನಿವಾರ್ಯತೆ ಬಂದಾಗ, ಮೂರು ಬಾರಿ ಎಚ್ಚರಿಕೆಗಳನ್ನು ನೀಡಿದ ನಂತರವೇ ಕಾನೂನು ರೀತಿ ನಡೆದಯಕೊಳ್ಳಬೇಕು ಮತ್ತು ಕಾನೂನುಬದ್ಧ ಬಂಧನಕ್ಕೆ ಮುಂದಾಗಬೇಕೆಂದು ಎಂದು ಮಾರ್ಗಸೂಚಿಯಲ್ಲಿದೆ.

ಜನಸಂದಣಿಯ ಸಂಚಾರ, ತೆಗೆದುಕೊಂಡ ನಿರ್ಧಾರಗಳು ಮತ್ತು ನೀಡಿದ ಎಚ್ಚರಿಕೆಗಳನ್ನು ಆಡಿಯೋ/ವಿಡಿಯೋ ದಾಖಲೆಗಳ ಮೂಲಕ ದಾಖಲಿಸಬೇಕು. ಕರ್ನಾಟಕ ಪೊಲೀಸ್ ಕಾಯಿದೆ ಮತ್ತು ಬಿಎನ್‌ಎಸ್‌ಎಸ್ ಪಾಲನೆಯ ಮೂಲಕ ಸಾರ್ವಜನಿಕ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ಮಾನವ ಘನತೆ ಎತ್ತಿಹಿಡಿಯುವ ಗುರಿ ಹೊಂದಿದೆ ಎಂದು ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.

ಶಾಲಾ ದಿನಗಳಲ್ಲಿ ಶಿಕ್ಷಕರ ಅನ್ಯ ಕಾರ್ಯಕ್ಕೆ ನಿಯೋಜಿಸಬಾರದು

ಸರ್ಕಾರದ ಸುತ್ತೋಲೆ

ಬೆಂಗಳೂರು, ಜು.1(ಕೆಎಂಶಿ)– ಸರ್ಕಾರಿ ಶಾಲಾ ಮಕ್ಕಳು ಕಲಿಕೆ ಸಮಯದಲ್ಲಿ ಶಿಕ್ಷಕರನ್ನು ಬೇರೆ ಕೆಲಸಗಳಿಗೆ ನಿಯೋಜಿಸಿದರೆ, ಅಂತಹ ಆದೇಶ ನೀಡುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಈ ಸಂಬಂಧ ಸುತ್ತೋಲೆ ಹೊರಡಿಸಿದ್ದು, ಸರ್ಕಾರಿ ಶಾಲಾ ವಿದ್ಯಾರ್ಥಿಗಳನ್ನು ಶಾಲೆಯ ಹೊರಗಡೆ ವಿವಿಧ ಕಾರ್ಯಕ್ರಮಗಳಿಗೆ ಪ್ರೇಕ್ಷಕರಾಗಿ ಭಾಗವಹಿಸಲು ಕರೆದುಕೊಂಡು ಹೋಗಲು ನಿರ್ದೇಶಿಸಬಾರದು.

ಶಾಲಾ ದಿನಗಳಲ್ಲಿ ಸರ್ಕಾರಿ ಶಾಲಾ ಶಿಕ್ಷಕರು, ಮುಖ್ಯೋಪಾಧ್ಯಾಯರನ್ನು ಯಾವುದೇ ತರಬೇತಿ, ಕಾರ್ಯಾಗಾರ, ಸಭೆ ಸೇರಿದಂತೆ ಇತರೆ ಚಟುವಟಿಕೆಗಳಿಗೆ ನಿಯೋಜನೆ ಮಾಡಬಾರದು. ಈ ಸಂಬಂಧ ಲಿಖಿತ ಅಥವಾ ಮೌಖಿಕ ಆದೇಶ ಹೊರಡಿಸದಂತೆ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸ್ಪಷ್ಟ ಆದೇಶ ನೀಡಲಾಗಿದೆ.

ಶಾಲಾ ಸಮಯದಲ್ಲಿ ಶಿಕ್ಷಕರು ಮತ್ತು ಶಾಲಾ ಮುಖ್ಯೋಪಾಧ್ಯಾಯರು ಯಾವುದೇ ಸಭೆ ಕರೆಯಬಾರದು, ಅಥವಾ ವಿಡಿಯೊ ಕಾನ್ಫರೆನ್ಸ್ ನಡೆಸಬಾರದು, ಶಾಲೆಗೆ ಭೇಟಿ ನೀಡುವ ಅಧಿಕಾರಿಗಳು ತರಗತಿಗಳಿಗೆ ತೊಂದರೆ ಆಗದಂತೆ ನಡೆದುಕೊಳ್ಳಬೇಕು.

ಸಾರ್ವಜನಿಕ ರಜೆ ಮತ್ತು ಬೇಸಿಗೆ ರಜೆ ಹೊರತುಪಡಿಸಿ, ಶಾಲಾ ದಿನಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಅಥವಾ ರಾಜ್ಯ ಮತ್ತು ಕೇಂದ್ರ ಸರ್ಕಾರ, ಖಾಸಗಿ ಸಂಸ್ಥೆಗಳ ಬಾಹ್ಯ ಪರೀಕ್ಷೆಗಳನ್ನು ಶಾಲಾ ಆವರಣದಲ್ಲಿ ನಡೆಸಬಾರದು ಎಂಬ ಕಟ್ಟುನಿಟ್ಟಿನ ಆದೇಶ ಹೊರಡಿಸಲಾಗಿದೆ.

ಎರಡು ದಿನಗಳ ಹೈ ಲೈಫ್ ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ ; ಇಂದು ಕೊನೆ ದಿನ


ಮೈಸೂರಿನ ರ್‍ಯಾಡಿಷನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಮಂಗಳವಾರ ಹೈ ಲೈಫ್ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ಮೈಸೂರು,ಜು.1(ಪಿಎಂ)– ನಗರದ ರ್‍ಯಾಡಿಷನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಮಂಗಳವಾರ ಬೆಳಗ್ಗೆ ಹೈ ಲೈಫ್ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ (ಶಾಪಿಂಗ್ ಉತ್ಸವ) ಚಾಲನೆ ದೊರೆಯಿತು.

ಎರಡು ದಿನಗಳ ಈ ಶಾಪಿಂಗ್ ಉತ್ಸವದಲ್ಲಿ (ಜು.1 ಮತ್ತು 2) ಅತ್ಯುತ್ತಮ ಆಭರಣಗಳು ಹಾಗೂ ಪರಿಕರಗಳ ಲಭ್ಯವಿವೆ. ಆ ಮೂಲಕ ಈ ಉತ್ಸವವು ಭಾರತೀಯ ಫ್ಯಾಷನ್‌ನ ಅತ್ಯುತ್ತಮ ಸಂಗ್ರಹವಾಗಿದೆ. ಶಾಪಿಂಗ್‌ನಲ್ಲಿ ಲೆಹಂಗಾಗಳು, ಸೀರೆ, ಆಧುನಿಕ ನಿಲುವಂಗಿಗಳು ಸೇರಿದಂತೆ ನಾನಾ ಉಡುಗೆ ತೊಡುಗೆಗಳೊಂದಿಗೆ ದೊರೆಯಲಿವೆ.

ಜೊತೆಗೆ ವಿವಿಧ ರೀತಿಯ ಅತ್ಯುತ್ತಮ ಆಭರಣಗಳ ಸಂಗ್ರಹವೂ ಇಲ್ಲಿದೆ. ಪ್ರತಿಯೊಂದು ಶೈಲಿ ಹಾಗೂ ಎಲ್ಲಾ ರೀತಿಯ ಗ್ರಾಹಕರ ಆದ್ಯತೆಗೆ ಅನುಗುಣವಾಗಿ ವಿವಿಧ ರೀತಿಯ ಉನ್ನತ ಮಟ್ಟದ ಉಡುಗೆ ಹಾಗೂ ಪರಿಕರಗಳು ಇಲ್ಲಿವೆ.

ಹೈ ಲೈಫ್ ಸಹ ಸಂಘಟಕಿ ಶೋಮಿಕಾ ಎಸ್.ರಾವ್ ಮಾತನಾಡಿ, ಹೈ ಲೈಫ್ ಶಾಪಿಂಗ್ ಉತ್ಸವವು ಫ್ಯಾಷನ್‌ಗೆ ಸಂಬಂಧಿಸಿದಂತೆ ಅತ್ಯುತ್ತಮವಾದವುಗಳ ಪ್ರದರ್ಶನದ ಉತ್ತಮ ವೇದಿಕೆಯಾಗಿದೆ. ಮೈಸೂರಿನ ವಧುಗಳ ಅಭಿರುಚಿಗೆ ತಕ್ಕಂತ ವಿಶಿಷ್ಟ ಸಂಗ್ರಹಗಳನ್ನು ಒಟ್ಟುಗೂಡಿಸಲು ನಾವು ಶ್ರಮಿಸಿದ್ದೇವೆ. ಮೈಸೂರಿನಲ್ಲಿ ಈ ಪ್ರದರ್ಶನ ಆಯೋಜಿಸಲು ನಾವು ಉತ್ಸುಕರಾಗಿದ್ದೇವೆ. ಮೈಸೂರು, ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಪ್ರದರ್ಶನವನ್ನು ಹೈ ಲೈಫ್ ಎಕ್ಸಿಬಿಷನ್ಸ್‌ನ ಸಂಯೋಜಕ ಎಸ್.ಶ್ರೀಕಾಂತ್ ಹಲವರ ಸಹಕಾರದೊಂದಿಗೆ ಸಂಯೋಜಿಸಿದ್ದಾರೆ ಹೈ ಲೈಫ್ ಎಕ್ಸಿಬಿಷನ್ಸ್ ಯೋಜನಾ ವ್ಯವಸ್ಥಾಪಕಿ ರಿಯಾ, ಸಮಾಜ ಸೇವಕಿ ಅಪೂರ್ವ ಶೇಖರ್, ಕೇಂಬ್ರಿಡ್ಜ್ ಮಾಂಟೆಸ್ಸರಿ ಪ್ರಿ–ಸ್ಕೂಲ್‌ನ ಸಿಇಓ ಎಸ್.ವರ್ಷ, ದಿ ಬಾಕ್ಸ್‌ಸ್ಟೋರೀಸ್; ಲಕ್ಸರಿ ಗಿಫ್ಟಿಂಗ್ ಉದ್ಯಮಿ ಸಿ.ಎಸ್.ವಿನುತಾ ಮನ್ನಾರ್, ದಿ ಲರ್ನಿಂಗ್ ಕರ್ವ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಉಪಾಧ್ಯಕ್ಷೆ ಶಿಲ್ಪಶ್ರೀ ಬೈಸಾನಿ, ದಂತವೈದ್ಯೆ, ನಟಿ, ನಿರ್ಮಾಪಕಿ ಮತ್ತು ದೂರದರ್ಶನ ನಿರೂಪಕಿ ಡಾ.ಜಾನ್ವಿ ರಾಯಲ, ಲೆಗಸಿ ತರಬೇತುದಾರರಾದ ನಿಶಿತಾ ಕೃಷ್ಣಸ್ವಾಮಿ, ರಾಯಲ್ ಟಸ್ಕರ್ ಲಕ್ಸರಿ ಸರ್ವೀಸ್ ಅಪಾರ್ಟ್‌ಮೆಂಟ್‌ನ ಮಾಲೀಕರಾದ ಅನುಷಾ ಎಸ್.ದೇವರಹಟ್ಟಿ, ದೃಶ್ಯ ಕಲಾವಿದೆ ಮೇಘನಾ ಶೇಖರ್, ಇಂಟೀರಿಯರ್ ಡಿಸೈನರ್ ಪೂಜಿತಾ ಪುರುಷೋತ್ತಮ್, ಕಲಾವಿದೆ ಪ್ರತಿಭಾ ಪಾಠಕ್ ಅವರು ಉತ್ಸವದ ಆಯೋಜನೆಗೆ ಸಹಕಾರ ನೀಡಿದ್ದಾರೆ.

ವಿಶೇಷವಾಗಿ ವಧುವಿನ ಶಾಪಿಂಗ್‌ನ ಉತ್ತಮ ಅನುಭವಕ್ಕಾಗಿ ಕೊನೆ ದಿನವಾದ ಜು.2ರ ಬುಧವಾರ (ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ) ರ್‍ಯಾಡಿಷನ್ ಬ್ಲೂ ಪ್ಲಾಜಾದಲ್ಲಿರುವ ಹೈ ಲೈಫ್ ಪ್ರದರ್ಶನ ಮೇಳಕ್ಕೆ ಭೇಟಿ ನೀಡಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕಣ್ಣಪ್ಪ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ರಾಜರತ್ನಾಕರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ–1), ಎಕ್ಸ್ ಅಂಡ್ ವೈ (ಕ–3)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ):

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

6ನೇ ದಿನ, ಬುಧವಾರ, 2–7–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

I. ಕೊಡ್ಲಿಪೇಟ್ ಪ್ಲೇಟ್–2000 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1 ಸೈಗಾನ್ 2 ಮೈಂಡ್ ಗೇಮ್ಸ್ 3. ಬ್ರೋ ಕಾಸ್ಟನ್

II. ಕಿನ್ಸ್‌ಕಿ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1. ಐ ದಿ ಮೈಂಡ್ 2. ಆರ್ ಮಾಮೆಂಟ್ 3. ಫ್ರೀ ಸ್ಪಿರಿಟೆಡ್

III. ರಿಪಬ್ಲಿಕನ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1 ಕೋಡ್ ಆಫ್ ಹಾನರ್ 2 ಬ್ರೇಕ್ ಅವೇ 3. ಸೆರಾಯ್

IV. ಮೈಸೂರ್ ಫಿಲ್ಲಿಸ್ ಟ್ರೈಯಲ್ ಸ್ಟೇಕ್ಸ್ –1400 ಮೀ. 3 ವರ್ಷ(ಟರ್ಮ್ಸ್). ಸಂ4.00ಕ್ಕೆ
1 ಶೈನ್ 2. ಸೀದ ಲೈಟ್ 3. ಥ್ರಿಲ್ ಫೀ

V. ರಿನೌಡ್ ಪ್ಲೇಟ್–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ಸ್ಟೆಲ್ಲಾಂಟೀಸ್ 2. ರೈಸ್ ಅಗೇನ್ 3. ಹಿರೋಯಿಸಮ್

VI. ಹಿರಿಯೂರ್ ಪ್ಲೇಟ್ –1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಡೆಕಾಕಾರ್ನ್ 2. ಪಾಲ್ಕನ್ ಪ್ಯೂರಿ 3. ಸ್ಟ್ರೀಟ್ ಸೆನ್ಸ್

ದಿನದ ಅತ್ಯುತ್ತಮ	ಸ್ಟೆಲ್ಲಾಂಟೀಸ್
ಡಬ್ಬಲ್	ಸೈಗಾನ್, ಕೋಡ್ ಆಫ್ ಹಾನರ್
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5 ಮತ್ತು 6
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜೆಸಿ

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆ

ನವದೆಹಲಿ, ಜು.1– ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಸಿಲಿಂಡರ್‌ಗೆ 58.50ರಷ್ಟು ಕಡಿಮೆ ಮಾಡಲಾಗಿದೆ. ವಿಮಾನಗಳಲ್ಲಿ ಬಳಕೆ ಮಾಡುವ ಇಂಧನದ (ಎಟಿಎಫ್) ಬೆಲೆಯನ್ನು ಶೇಕಡ 7.5ರಷ್ಟು ಹೆಚ್ಚು ಮಾಡಲಾಗಿದೆ.



ಎಟಿಎಫ್ ಬೆಲೆಯನ್ನು ಮೂರು ಬಾರಿ ಕಡಿಮೆ ಮಾಡಲಾಗಿತ್ತು. ಈಗಿನ ಹೆಚ್ಚಳದ ನಂತರ ಎಟಿಎಫ್ ಬೆಲೆಯು ದೆಹಲಿಯಲ್ಲಿ ಕಿಲೋ ಲೀಟರ್‌ಗೆ 89,344 ಆಗಿದೆ. ಈ ಬೆಲೆ ಏರಿಕೆಯು ವಿಮಾನಯಾನ ಕಂಪನಿಗಳ ಮೇಲಿನ ಹೊರೆಯನ್ನು ಹೆಚ್ಚು ಮಾಡಲಿದೆ. 19 ಕೆ.ಜಿ. ತೂಕದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ನವದೆಹಲಿಯಲ್ಲಿ ಮಂಗಳವಾರದಿಂದ 1,665ಕ್ಕೆ ತಗ್ಗಿದೆ. ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಸತತ ನಾಲ್ಕನೆಯ ಬಾರಿಗೆ ಇಳಿಕೆ ಮಾಡಲಾಗಿದೆ. ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ವ್ಯತ್ಯಾಸ ಆಗಿಲ್ಲ.

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಶ್ರೀ ಶ್ರೀಕಂಠೇಶ್ವರಸ್ವಾಮಿ, ದೇವಾಲಯ, ನಂಜನಗೂಡು

ಸಂಖ್ಯೆ: ಎಸ್‌ಎಸ್‌ಟಿ/ಪಿಆರ್/ಗಿ.ಕ./11/2025–26 ದಿನಾಂಕ:27–06–2025

2025ನೇ ಸಾಲಿನ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳ ವಿವರ:

ಕ್ರ.ಸಂ.	ದಿನಾಂಕ	ಸಮಯ	ಕಾರ್ಯಕ್ರಮದ ವಿವರ
1.	ದಿ: 03–07–2025 ಗುರುವಾರ	ರಾತ್ರಿ 8–00 ಗಂಟೆಗೆ	ವರಪೂಜಾ ಮಹೋತ್ಸವ
2.	ದಿ: 04–07–2025 ಶುಕ್ರವಾರ	ಸಂಜೆ: 5–00 ಗಂಟೆಗೆ	"ಕಾಶಿಯಾತ್ರಾ" ಮಹೋತ್ಸವ ಮತ್ತು ರಾತ್ರಿ 6–20 ರಿಂದ 7–00 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ "ಧಾರಾಮಹೋತ್ಸವ"
3.	ದಿ: 08–07–2025 ಮಂಗಳವಾರ ದಿ: 09–07–2025 ಬುಧವಾರ ದಿ: 10–07–2025 ಗುರುವಾರ	ಸಂಜೆ: 7–00 ಗಂಟೆಗೆ	ಕಪಿಲಾ ನದಿಯಲ್ಲಿ " ತೆಪ್ಪೋತ್ಸವ "

ದಿನಾಂಕ: 05–07–2025 ರಿಂದ ದಿನಾಂಕ: 10–07–2025ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀಯವರ ಕೃಪೆಗೆ ಪಾತ್ರರಾಗಬೇಕಾಗಿ ಕೋರಿದೆ.
ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವದ ಆಚಾರ್ಯತ್ವ ಶ್ರೀ ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಸಹಿ/–	ಸಹಿ/–	ಸಹಿ/–	ಸಹಿ/–
ಜಗದೀಶ್ ಕುಮಾರ್ ಎಂ. ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.	ಡಾ. ಪಿ. ಶಿವರಾಜು (ಸೂಪರ್ ಟೈಂ ಸ್ಕೇಲ್) ಕ.ಆ.ಸೇ. ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು	ಲಕ್ಷ್ಮಿಕಾಂತರೆಡ್ಡಿ ಜಿ. ಭಾ.ಆ.ಸೇ. ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು	ಡಾ। ವೆಂಕಟೇಶ್ ಎಂ.ವಿ. ಭಾ.ಆ.ಸೇ. ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

ಭಾವಪೂರ್ಣ ಶ್ರದ್ಧಾಂಜಲಿ



ಹೇಮಚಂದ್ರ.ಎಸ್


ಬಾಳೆಕಾಯಿ ಮಂಡಿ, ದೇವರಾಜ ಮಾರ್ಕೇಟ್, ಮೈಸೂರು

ಜನನ: 04.06.1963 ಮರಣ:01.07.2025

ಇವರು ದಿನಾಂಕ: 01.07.2025 ಮಂಗಳವಾರ ಮಧ್ಯಾಹ್ನ 2.30ಕ್ಕೆ ದೈವಾದೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 02.07.2025 ಬುಧವಾರ 12.30 ಗಂಟೆಗೆ ಚಾಮುಂಡಿಬೆಟ್ಟದ ಚಿತಾಗಾರದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಧರ್ಮಪತ್ನಿ ಮತ್ತು ಮಕ್ಕಳು ಹಾಗೂ ಕುಟುಂಬವರ್ಗ ಮತ್ತು ದೇವರಾಜ ಮಾರ್ಕೆಟ್ ಬಾಳೆಕಾಯಿ ವರ್ತಕರು, ಮೈಸೂರು

ACKNOWLEDGEMENT & MAADA INVITE



KODIRA NANAIAH (PRAKASH)

We thank the members of Kodava Samaja, Kodagu Sahakara Sangha, Sree Kaveri Kodagu Mahila Sangha, Sree Kavery Kodava Okkoota, N.R. Mohalla, Mysuru and all our friends, neighbours & relatives for their kind support at the funeral of **KODIRA NANAIAH (PRAKASH)** on **Monday 23rd June 2025.**

The Maada ceremony has been arranged at **Kodagu Sahakara Sangha,** Jayalakshmipuram, Mysuru on **Thursday 3rd July 2025 at 11am.** Kindly treat this as a personal invitation, attend the ceremony and pray for the departed soul.

— Wife, Children & Family Members, Mob: 98800 14341

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಎಸ್. ವಿನೋದಮ್ಮ ನವರು

(ಮಾಜಿ ಶಾಸಕ ಲೇಟ್ ಜಿ. ಚಾಮಯ್ಯ ರವರ ಮಗ ಲೇಟ್ ಜಿ.ಸಿ. ಜಯರಾಮ್ ರವರ ಧರ್ಮಪತ್ನಿ)
ಬಾಬುರಾಯನಕೊಪ್ಪಲು ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ
ಇಲ್ಲಿ ವಾಸವಾಗಿರುವ ಲೇಟ್ ಜಿ.ಸಿ. ಜಯರಾಮ್ ರವರ ಮಕ್ಕಳಾದ
ಜೆ. ಮಧುಸೂದನ್ ಮತ್ತು ಜೆ ವಿಷ್ಣು ರವರು ಮಾಡುವ ವಿಜ್ಞಾಪನೆಗಳು.
ದಿನಾಂಕ 21.06.2025ನೇ ಶನಿವಾರ ನಮ್ಮ ಪೂಜ್ಯ ತಾಯಿಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 03–07–2025ನೇ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಬಾಬುರಾಯನಕೊಪ್ಪಲು ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಮಕ್ಕಳಾದ ಜೆ. ಮಧುಸೂದನ್, ಜೆ. ವಿಷ್ಣು ಮತ್ತು ಸೊಸೆ, ಮೊಮ್ಮಕ್ಕಳು, ಕುಟುಂಬವರ್ಗದವರು

ಮೂರನೇ ವರ್ಷದ ಪುಣ್ಯಸ್ಮರಣೆ



ಕಾರ್ತಿಕ್ ಕುಮಾರ್ ಎಂ.ಬಿ.

ನೀವು ಕೊಟ್ಟ ನಗು ನಮ್ಮಲ್ಲಿ ಜೀವಂತ, ನಮ್ಮ ಮನಸ್ಸಿಗೆ ನೀವು ಅನುದಿನವೂ ಸ್ವಂತ...

ದುಃಖತಪ್ತರು : ಬೆಟ್ಟೇಗೌಡ, ಮೀನಾಕ್ಷಿ, ನಿತಿನ್, ಪ್ರೀತಿ, ಹೇಮಂತ್ ಗೌಡ, ಧ್ರುವಗೌಡ, ಕುಟುಂಬವರ್ಗದವರು, ಸ್ನೇಹಿತರು, ಮಂಚೇಗೌಡನಕೊಪ್ಪಲಿನ ಗ್ರಾಮಸ್ಥರು

ಮಾರ್ಬಳ್ಳಿ ಗ್ರಾಮಪಂಚಾಯಿತಿ ಕಾರ್ಯಾಲಯ
ಜಯಪುರ ಹೋಬಳಿ, ಮೈಸೂರು ತಾಲ್ಲೂಕು

ಹರಾಜು ಪ್ರಕಟಣೆ

ದಿನಾಂಕ:09.07.2025 ನೇ ಬುಧವಾರದಂದು ಬೆಳಗ್ಗೆ 11.30 ಗಂಟೆಗೆ ಸರಿಯಾಗಿ ಮಾರ್ಬಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಗ್ರಾಮಗಳ ಕೆರೆಯ ಮೀನು ಸಾಕುವಾರು ಹಕ್ಕಿನ ಟೆಂಡರ್/ ಬಹಿರಂಗ ಹರಾಜನ್ನು ಗ್ರಾಮಪಂಚಾಯಿತಿ ಆವರಣದಲ್ಲ ನಡೆಸಲಾಗುವುದು. ಆಸಕ್ತಿಯುಳ್ಳವರು ಹರಾಜಿನಲ್ಲಿ ಭಾಗವಹಿಸಬಹುದು ಎಂದು ಈ ಮೂಲಕ ಕೋರಲಾಗಿದೆ.

ಕ್ರ.ಸಂ	ಗ್ರಾಮದ ಹೆಸರು	ಕೆರೆಯ ಹೆಸರು
01.	ಮಾರ್ಬಳ್ಳಿ	ಮಾರ್ಬಳ್ಳಿ ಊರ ಮುಂದಿನ ಕೆರೆ
02.	ಮಾರ್ಬಳ್ಳಿ	ನನಗಳ್ಳ ಕೆರೆ
03.	ಬಿ.ಕಾಟೂರು	ಬಿ.ಕಾಟೂರು ಕೆರೆ
04.	ಅರಸನಕೆರೆ	ಅರಸನಕೆರೆ ಊರ ಮುಂದಿನ ಕೆರೆ
05.	ಅರಸನಕೆರೆ	ಚಿಕ್ಕಮ್ಮನ ಕೆರೆ

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಾರ್ಬಳ್ಳಿ ಗ್ರಾಮಪಂಚಾಯಿತಿ ಮೈಸೂರು ತಾಲ್ಲೂಕು

ಮೈಸೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘ (ನಿ)

ನಂ.463/1, ಸಿಎಚ್–1, ಡಿ.ಸುಬ್ಬಯ್ಯ ರಸ್ತೆ, ಚಾಮರಾಜ ಜೋಡಿ ರಸ್ತೆ, ಕೃಷ್ಣ ಬೇಕರಿ ಹತ್ತಿರ, ಚಾಮರಾಜ ಮೊಹಲ್ಲ, ಮೈಸೂರು–570004
ಫೋನ್ ನಂ. 9448160762, 9148108615
ಇ–ಮೇಲ್ : mccemployeessociety@gmail.com

ವಾಣಿಜ್ಯ ಜಾಗ ಬಾಡಿಗೆಗಿದೆ

ಮೈಸೂರು ನಗರದ ಚಾಮರಾಜ ಜೋಡಿ ರಸ್ತೆ ಡಿ.ಸುಬ್ಬಯ್ಯ ರಸ್ತೆ, ಕೃಷ್ಣ ಬೇಕರಿ ಹತ್ತಿರ ಮೈಸೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘ ಶತಮಾನೋತ್ಸವ ಭವನದ ಕಟ್ಟಡ ನೆಲ ಮಳಿಗೆ, ಮೊದಲನೆ ಮಹಡಿ ಮಳಿಗೆ, ಎರಡನೆ ಮಹಡಿ ಮಳಿಗೆಯ ಜಾಗವನ್ನು ಬಾಡಿಗೆ ನೀಡಲಾಗುತ್ತಿದ್ದು ಅಗತ್ಯ ಇರುವವರು ಸಂಪರ್ಕಿಸಬೇಕಾಗಿ ಕೋರಿದೆ.

ಫೋನ್ ನಂ. 9448160762, 9148108615

ಸಹಿ/– ಕಾರ್ಯದರ್ಶಿ

ಭಾವಪೂರ್ಣ ಶ್ರದ್ಧಾಂಜಲಿ



ಜನನ : 14-01-1962

ಶ್ರೀ ಕೆ.ಎಂ. ಶಂಕರ್

ಮರಣ : 01-07-2025

ಬಿನ್ ಬೊಕ್ಕಯ್ಯನ ದೊಡ್ಡಣನವರ ಮಗ
ಕನ್ನೇಗೌಡನಕೊಪ್ಪಲು, ಮೈಸೂರು
(ಮಾಜಿ ನಗರ ಪಾಲಿಕೆ ಸದಸ್ಯರು
(ವಾರ್ಡ್ ನಂ. 22, ಶಾರದಾದೇವಿನಗರ 2007 ರಿಂದ 2012)
ಹಾಗೂ ಹರಳಿಕಟ್ಟೆ ಸೇವಾ ಸಮಿತಿ ಅಧ್ಯಕ್ಷರು ಮತ್ತು
ಅಯ್ಯಪ್ಪಸ್ವಾಮಿ ದೇವಸ್ಥಾನದ ಉಪಾಧ್ಯಕ್ಷರು, ಶಾರದಾದೇವಿನಗರ, ಮೈಸೂರು

ಇವರು ದಿನಾಂಕ : 01-07-2025 ರಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 02-07-2025ನೇ ಬುಧವಾರ ಬೆಳಿಗ್ಗೆ 12 ಗಂಟೆಗೆ ಕನ್ನೇಗೌಡನ ಕೊಪ್ಪಲು ರುದ್ರಭೂಮಿಯಲ್ಲಿ (ಕಾವೇರಿ ಸ್ಕೂಲ್ ಪಕ್ಕ) ಇಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಕುಟುಂಬವರ್ಗದವರು

ಸಾರ್ವಜನಿಕರ ಗಮನಕ್ಕಾಗಿ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಟೌನ್ ಸುಬ್ರಮಣ್ಯ ದೇವಸ್ಥಾನ ರಸ್ತೆಯಲ್ಲಿರುವ ಮನೆ ಸಂಖ್ಯೆ 7/333 ರಲ್ಲಿ ವಾಸವಾಗಿರುವ ಎನ್.ಎಸ್.ಚಿನ್ನಸ್ವಾಮಿ ಅವರ ಮಗನಾದ 44 ವರ್ಷ ವಯಸ್ಸಿನ ಶ್ರೀ ಎನ್.ಸಿ. ಬಾಲಾಜಿ ಇವರ ಮತ್ತು ಇವರ ಸೂಚಿತ ಪ್ರತಿನಿಧಿಗಳ ಇರಾದೆಯ ಮೇರಗೆ,
ಈ ಕೆಳಗೆ ಕಾಣಿಸಿರುವ ಷೆಡ್ಯೂಲ್ ಸ್ವತ್ತು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಕಸಬಾ ಹೋಬಳಿ ಸಿಂಧುವಳ್ಳಿ ಗ್ರಾಮದ ಸ.ನಂ.176/3 ರ 1 ಎಕರೆ 05 ಗುಂಟೆ ಮತ್ತು ಸ.ನಂ.176/5ರ 34 ಗುಂಟೆ ಬಾಗಾಯ್ತು ಜಮೀನು ನಂಜನಗೂಡು (ಗ್ರಾಮಾಂತರ), ಕೆಂಪೇಗೌಡ ಲೇಔಟ್, 2ನೇ ರಸ್ತೆಯ ಮನೆ ಸಂಖ್ಯೆ 331 "ನಿಸರ್ಗ" ಇಲ್ಲಿ ವಾಸವಾಗಿರುವ ಲೇಟ್ ನರಸಿಂಹಭಟ್ಟ ಅವರ ಮಗನಾದ 65 ವರ್ಷ ವಯಸ್ಸಿನ ಶ್ರೀ ಎ.ಎನ್.ಲಕ್ಷ್ಮಿಕಾಂತ ಅವರಿಗೆ ಕ್ರಯದ ಮೂಲಕ ಪ್ರಾಪ್ತವಾಗಿದ್ದು, ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧೀನಾನುಬವ ಹೊಂದಿರುವ ಆಸ್ತಿಯಾಗಿರುತ್ತದೆ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಹಾಗೂ ಅವರ ಸ್ನೇಹಿತರು ಖರೀದಿಸಲು ನಿರ್ಧರಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾರಿಗಾದರೂ ಹಕ್ಕು, ಹಿತಾಸಕ್ತಿ, ಋಣಭಾರ, ತಕರಾರು ಇದ್ದಲ್ಲಿ ಈ ಕೆಳಕಂಡ ವಕೀಲರ ಕಛೇರಿಗೆ ಸಂಬಂಧಪಟ್ಟ ದಾಖಲಾತಿಗಳೊಡನೆ 7 ದಿನಗಳೊಳಗೆ ಹಾಜರುಪಡಿಸಿ, ಲಿಖಿತ ತಕರಾರನ್ನು ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿಕೊಳ್ಳಲಿದ್ದು, ನಂತರದಲ್ಲಿ ಬರತಕ್ಕ ತಕರಾರುಗಳು ನನ್ನ ಕಕ್ಷಿದಾರರನ್ನು ಬಾಧ್ಯಪಡಿಸುವುದಿಲ್ಲ ಎಂದು ಹಾಗೂ ಮುಂದಿನ ಆಗು – ಹೋಗುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತುಗಳ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಸಿಂಧುವಳ್ಳಿ ಗ್ರಾಮದ ಸ.ನಂ.176/3 ರಲ್ಲಿರುವ 1 ಎಕರೆ 05 ಗುಂಟೆ ವಿಸ್ತೀರ್ಣವುಳ್ಳ ಬಾಗಾಯ್ತು ಜಮೀನಿಗೆ ಚೆಕ್ಕುಬಂಧಿ; ಪೂರ್ವಕ್ಕೆ ಸುಣ್ಣಗಾರು ಸಿದ್ದಶೆಟ್ಟಿ ಅವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸ.ನಂ.176/5 ರ ಜಮೀನು ಹಾಗೂ ದಕ್ಷಿಣಕ್ಕೆ ನಾಗೇಗೌಡರ ಜಮೀನು ಮತ್ತು ಇದೇ ಸ.ನಂ.176/5 ರಲ್ಲಿರುವ 34 ಗುಂಟೆ ವಿಸ್ತೀರ್ಣವುಳ್ಳ ಬಾಗಾಯ್ತು ಜಮೀನಿಗೆ ಚೆಕ್ಕುಬಂಧಿ; ಪೂರ್ವಕ್ಕೆ ಸ.ನಂ. 177, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಬ್ಲಾಕ್ 1 ರಲ್ಲಿರುವ ಡಿ.ಮಹೇಶ್ ಅವರ ಉಳಿಕೆ ಜಮೀನು ಹಾಗೂ ದಕ್ಷಿಣಕ್ಕೆ ನಾಗೇಗೌಡರ ಜಮೀನು.

ಕಕ್ಷಿದಾರರ ಪರ ವಕೀಲರು
ಚಂದನ್ ಕುಮಾರ್ ಅಸ್ವಾಳ್
ಬಿ.ಕಾಂ., ಎಲ್.ಎಲ್.ಬಿ.
ವಕೀಲರು ಮತ್ತು ಕಾನೂನು ಸಲಹೆಗಾರರು
2843, 4ನೇ 'ಎ' ಅಡ್ಡರಸ್ತೆ, ಶ್ರೀಕೃಷ್ಣದೇವರಾಯ ರಸ್ತೆ, 2ನೇ ಮುಖ್ಯರಸ್ತೆ, ಜಯನಗರ, ಮೈಸೂರು–570014

ದಿನಾಂಕ : 01–07–2025
ಸ್ಥಳ : ಮೈಸೂರು